# ಅಧ್ಯಯನ 10 Study X

# ನೂತನ ಸೃಷ್ಟಿಯ ದೀಕ್ಷಾಸ್ನಾನ

## THE BAPTISM OF THE NEW CREATION

**ಎರಡನೇ ಶತಮಾನದಲ್ಲಿದ್ದ ದೀಕ್ಷಾಸ್ನಾನ – ದೀಕ್ಷಾಸ್ನಾನದಲ್ಲಿ ಧಾರ್ಮಿಕ ಮಾತಾಪಿತರು – ರೋಮನ್ ಸಭೆಯ ದೀಕ್ಷಾಸ್ನಾನದ ಆಚಾರ ವಿಧಿಗಳು – ಶಿಶುಗಳ ದೀಕ್ಷಾಸ್ನಾನವನ್ನು ಯಾತಕ್ಕಾಗಿ ಜಾರಿಗೊಳಿಸಲಾಯಿತು? – ದೀಕ್ಷಾಸ್ನಾನದ ಬಗ್ಗೆ ದೇವರ ವಾಕ್ಯದ ಪುರಾವೆಗಳು – "ಡಿಸೈಪಲ್' ನವರ ದೃಷ್ಟಿಕೋನ – "ಬ್ಯಾಪ್ಟಿಸ್ಟ್‌ನವರ ದೃಷ್ಟಿಕೋನ – ನಿಜವಾದ ದೃಷ್ಟಿಕೋನ – ಕ್ರಿಸ್ತನ ಮರಣದಲ್ಲಿ ದೀಕ್ಷಾಸ್ನಾನ – "ಒಂದೇ ಆತ್ಮನ ಮೂಲಕವಾಗಿ ನಾವೆಲ್ಲರೂ ಒಂದೇ ಶರೀರವಾಗಿ ದೀಕ್ಷಾಸ್ನಾನ ಹೊಂದಿದ್ದೇವೆ" – ಬೆಂಕಿಯಲ್ಲಿ ದೀಕ್ಷಾಸ್ನಾನ – ನೀರಿನಲ್ಲಿ ಸಾಂಕೇತಿಕ ದೀಕ್ಷಾಸ್ನಾನ – ಸಾಂಕೇತಿಕ ದೀಕ್ಷಾಸ್ನಾನದ ಅಗತ್ಯವಿದೆಯೋ? – ಸಮಂಜಸವಾದ ಸಂಕೇತ – ಇದನ್ನು ಯಾರು ನೆರವೇರಿಸಬಹುದು? – ಮಾತುಗಳ ರೂಪ – ಸಂಕೇತದ ಪುನರಾವರ್ತನೆ –"ಸತ್ತವರಿಗಾಗಿ ದೀಕ್ಷಾಸ್ನಾನ" .**

ದೀಕ್ಷಾಸ್ನಾನದ ಕ್ರಮ ಮತ್ತು ಸಂಕೇತಗಳ ಬಗ್ಗೆ ಬಹಳಷ್ಟು ವ್ಯತ್ಯಾಸ ಮತ್ತು ಗೊಂದಲಕರ ಆಲೋಚನೆಗಳು ಇರುವುದಾದರೂ ಹೊಸ ಒಡಂಬಡಿಕೆಯು ನಮಗೆ ದೀಕ್ಷಾಸ್ನಾನದ ಬಗ್ಗೆ ಬೋಧಿಸುವುದಾದರೂ ಏನು ಎಂದು ಅರ್ಥಮಾಡಿಕೊಳ್ಳುವಲ್ಲಿ ಕ್ರೈಸ್ತ ಜನರೆಲ್ಲರೂ ಒಂದೇ ಘಟಕವಾಗಿದ್ದಾರೆ.

ಅಪೋಸ್ತಲರುಗಳು ಪ್ರಸ್ತಾಪಿಸಿರುವ ಹೊಸ ಒಡಂಬಡಿಕೆಯಲ್ಲಿ ವಿಶ್ವಾಸದಿಂದ ಬಿದ್ದುಹೋಗುವುದು ಎರಡನೆಯ ಶತಮಾನದ ವೇಳೆಗೆ ಸಾಕಷ್ಟು ಮುಂದುವರೆದಿದ್ದು ದೀಕ್ಷಾಸ್ನಾದ ಬಗ್ಗೆ ಮೂಢನಂಬಿಕೆಯ ದೃಷ್ಟಿಕೋನಗಳು ಸಾಮಾನ್ಯ ಸಭೆಯಲ್ಲಿ ಆ ವೇಳೆಗೆ ತಮ್ಮ ನಿಯಂತ್ರಣವನ್ನು ಸಾಧಿಸಿದ್ದವು. ನೀರಿನ ದೀಕ್ಷಾಸ್ನಾನವು ಹಿಂದಿನ ಪಾಪಗಳನ್ನೆಲ್ಲಾ ಪರಿಹರಿಸಿ ಜನರನ್ನು ದೇವರ ಅನ್ಯೋನತೆಗೆ ತರುವುದು ಮಾತ್ರವಲ್ಲದೆ ಬೇರೆ ರೀತಿಯಲ್ಲಿ ದೊರೆಯದ ಕೃಪೆ ಕರುಣೆಗಳನ್ನು ಕ್ರಿಸ್ತನ ಸಭೆಯ ಸದಸ್ಯರಿಗೆ ದೇವರಿಂದ ಉಂಟು ಮಾಡುವುದಾಗಿದೆ ಎಂದು ಭಾವಿಸಲಾಗಿತ್ತು. ಆದುದರಿಂದ ಪ್ರಾರಂಭದ ದಿನಗಳಲ್ಲಿ ನಂಬಿಗಸ್ತರು ತಾವು ದೀಕ್ಷಾಸ್ನಾನವನ್ನು ಪಡಕೊಳ್ಳುವುದಲ್ಲದೆ ಅವರ ಶಿಶುಗಳಿಗೂ ದೀಕ್ಷಾಸ್ನಾನವನ್ನು ಕೊಡಿಸುತ್ತಿದ್ದರು. ಶಿಶುಗಳು ವಿಶ್ವಾಸವಿಡುವುದಾಗಲೀ ಅಥವಾ ಒಡಂಬಡಿಕೆಯನ್ನು ಮಾಡಿಕೊಳ್ಳುವುದಾಗಲೀ ಸಾಧ್ಯವಿಲ್ಲದ ಕಾರಣ ತಂದೆ ತಾಯಿಗಳಲ್ಲದ ಇತರರನ್ನು "ಆತ್ಮೀಕ ತಂದೆತಾಯಿಗಳನ್ನಾಗಿ" ಏರ್ಪಡಿಸಿಕೊಳ್ಳುವ ವ್ಯವಸ್ಥೆ ಸಹಾ ಇತ್ತು. ಆ ಮಕ್ಕಳು ದೇವರ ಮೇಲೆ ವಿಶ್ವಾಸವಿರಿಸುತ್ತಾರೆ ಮತ್ತು ಆತನ ಮಾರ್ಗದಲ್ಲಿ ನಡೆಯುತ್ತಾರೆ ಎಂಬುದಾಗಿ ವಿಧಿಯುಕ್ತವಾಗಿ ಅವರುಗಳು ಪ್ರಮಾಣ ಮಾಡುತ್ತಿದ್ದರು ಮತ್ತು ಅವರ ಧಾರ್ಮಿಕ ಶಿಕ್ಷಣಕ್ಕೆ ತಮ್ಮನ್ನು ಬದ್ಧರನ್ನಾಗಿ ಮಾಡಿಕೊಳ್ಳುತ್ತಿದ್ದರು. ಇವರನ್ನು ಧಾರ್ಮಿಕ ತಂದೆ ಮತ್ತು ಧಾರ್ಮಿಕ ತಾಯಿ ಎಂಬುದಾಗಿ ಕರೆಯಲಾಗುತ್ತಿತ್ತು.

1. ಆ ಅವಧಿಯಲ್ಲಿ ಶಿಕ್ಷಕರು ಮತ್ತು ಕಲಿಯುವವರು ಇಬ್ಬರೂ ವಿಧಿಯುಕ್ತ ಸಂಪ್ರದಾಯಗಳಲ್ಲಿ ಮತ್ತು ಸಂಕೇತಗಳ ಮತ್ತು ಅವುಗಳ ಅರ್ಥಗಳ ಪರಿಷ್ಕರಣೆಯಲ್ಲಿ ತ್ವರಿತವಾಗಿ ಪ್ರಗತಿ ಹೊಂದಿಕೊಳ್ಳುತ್ತಿದ್ದರು. ಮೂರನೆಯ ಶತಮಾನದಲ್ಲಿ ದೇವಾಲಯಗಳ ಹೊರಗಡೆ ದೀಕ್ಷಾಸ್ನಾನದ ಉದ್ದೇಶಕ್ಕಾಗಿ ವಿಶೇಷವಾದ ದೀಕ್ಷಾಸ್ನಾನದ ತೊಟ್ಟಿಗಳನ್ನು ಕಟ್ಟಲಾಗುತ್ತಿತ್ತು. ಇವಕ್ಕೆ ಹೊರಗಿನ ದ್ವಾರಮಂಟಪಕ್ಕೆ ಹೊಂದಿಕೊಂಡಿರುವಂತೆ ಖಾಸಗಿ ಕೊಠಡಿಗಳು ಇರುತ್ತಿದ್ದವು. ಇವುಗಳು ಸಾರ್ವಜನಿಕರ ಪ್ರವೇಶಕ್ಕಾಗಿಯೇ ಇದ್ದು ಅವರ ಸಮ್ಮುಖದಲ್ಲಿಯೇ ಖಾಸಗಿಂಯಾಗಿ ದೀಕ್ಷಾಸ್ನಾನ ಪಡೆಂಯುವವರ ಪ್ರತಿಜ್ಞಾವಿಧಿಗಳನ್ನು ನೆರವೇರಿಸಲಾಗುತ್ತಿತ್ತು. ಬದಲಿಯಾಗಿ ಕಾರ್ಯ ನಿರ್ವಹಿಸುವ ಸಭಾಪಾಲಕರು(ಪಾದ್ರಿಗಳು) ಅಭ್ಯರ್ಥಿಯ ಮುಖದ ಮೇಲೆ ತಂದೆ, ಕುಮಾರ, ಪವಿತ್ರಾತ್ಮನ ಹೆಸರಿನಲ್ಲಿ ಮೂರು ಬಾರಿ ಊದುವುದರ ಮೂಲಕ ಭೂತೋಚ್ಚಾಟನೆ ಮಾಡುತ್ತಿದ್ದರು. ದೀಕ್ಷಾಸ್ನಾನ ಮಾಡಿಸುವ ನೀರನ್ನು ಅದರಲ್ಲಿರಬಹುದಾದ ದುಷ್ಟ ಶಕ್ತಿಗಳ ಉಚ್ಚಾಟನೆಯೊಟ್ಟಿಗೆ ಪ್ರತ್ಯೇಕವಾಗಿ ಒಂದು ವಿಶದವಾದ ನಿಯಮದಲ್ಲಿ ಪವಿತ್ರಗೊಳಿಸಲಾಗುತ್ತಿತ್ತು. ಹಳೆ ವ್ಯಕ್ತಿತ್ವವನ್ನು ಸಂಪೂರ್ಣವಾಗಿ ತೊರೆಯುವುದನ್ನು ಸೂಚಿಸುವ ಸಲುವಾಗಿ ಅಭ್ಯರ್ಥಿಯನ್ನು ಪೂರ್ಣವಾಗಿ ವಿವಸ್ತ್ರಗೊಳಿಸಲಾಗುತ್ತಿತ್ತು. ನಂತರ ಆತನನ್ನು ಮೂರು ಸಲ ಅಂದರೆ ಮೊದಲನೆಯ ಭಾರಿ ತಂದೆಯ ಹೆಸರಿನಲ್ಲಿ, ಎರಡನೆಯ ಭಾರಿ ಮಗನ ಹೆಸರಿನಲ್ಲಿ ಮತ್ತು ಮೂರನೆಯ ಭಾರಿ ಪವಿತ್ರಾತ್ಮನ ಹೆಸರಿನಲ್ಲಿ ನೀರಿನಲ್ಲಿ ಮುಣುಗಿಸಿ ಎತ್ತಲಾಗುತ್ತಿತ್ತು. ಆತನೂ ಇನ್ನೂ ಸಭೆಯ ಸದಸ್ಯನಲ್ಲ ಮತ್ತು ಈ ರೀತಿಯ ಪ್ರತಿಷ್ಠೆಯ ಮೂಲಕವಲ್ಲದೆ ಆತನು ಸಭೆಯ ಸದಸ್ಯನಾಗಲು ಸಾಧ್ಯವೇ ಇಲ್ಲವೆಂದು ತಿಳಿಸುವುದಕ್ಕಾಗಿ ಇವೆಲ್ಲವನ್ನೂ ದೇವಾಲಯದ ಹೊರಗಡೆಯೇ ನಡೆಸಲಾಗುತ್ತಿತ್ತು. ದೀಕ್ಷಾಸ್ನಾದ ನಂತರ ಮುಂದಿನ ಭಾನುವಾರದವರೆಗೂ ಅಭ್ಯರ್ಥಿಯು ಬಿಳಿ ಉಡುಪುಗಳನ್ನು ಮಾತ್ರವೇ ಧರಿಸಬೇಕಾಗುತ್ತಿತ್ತು. ನಂತರದ ದಿನಗಳಲ್ಲಿ ದೀಕ್ಷಾಸ್ನಾನದ ತೊಟ್ಟಿ ಮತ್ತು ದೇವಾಲಯ ಇವುಗಳಿಗಿದ್ದ ಪ್ರತ್ಯೇಕತೆಯನ್ನು ತೆಗೆದುಹಾಕಿ ಇಂತಹ ತೊಟ್ಟಿಗಳನ್ನು ದೇವಾಲಯದ ಆವರಣದಲ್ಲಿಯೇ ಕಟ್ಟಲು ಪ್ರಾರಂಭಿಸಲಾಯಿತು.

ಮೂರನೆಯ ಶತಮಾನದ ಈ ವಿಶದವಾದ ಆಚರಣೆಯನ್ನು ರೋಮನ್ ಮತ್ತು ಗ್ರೀಕ್ ಕಥೋಲಿಕರು

ಈಗಲೂ ಗಣನೀಯ ಮಟ್ಟದಲ್ಲಿ ಇಂದಿನ ದಿನಗಳ ಅಗತ್ಯಗಳಿಗೆ ತಕ್ಕ ಕೆಲವೊಂದು ಬದಲಾವಣೆಗಳೊಂದಿಗೆ ಕಾಪಾಡಿಕೊಂಡು ಬಂದಿದ್ದಾರೆ. ರೋಮನ್ ಸಭೆಯ ದೀಕ್ಷಾಸ್ನಾನದ ಅಚಾರ ವಿಧಿಗಳಲ್ಲಿ ಎಲ್ಲವುಗಳೂ ಸಾರ್ವತ್ರಿಕವಲ್ಲದಿದ್ದರೂ ಅವು ಇಂತಿವೆ :

(1) ಸಭೆಯು ಸಾಂಕೇತಿಕವಾಗಿ, ಪರಲೋಕದಿಂದ ತ್ಯಾಜ್ಯವಾದದ್ದು ಎಂದು ನಿರೂಪಿಸಲು ಮಗುವನ್ನು ಸಭೆಯ ಹೊರಾಂಗಣದಲ್ಲಿ ಹಿಡಿಯಲಾಗುವದು,

(2) ಪಿಶಾಚನನ್ನು ದೇವರಾತ್ಮನಿಂದ ಮಾತ್ರವೇ ಹೊರದೂಡಲು ಸಾಧ್ಯ ಎಂದು ಸೂಚಿಸುವಂತೆ ಸಭಾಪಾಲಕನು ಮಗುವಿನ ಮುಖದ ಮೇಲೆ ಮೂರಿ ಬಾರಿ ಊದುತ್ತಾನೆ.

(3) ಶಿಲುಬೆಯ ಗುರುತನ್ನು ಮಗುವಿನ ಹಣೆ ಮತ್ತು ಎದೆಯ ಮೇಲೆ ಮಾಡಲಾಗುವುದು.

(4) ವಿವೇಕವು ಮಗುವನ್ನು ಭ್ರಷ್ಟಾಚಾರದಿಂದ ರಕ್ಷಿಸುತ್ತದೆ ಎಂದು ಸೂಚಿಸುವ ಸಲುವಾಗಿ ಸಭಾಪಾಲಕನು ಭೂತೋಚ್ಚಾಟನೆ ಮಾಡಿದ ಉಪ್ಪನ್ನು ಮಗುವಿನ ಬಾಯೊಳಕ್ಕೆ ಹಾಕುತ್ತಾನೆ.

(5) ಮಗುವಿಗೂ ಭೂತೋಚ್ಚಾಟನೆ ಮಾಡಲಾಗುವುದು.

(6) ಸಭಾಪಾಲಕನು "ಎಫ್ಫತಾ'(ತೆರೆಯಲಿ) ಎಂದು ಹೇಳಿ ತನ್ನ ಎಂಜಲನ್ನು ಅದರ ಬಾಯಿಗೂ, ಕಿವಿಗೂ ಮುಟ್ಟಿಸುವನು.

(7) ಹಳೇ ಮನುಷ್ಯನನ್ನು ಪಕ್ಕಕ್ಕೆ ಸರಿಸುವುದನ್ನು ಸೂಚಿಸುವ ಸಲುವಾಗಿ ಮಗುವನ್ನು ವಿವಸ್ತ್ರ ಗೊಳಿಸಲಾಗುವುದು.

(8) ಸಭೆಯನ್ನು ಪ್ರತಿನಿಧಿಸುವಂತೆ ಆತನಿಗೆ ಧರ್ಮಪಿತರನ್ನು ಒದಗಿಸಲಾಗುವುದು

(9) ಪಿಶಾಚನ ಮತ್ತು ಆತನ ಕಾರ್ಯಗಳ ಪರಿತ್ಯಾಗವನ್ನು ನೆರವೇರಿಸಲಾಗುವುದು.

(10) ಆತನಿಗೆ ತೈಲಾಭಿಷೇಕ ಮಾಡಲಾಗುವುದು.

(11) ವಿಶ್ವಾಸ ಪ್ರಮಾಣವನ್ನು ನುಡಿಯಲಾಗುವುದು.

(12) ಆತನನ್ನು "ದೀಕ್ಷಾಸ್ನಾನವಾಗಬೇಕೋ?" ಎಂದು ಪ್ರಶ್ನಿಸಲಾಗುವುದು.

(13) ಆತನ ಮಾದರಿ ಮತ್ತು ರಕ್ಷಕನಾಗಿರುವಂತೆ ಅವನಿಗೆ ಒಬ್ಬ ಸಂತನ ಹೆಸರನ್ನು ನೀಡಲಾಗುವುದು.

(14) ಮೂರುಬಾರಿ ಆತನನ್ನು ನೀರಿನಲ್ಲಿ ಮುಣುಗಿಸ ಲಾಗುವುದು ಇಲ್ಲವೆ ಮೂರು ಬಾರಿ ನೀರಿನಿಂದ ಪ್ರೋಕ್ಷಿಸಲಾಗುವುದು

(15) ಆತನಿಗೆ ಶಾಂತಿಯ ಚುಂಬನವನ್ನು ನೀಡಲಾಗುವುದು

(16) ದೀಕ್ಷಾಸ್ನಾನ ಮಾಡಿಸುವ ಮೂಲಕ ಆತನು ರಾಜ ಮತ್ತು ಯಾಜಕನಾಗುತ್ತಾನೆ ಎಂದು ಸೂಚಿಸಲು ಆತನ ತಲೆಯ ಮೇಲೆ ಅಭಿಷೇಕಿಸಲಾಗುವುದು

(17) ಆತನು ಬೆಳಕಿನ ಮಗುವಾಗಿದ್ದಾನೆಂದು ಸೂಚಿಸಲು ಆತನಿಗೆ ಉರಿಯುವ ಮೇಣದ ಬತ್ತಿಯೊಂದನ್ನು ನೀಡಲಾಗುವುದು

(18) ದೀಕ್ಷಾಸ್ನಾನದ ಪವಿತ್ರತೆಯನ್ನು ತೋರಿಸುವ ಸಲುವಾಗಿ ಆತನನ್ನು ಬಿಳಿ ನಾರುಮಡಿಯಿಂದ ಹಿಡಿದುಕೊಳ್ಳಲಾಗುವುದು.

(ಈಲಿಯೆಟ್‌ನ Elliot's Delineation of Romanism Vol I p 240 ಮತ್ತು ರೋಮನ್ ಕೆಥೋಲಿಕರ Roman Catholic Catechism p 252 ಇವುಗಳನ್ನು ನೋಡಿರಿ)

ಮೇಲೆ ಹೇಳಿದ ದೀಕ್ಷಾಸಾನ್ನದ ಅಡ್ಡದಾರಿ ಕ್ರಮವನ್ನು ಸುಮಾರು 1200 ವರ್ಷಗಳವರೆಗೂ ಅಂದರೆ ಇಂದಿನ ವಿವಿಧ ಪ್ರೊಟೆಸ್ಟಾಂಟ್ ಸಂಘಟನೆಗಳು ಹುಟ್ಟಿಕೊಳ್ಳುವವರೆಗೂ ಆಚರಿಸಲಾಗುತ್ತಿತ್ತು ಕೆಲವು ಕರ್ತನ ಜನರು ನಿಸ್ಸಂಧೇಹವಾಗಿ ಸ್ವಲ್ಪಮಟ್ಟಿನ ಸ್ಪಷ್ಟವಾದ ಬೆಳಕಿನಲ್ಲಿ ಇದನ್ನು ನೋಡಿದ್ದರು. ಆದರೆ, ಅವರು ಬಹಳಷ್ಟು ಅಲ್ಪ ಪ್ರಮಾಣದಲ್ಲಿದ್ದರು ಎಂದು ನಾವು ವಿವೇಚನಾಪೂರ್ವಕವಾಗಿ ಹೇಳಬಹುದು ಮತ್ತು ಅಂಥವರ ಯಾವುದೇ ದಾಖಲೆಯೂ ಪ್ರಾಯೋಗಿಕವಾಗಿ ಇಲ್ಲವಾಗಿದೆ. ಅವರ ಭಿನ್ನಮತದ ದೃಷ್ಟಿಕೋನವು ನಮಗೆ ಚರಿತ್ರೆಯ ಪುಟಗಳಿಂದ ದೊರೆಯದಾಗಿದೆ. ಹದಿನೈದು ಮತ್ತು ಹದಿನಾರನೇ ಶತಮಾನದ ಪ್ರೊಟೆಸ್ಟಾಂಟರು ಸಹಾ ಈ ಸಂಪ್ರದಾಯಗಳನ್ನು ಬಳುವಳಿಯಾಗಿ ಪಡೆದು ಅದರಲ್ಲಿ ಭಾಗವಹಿಸಿದರು ಎಂದರೆ ಆಶ್ಚರ್ಯವೆನಿಸದು. ಅವರು ಗಣನೀಯವಾಗಿ ಅದರ ಪ್ರಭಾವಕ್ಕೆ ಒಳಗಾಗಿದ್ದರು. ಕೆಲವೊಂದು ಉಗ್ರವಾದ ಆಚರಣೆಗಳನ್ನು ತೆಗೆದುಹಾಕುವಾಗಲೂ ಅವರು ಸರ್ವಸಾಮಾನ್ಯವಾದ ದೃಷ್ಟಿಕೋನ ಮತ್ತು ಪದ್ಧತಿಗಳನ್ನು ಉಳಿಸಿಕೊಂಡರು. ಬೇರೆ ರೀತಿಯಲ್ಲಿ ಬುದ್ಧಿವಂತರಾದವರು ಸಹಾ ಒಂದು ವೇಳೆ ತಮ್ಮ ಶಿಶುಗಳು ದೀಕ್ಷಾಸ್ನಾನ ಪಡೆಯದೆ ತೀರಿಕೊಂಡರೆ ಅವುಗಳು ಪಾಪವಿಮೋಚನೆಯನ್ನು ಹೊಂದಿಕೊಳ್ಳದೇ ಇರುವುದರಿಂದಲೂ ಸಭೆಯ ಸದಸ್ಯತ್ವನ್ನು ಇನ್ನೂ ಪಡೆಯದೇ ಇರುವುದರಿಂದಲೂ ಅವುಗಳ ಶಾಶ್ವತವಾದ ಭವಿಷ್ಯದ ಗತಿಯೇನು ಎಂಬ ಮೂಢ ನಂಬಿಕೆಗೆ ತುತ್ತಾಗುವುದುಂಟು. ಈ ಅಂಧವಿಶ್ವಾಸಗಳಿಗೆ ಹೊಂದಿಕೆಯಾಗಿ, ಎಲ್ಲಾ ಪಂಥಗಳಲ್ಲಿಯೂ ಎಲ್ಲಾ ಶಕ್ತಿ, ಸವಲತ್ತು ಮತ್ತು ಅಧಿಕಾರಗಳನ್ನು ಪ್ರತಿಷ್ಠೆ ಹೊಂದದ ಸಾಮಾನ್ಯರ ಕೈಗೆ ಸಿಕ್ಕದಂತೆ ಅವುಗಳೆಲ್ಲವನ್ನು ಪುರೋಹಿತರ (ಪಾದ್ರಿವರ್ಗದ) ಕೈಗೆ ನೀಡುವ ಪ್ರಯತ್ನಗಳನ್ನು ಮಾಡಿದಾಗ್ಯೂ ಅತಿರೇಕದ ಸಂದರ್ಭಗಳಲ್ಲಿ ಅಂದರೆ ಶಿಶುವು ಜೀವದಿಂದುಳಿಯುವ ಸಾಧ್ಯತೆಗಳಿಲ್ಲದಿರುವಾಗ ಮತ್ತು ಅಂತಹ ಸಂಧರ್ಭಗಳಲ್ಲಿ ಪಾದ್ರಿಗಳು ಲಭ್ಯವಿಲ್ಲದಿರುವಾಗ ಅ ಶಿಶುವಿಗೆ ನಿತ್ಯಜೀವಕ್ಕೆ ಯಾವ ಬಾಧೆಯೂ ಆಗದಿರಲೆಂಬ ಉದ್ದೇಶದಿಂದ ಬೇರೆ ಯಾರಾದರೂ ದೀಕ್ಷಾಸ್ನಾನದ

ಕಾರ್ಯವನ್ನು ನಿರ್ವಹಿಸಬಹುದಾಗಿದೆ. ಇಂತಹ ಸಂದರ್ಭಗಳಲ್ಲಿ ದೀಕ್ಷಿತರಲ್ಲದವರು ಮಾಡಿದ ಈ ಸೇವೆಯನ್ನು ರೋಮನ್ ಮತ್ತು ಗ್ರೀಕ್ ಕ್ಯಾಥೋಲಿಕ್ ಸಭೆಗಳು ಸಹಾ ಸ್ಪಷ್ಟವಾಗಿ ಮಾನ್ಯಮಾಡುತ್ತವೆ ಆರನೆಯ ಎಡ್ವರ್ಡ್‌ರವರ ಆಡಳಿತ ಕಾಲದಲ್ಲಿ ಚರ್ಚ್ ಆಫ್ ಇಂಗ್ಲೆಂಡ್‌ನ ಧಾರ್ಮಿಕ ಅದೇಶಗಳಲ್ಲಿ ಈ ರೀತಿಯಾಗಿ ಬರೆಸಲಾಯಿತು – ಪಾದ್ರಿಗಳು ಮತ್ತು ಮೇಲ್ವಿಚಾರಕರುಗಳು ಹೆಚ್ಚಾದ ಕಾರಣ ಮತ್ತು ಅಗತ್ಯತೆಯಿಲ್ಲದೆ ತಾವು ಮನೆಯಲ್ಲಿ ದೀಕ್ಷಾಸ್ನಾನ ನೀಡುವುದಿಲ್ಲವೆಂದು ಹಲವೊಮ್ಮೆ ಬುದ್ದಿ ಮಾತುಗಳನ್ನು ಹೇಳುವುದುಂಟು; ಆದರೆ ಅಂತಹ ತೀವ್ರವಾದ ಅಗತ್ಯತೆಗಳುಂಟಾದಾಗ ಅವರು ಅದನ್ನು ಮನೆಗಳಲ್ಲಿಯೂ ನೆರವೇರಿಸಬಹುದಾಗಿದೆ.

ರೋಮನ್ ಕ್ಯಾಥೋಲಿಕ್ ಆರಾಧಾನಾ ಗ್ರಂಥದ ಪುಟ 248ರಲ್ಲಿರುವ ವಿವರಣೆಯನ್ನು ಈ ಕೆಳಗೆ ನಾವು ನೀಡುವವರಾಗಿದ್ದೇವೆ :–

"ಬಹು ಅಗತ್ಯವೂ ಪ್ರಥಮವೂ ಆದ ಸಂಸ್ಕಾರವೆಂದರೆ "ದೀಕ್ಷಾಸ್ನಾನ"(ಸ್ನಾನ ದೀಕ್ಷೆ). ಯಾಕೆಂದರೆ ಸ್ನಾನ ದೀಕ್ಷೆಯಿಲ್ಲದೆ ಬೇರೆ ಯಾವುದೇ ಸಂಸ್ಕಾರಗಳನ್ನು ನೀಡುವಂತಿಲ್ಲ ಮತ್ತು ಸ್ನಾನದೀಕ್ಷೆ ಹೊಂದದೆ ಯಾರಿಗೂ ರಕ್ಷಣೆಯಿಲ್ಲ. ಸ್ನಾನದೀಕ್ಷೆ ಹೊಂದಿಕೊಳ್ಳುವಾಗ ಮೂಲ ಪಾಪವೂ ಮತ್ತು ನಂತರದಲ್ಲಿ ಎಸಗಿದ ಎಲ್ಲಾ ಪಾಪಗಳೂ ಕ್ಷಮಿಸಲ್ಪಡುತ್ತವೆ. ಐಹಿಕ ಮತ್ತು ನಿತ್ಯವಾದ ಶಿಕ್ಷೆಯು ಸ್ನಾನದೀಕ್ಷೆಯಿಂದ ಪರಿಹಾರವಾಗುತ್ತವೆ. ದೀಕ್ಷಾಸ್ನಾನದಿಂದ ನಾವುಗಳು ನಮ್ಮ ಪಾಪಗಳಿಂದ ಶುದ್ಧಿಹೊಂದಿಕೊಳ್ಳುವುದು ಮಾತ್ರವಲ್ಲ ಆತ್ಮೀಕ ರೀತಿಯ ಮಾರ್ಪಾಡನ್ನು ಹೊಂದಿಕೊಳ್ಳುತ್ತೇವೆ, ಪವಿತ್ರರಾಗಿ ದೇವರ ಮಕ್ಕಳೂ, ಪರಲೋಕ ರಾಜ್ಯದ ಬಾಧ್ಯಸ್ತರೂ ಆಗುತ್ತೇವೆ." ಲೂಥರನ್ ಸಭೆ ಸಹಾ ಈ ವಿಷಯಗಳಲ್ಲಿ ಇದೇ ರೀತಿಯ ಹೇಳಿಕೆಗಳನ್ನು ನೀಡುವುದಾಗಿದೆ.

ಚರ್ಚ್ ಆಫ್ ಇಂಗ್ಲೆಂಡ್‌ನಲ್ಲಿ ಸ್ವಲ್ಪ ಬದಲಾವಣೆಯ ವಿಧಿಗಳಿದ್ದಾಗ್ಯೂ, ಶಿಶುಗಳ ದೀಕ್ಷಾಸ್ನಾನಕ್ಕೆ ಅದೇ ರೀತಿಯ ಮಹತ್ವವನ್ನು ನೀಡಲಾಗಿದೆ. ಹುದುವಾದ ಆರಾಧನಾಕ್ರಮದಲ್ಲಿನ ಕೆಲವೊಂದು ತುಣುಕುಗಳು ಇಂತಿವೆ :

"ಈ ನೀರನ್ನು ಪವಿತ್ರಗೊಳಿಸಿ ಇದು ಪಾಪವಿಶುದ್ಧಿಯ ಸಂಕೇತವಾಗುವಂತೆಯೂ, ಇದರಲ್ಲಿ ಸ್ನಾನ ಹೊಂದುವ ಮಕ್ಕಳು ನಿನ್ನ ಸಂಪೂರ್ಣವಾದ ಕೃಪೆಯನ್ನು ಹೊಂದಿದವರಾಗಿ ನೀನು ಆಯ್ದುಕೊಂಡ ವಿಶ್ವಾಸಿಗಳ ಭಕ್ತಮಂಡಲಿಯಲ್ಲಿ ಸದಾಕಾಲ ನೆಲೆಗೊಳ್ಳಲಿ"

"ನಾವು ಈ ಮಗುವನ್ನು ಕ್ರಿಸ್ತನ ಮಂದೆಯಾಗಿರುವ ಸಭೆಯಲ್ಲಿ ಸೇರಿಸಿಕೊಂಡಿದ್ದೇವೆ ಮತ್ತು ಇದನ್ನು ಶಿಲುಬೆಯ ಗುರುತಿನಿಂದ ಮುದ್ರಿಸುತ್ತೇವೆ"

"ಪ್ರಿಯ ಸಹೋದರರೇ, ಈ ಮಗುವು ಹೊಸ ಜೀವಹೊಂದಿ, ಕ್ರಿಸ್ತನ ದೇಹವಾದ ಸಭೆಗೆ ಸೇರಿಸಲ್ಪಟ್ಟಿದೆ. ಈ ಮಹೋಪಕಾರಗಳಿಗಾಗಿ ನಾವು ಸರ್ವಶಕ್ತನಾದ ದೇವರಿಗೆ ಸ್ತೋತ್ರ ಸಲ್ಲಿಸೋಣ"

"ಕರುಣಾಳುವಾದ ತಂದೆಯೇ, ಈ ಶಿಶುವನ್ನು ನಿನ್ನ ಪವಿತ್ರಾತ್ಮನಿಂದ ಪುನರ್ಜೀವಿಸಮಾಡಿರುವುದಕ್ಕಾಗಿ ನಿನಗೆ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ. "

ಪ್ರೆಸ್ಬಿಟೇರಿಯನ್ ದೃಷ್ಟಿಕೋನವು ಸ್ವಲ್ಪ ಕಡಿಮೆ ಹಿಡಿತವಿಲ್ಲದ್ದಾಗಿದೆ. ವೆಸ್ಟ್ ಮಿನಿಸ್ಟರ್ ಅರಿಕೆಯ 28ನೇ ವಿಭಾಗದಲ್ಲಿ ಈ ರೀತಿಯಾಗಿದೆ :– "ದೀಕ್ಷಾಸ್ನಾನವು ಒಂದು ಸಂಸ್ಕಾರವಾಗಿದೆ... ಕೃಪಾ ಒಡಂಬಡಿಕೆಯ ಮತ್ತು ಕ್ರಿಸ್ತನಲ್ಲಿ ನೆಲೆಗೊಳ್ಳುವುದರ ಮತ್ತು ಪುನರ್ಜೀವ ಹೊಂದಿಕೊಳ್ಳುವುದರ ಸಂಕೇತವೂ ಮುದ್ರೆಯೂ ಆಗಿದೆ." ಮುಂತಾಗಿ "ಇದು ಕೇವಲ ಶಿಶುವಿನ ತಂದೆತಾಯಿಗಳಿಬ್ಬರೂ ಅಥವಾ ಅವರಲ್ಲಿ ಒಬ್ಬರಾದರೂ ಕ್ರೈಸ್ತರಾಗಿದ್ದಾಗ ಮಾತ್ರ ಅನ್ವಯವಾಗುತ್ತದೆ. ಆದರೆ ಇತರ ಶಿಶುಗಳಿಗೆ ಅನ್ವಯಿಸುವುದಿಲ್ಲ. ಈ ಸುಗ್ರೀವಾಜ್ಞೆಯನ್ನು ಉಲ್ಲಂಘಿಸುವುದು ಅಥವಾ ನಿರ್ಲಕ್ಷಿಸುವುದು ಮಹಾ ಪಾಪವಾದಾಗ್ಯೂ ಯಾವ ವ್ಯಕ್ತಿಯೂ ಇದಿಲ್ಲದೆ ಹೊಸಜೀವ ಮತ್ತು ರಕ್ಷಣೆಯನ್ನು ಹೊಂದಿಕೊಳ್ಳಲಾಗದ ರೀತಿಯಲ್ಲಿ ಕೃಪೆ ಮತ್ತು ರಕ್ಷಣೆಯನ್ನು ಪ್ರತ್ಯೇಕಿಸಲಾಗದಂತೆ ಕೂಡಿಕೊಂಡಿರುವಾಗ ಯಾವ ವ್ಯಕ್ತಿಯೂ ದೀಕ್ಷಾಸ್ನಾನವಿಲ್ಲದೆ ಪುನರ್ಜೀವ ಹೊಂದಲಾರ ಅಥವಾ ದೀಕ್ಷಾಸ್ನಾನ ಪಡಕೊಂಡವರೆಲ್ಲರೂ ನಿಸ್ಸಂಧೇಹವಾಗಿ ಹೊಸ ಜೀವಿತವನ್ನು ಹೊಂದಿಕೊಂಡಿದ್ದಾರೆ ಎಂಬುದೂ ಅಲ್ಲ" ಎಂದು ಅದು ಪ್ರಕಟಿಸುತ್ತದೆ.

ಸ್ನಾನದೀಕ್ಷೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡದೆ ಪ್ರೆಸ್ಬಿಟೇರಿಯನ್ ಸಭೆಯ ನಿಯಮಗಳು ಸಭಾಪಾಲಕರಲ್ಲದೆ ಬೇರೆ ಯಾರೂ ಇದನ್ನು ನಡಿಸಕೂಡದು ಎಂಬ ನಿರ್ಭಂಧ ವಿಧಿಸುತ್ತದೆ. ಆದರೆ ಈ ವಿಧಿಯನ್ನು ಅರಿಯದೇ ಇರುವವರು ಸ್ನಾನದೀಕ್ಷೆಗೆ ಹೆಚ್ಚಿನ ಮಹತ್ವ ನೀಡುವುದನ್ನು ಅನುಸರಿಸಿ ಪ್ರೆಸ್ಬಿಟೇರಿಯನ್‌ಗಳು ಮತ್ತಿತರರು ದೀಕ್ಷಾಸ್ನಾನ ಪಡಕೊಳ್ಳದೆ ಮರಣಿಸುವ ತಮ್ಮ ಶಿಶುಗಳ ಬಗ್ಗೆ ಅಂಜಿಕೊಳ್ಳುತ್ತಾರೆ. ಮೆಥೋಡಿಸ್ಟರು ಸಂಯುಕ್ತ ಅಮೇರಿಕಾ ರಾಜ್ಯದ ಬಿಷೋಪ್ ಆಡಳಿತಕ್ಕೆ ಸೇರಿದ ಪ್ರೊಟೆಸ್ಟಾಂಟರು ಮತ್ತು ಬಹಳಷ್ಟು ಆಧುನಿಕ ಸಂಸ್ಥೆಗಳು ಶಿಶುಗಳ ದೀಕ್ಷಾಸ್ನಾನದ ಪ್ರಾಮುಖ್ಯತೆಯ ಬಗ್ಗೆ ಮೇಲೆ ಹೇಳಿದ ಸುಧಾರಿತ ದೃಷ್ಟಿಕೋನವನ್ನು ಒಪ್ಪಿಕೊಳ್ಳುತ್ತಾರೆ.

ಇದಕ್ಕೆ ಉದಾಹರಣೆಯಾಗಿ ಒಂದು ಸಣ್ಣ ಕಥೆ ಹೀಗಿದೆ. ಒಬ್ಬ ವೈದ್ಯನನ್ನು ಮಧ್ಯರಾತ್ರಿ ಮರಣಾವಸ್ಥೆಯಲ್ಲಿದ್ದ ಒಂದು ಶಿಶುವಿನ ಆರೈಕೆಗಾಗಿ ಕರೆಸಲಾಗಿತ್ತು. ಆತನು ಅದೇ ಸಮಯದಲ್ಲಿ ಹೇಳಿ ಕಳುಹಿಸಿದ್ದ ಪಾದ್ರಿಗಿಂತ ಸ್ವಲ್ಪ ಮುಂಚೆ ಅಲ್ಲಿಗೆ ತಲುಪಿದನು. ಆದರೆ ಆಗ ಸಮಯವು ಮೀರಿಹೋಗಿದ್ದು ಆ ವೈದ್ಯನು ಏನೂ ಮಾಡಲಾಗದೆ ಪಕ್ಕಕ್ಕೆ ಸರಿದನು. ಅಷ್ಟರಲ್ಲಿ ಅಲ್ಲಿಗೆ ಬಂದ ಪಾದ್ರಿಯು ಒಂದು ಸಣ್ಣ ಪಾತ್ರೆಯಲ್ಲಿ ನೀರನ್ನು ತೆಗೆದುಕೊಂಡು ಆ ಮಗುವಿನ ಮುಖದ ಮೇಲೆ ಕೆಲವು ಹನಿಗಳನ್ನು ಪ್ರೋಕ್ಷಿಸಿ "ತಂದೆ, ಕುಮಾರ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ನಾನು ನಿನಗೆ

ದೀಕ್ಷಾಸ್ನಾನ ಕೊಡುತ್ತೇನೆ" ಎಂದು ಹೇಳಿದನು. ಕೆಲವು ಕ್ಷಣಗಳಲ್ಲಿಯೇ ಆ ಮಗುವು ತೀರಿಕೊಂಡಿತು. ನಂತರ ಆ ವೈದ್ಯರು ಮತ್ತು ಪುರೋಹಿತರು ಒಟ್ಟಿಗೆ ಆ ಮನೆಯಿಂದ ಹೊರಟರು. ದಾರಿಯಲ್ಲಿ ವೈದ್ಯರು ಪಾದ್ರಿಗೆ " ನೀವು ಸಮಯಕ್ಕೆ ಸರಿಯಾಗಿ ತಲುಪಿದಿರಿ. ಒಂದೆರಡು ನಿಮಿಷ ತಡವಾಗಿದ್ದರೂ ಸಮಯ ಮೀರಿಹೋಗುತ್ತಿತ್ತು. ನೀವು ಯಾವ ಪಾದರಕ್ಷೆಗಳನ್ನು ಬಳಸುತ್ತೀರಿ?" ಎಂದು ಪ್ರಶ್ನಿಸಿದನು. ಅದಕ್ಕೆ ಉತ್ತರವಾಗಿ ಆ ಪಾದ್ರಿಯು "ಕಾಂಗ್ರೆಸ್ ಗೈಟರ್ಸ್" ಎಂದು ಉತ್ತರಿಸಿದರು. "ಹೋ! ಎಷ್ಟು ಅದೃಷ್ಟ, ನೀವೇನಾದರೂ ಲೇಸ್ ಕಟ್ಟುವ ಷೂಗಳನ್ನು ಧರಿಸಿದ್ದರೆ ಸಮಯಕ್ಕೆ ತಲುಪಲಾಗುತ್ತಿದ್ದಿಲ್ಲ. ಹಾಗಾದಲ್ಲಿ ಆ ಶಿಶುವಿನ ಗತಿ ಶೋಚನೀಯವಾಗುತ್ತಿತ್ತು" ಎಂದು ಆ ವೈದ್ಯರು ಉದ್ಗರಿಸಿದರು!

ಹೌದು, ಎಷ್ಟೋ ತಿಳುವಳಿಕೆಯುಳ್ಳ ಹೆಚ್ಚಿನ ಕ್ರೈಸ್ತರು ಇಂತಹ ಅಸತ್ಯವಾದ ಸಂಗತಿಗಳನ್ನು ಅಂದರೆ ದೇವರು ದೀಕ್ಷಾಸ್ನಾನ ಪಡಕೊಳ್ಳದ ಚಿಕ್ಕ ಮಕ್ಕಳನ್ನು ಸೈತಾನನ ವಶಕ್ಕೆ, ನಿತ್ಯವಾದ ಯಾತನೆಗೆ ಮತ್ತು ಕೆಡುಕಿಗೆ ಒಪ್ಪಿಸುತ್ತಾನೆ ಎಂಬ ಅಂಧಶ್ರದ್ಧೆಯ ಆಲೋಚನೆಗಳನ್ನು ನಿರಾಕರಿಸುತ್ತಾರೆ. ಆದಾಗ್ಯೂ, ಇಂತಹ ಬಹಳಷ್ಟು ಜನರೇ ತಮ್ಮ ಮಕ್ಕಳಲ್ಲಿ ಯಾರಾದರೂ ದೀಕ್ಷಾಸ್ನಾನ ಪಡಕೊಳ್ಳದೆ ತೀರಿಕೊಂಡಲ್ಲಿ ವ್ಯಾಕುಲತೆಯನ್ನು ಪ್ರಕಟಿಸುತ್ತಾರೆ!. ಹೆಚ್ಚಾದ ಅವಿದ್ಯಾವಂತರಲ್ಲಿ ಕೆಲವರು ಈ ಸಂಸ್ಕಾರದ ಅಗತ್ಯತೆಯ ಬಗ್ಗೆ ಮತ್ತು ಇದು ತಪ್ಪಿಹೋದಲ್ಲಿ ಉಂಟಾಗಬಹುದಾದ ಯಾತನೆಯ ಪರಿಣಾಮಗಳ ಬಗ್ಗೆ ಸಕರಾತ್ಮಕವಾದ ನಂಬಿಕೆ ಹೊಂದಿರುತ್ತಾರೆ. ನಮಗೆ ಶತಮಾನಗಳ ಅಂಧಕಾರದ ಯುಗದಿಂದ ಬಂದ ಇಂತಹ ಅಸತ್ಯದ ಪ್ರಭಾವವು ಅಷ್ಟು ಪ್ರಭಲವಾಗಿದೆ.

ದೀಕ್ಷಾಸ್ನಾನದ ಅಗತ್ಯತೆ ಮತ್ತು ಪರಿಣಾಮಾತ್ಮಕ ಶಕ್ತಿಯ ಬಗ್ಗೆ ಇಂತಹ ತಪ್ಪಾದ ಪಾಕೃತಿಕ ದೃಷ್ಟಿಕೋನದ ನಿದರ್ಶನಗಳು ಎರಡನೆಯ ಶತಮಾನ ಕಾಲದಲ್ಲಿಯೇ ಹೆಚ್ಚುತ್ತಾ ಬಂತೆಂದು ನಮಗೆ Hagenbach'¸s History of Doctrines 72 ಇದರಲ್ಲಿ ಕಂಡುಬರುತ್ತದೆ. ನಂತರ ಕಾನ್ಸ್‌ಟಂಟೈನ್ ಎಂಬಾತನ ಕಾಲದಲ್ಲಿ ದೀಕ್ಷಾಸ್ನಾನಕ್ಕೆ ಭವಿಷ್ಯದ ಪಾಪಗಳನ್ನು ಹೊರತುಪಡಿಸಿ ಪೂರ್ವದ ಎಲ್ಲಾ ಪಾಪಗಳನ್ನು ನಿವಾರಣೆ ಮಾಡುವ ಮಾಂತ್ರಿಕ ಶಕ್ತಿಯಿದೆ, ಇದನ್ನು ಮರಣಹೊಂದುವ ಸಾಧ್ಯತೆಯ ಮುಂಚಿನ ಕನಿಷ್ಟ ಒಂದು ಘಂಟೆಯವರೆಗೂ ವಿಸ್ತರಿಸಬಹುದೆಂಬ ಅಭಿಪ್ರಾಯ ವ್ಯಕ್ತವಾಗಿ ಇದು Tertullian (De Bapt c 18) ಎಂಬಾತನಿಂದ ಪುರಸ್ಕರಿಸಲಟ್ಟಿತು. ಇನ್ನೂ ನಂತರದಲ್ಲಿ ವಿಪರೀತವಾದ ತೈಲಲೇಪನವು ಸಾಯುವವರನ್ನು ಸಂತೈಸುವುದಾಯಿತು. ಆದಷ್ಟು ಬೇಗ ದೇವಾಲಯವನ್ನು ಪ್ರವೇಶಿಸುವ ಪ್ರಯತ್ನವನ್ನು ಮಾಡಲಾಗುತ್ತಿತ್ತು. ಸಂತ ಅಗಸ್ಟಿನ್ ಎಂಬುವವರು "ಸಭೆಯ ಹೊರಗಡೆ ಯಾವ ರಕ್ಷಣೆಯೂ ದೊರಕದು" ಎಂಬ ಅಭಿಪ್ರಾಯದೊಡನೆ ಈ ಸಿದ್ಧಾಂತವನ್ನು ಸುಧಾರಣೆಗೊಳಿಸಿದರು. ಇದರ ಪರಿಣಾಮವಾಗಿ ಸಭೆಯ ಸದಸ್ಯತ್ವ ಪಡೆಯದ ಹೊರತು ಶಿಶುಗಳು ನಷ್ಟಗೊಳ್ಳುತ್ತವೆ ಎಂಬ ಬೋಧನೆಗಳು ಹುಟ್ಟಿಕೊಂಡವು. ಅಂದಿನಿಂದ ಶಿಶುಗಳ ದೀಕ್ಷಾಸ್ನಾನ ಮತ್ತು ಆ ಸಿದ್ಧಾಂತವು ಆರಂಭವಾಯಿತು. ಮೊದಲಿನಿಂದಲೂ ಚರ್ಚಿಯಾನಿಟಿ ಉತ್ಸಾಹವು ತನ್ನ ಸಂಖ್ಯೆ ಮತ್ತು ಪ್ರಭಾವಗಳನ್ನು ಹೆಚ್ಚಿಸಿಕೊಳ್ಳುವುದಕ್ಕಿಂತ ಬೇರೆ ಯಾವುದರಲ್ಲಿಯೂ ಸ್ಥಗಿತಗೊಳ್ಳದ್ದಾಗಿತ್ತು. ಈ ರೀತಿಯಲ್ಲಿ ನಮ್ಮ ಸೃಷ್ಟಿಕರ್ತನ ಗುಣಲಕ್ಷಣ ಮತ್ತು ಆಡಳಿತವನ್ನು ಮಲಿನಗೊಳಿಸಲಾಯಿತು ಮತ್ತು ಆತನ ವಾಕ್ಯದ ಸಾಕ್ಷ್ಯವನ್ನು ನಿರರ್ಥಕಗೊಳಿಸಲಾಯಿತು ಮತ್ತು ನಿಜವಾದ ಕ್ರೈಸ್ತತ್ವವೆಂಬ ಗೋಧಿಗೆ ಕೆಡುಕನ ಹಣಜಿಯ ಬಿತ್ತನೆಯಿಂದ ಹಾನಿಯುಂಟಾಯಿತು.

## ಶಿಶು ದೀಕ್ಷಾಸ್ನಾನವನ್ನು ಕೆಲವರು ತಿರಸ್ಕರಿಸಿದರು
## Infant Baptism Repudiated by Some

ದೀಕ್ಷಾಸ್ನಾನವು ವಿಶ್ವಾಸಿಗಳ ನಂಬಿಕೆಯ ನಿಯಮವಾಗಿದೆ ಮತ್ತು ಒಬ್ಬ ವ್ಯಕ್ತಿಯು ಮತ್ತೊಬ್ಬ ವ್ಯಕ್ತಿಯ ಪರವಾಗಿ ನಂಬಿಗಸ್ತನಾಗಲಾರನು ಎಂದು ಗ್ರಹಿಸಿದವರು ಶಿಶುಗಳ ದೀಕ್ಷಾಸ್ನಾನವು ದೇವರ ವಾಕ್ಯಕ್ಕೆ ಅನುಸಾರುವಾದುದಲ್ಲ ಎಂಬ ಕಾರಣದಿಂದ ಅದನ್ನು ಪರಿತ್ಯಜಿಸಿದರು. ಮೇಲಾಗಿ ಈ ಜನರು ನಮ್ಮ ಕರ್ತನು ಮತ್ತು ಅಪೋಸ್ತಲರು ವಿಧಿಸಿದ ದೀಕ್ಷಾಸ್ನಾನವು ಮುಣುಗು ದೀಕ್ಷಾಸ್ನಾನವಲ್ಲದೆ ಬೇರೆ ಯಾವುದೂ ಅಲ್ಲ ಎಂಬುದನ್ನು ಸಾಮಾನ್ಯವಾಗಿ ಎತ್ತಿಹಿಡಿದರು. ದೀಕ್ಷಾಸ್ನಾನವನ್ನು ಸೂಚಿಸುವ ಗ್ರೀಕ್ ಪದ 'Baptizo' ಎಂಬುದು ಆವರಿಸಿಕೊಳ್ಳು ಅಥವಾ ಮುಳುಗಿಸು ಅಥವಾ ಸಂಪೂರ್ಣವಾಗಿ ಒದ್ದೆಮಾಡು ಎಂಬ ಅರ್ಥಗಳನ್ನು ಸೂಚಿಸುತ್ತದೆ. ಪ್ರೋಕ್ಷಣೆ, ಅಥವಾ ಹೊಯ್ಯುವುದು ಅಥವಾ ಮಳೆಯಂತೆ ಸುರಿಯುವುದು ಎಂಬುದಕ್ಕೆ ಗ್ರೀಕ್ ಭಾಷೆಯಲ್ಲಿ ಬೇರೆ ಪದಗಳನ್ನು ಉಪಯೋಗಿಸುವುದುಂಟು. ಮುಣುಗಿಸುವ ವಿಧಾನವನ್ನು ಅನುಸರಿಸುವ ವಿಶ್ವಾಸಿಗಳು ಸಾಮಾನ್ಯವಾಗಿ ಒಂದು ವಿಧಾನವನ್ನು ಅಂದರೆ ಹಿಂದಕ್ಕೆ ಒಂದೇ ಭಾರಿ ತಂದೆ, ಕುಮಾರ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ ಮುಣುಗಿಸುವರು. ಕೆಲವರು ತಲೆ ಮುಂದಾಗಿ ಮೂರು ಭಾರಿ ಅಂದರೆ ಒಮ್ಮೆ ತಂದೆಯ, ಮತ್ತೊಮ್ಮೆ ಮಗನ ಮತ್ತು ಇನ್ನೊಮ್ಮೆ ಪವಿತ್ರಾತ್ಮನ ಹೆಸರಿನಲ್ಲಿ ಮುಣುಗಿಸುವುದೂ ಉಂಟು. ಎರಡನೆ ವಿಧಾನವನ್ನು ಅನುಸರಿಸುವವರ ವಿವರಣೆ ಏನೆಂದರೆ ಕ್ರಿಸ್ತನು ಮುಂದಕ್ಕೆ ತಲೆಬಾಗಿ ಸತ್ತನು ಆದುದರಿಂದ ಆತನ ಅನುಯಾಯಿಗಳನ್ನು ಅದರಂತೆ ತಲೆ ಮುಂದಾಗಿ ಮುಳುಗಿಸಬೇಕು ಎಂಬುದು. ಕಿಸ್ತನನ್ನು ತಲೆಬಾಗಿದ ಸ್ಥಿತಿಯಲ್ಲಿಯೇ ಹೂಣಿಡಲಿಲ್ಲ ಮತ್ತು ತಂದೆಯಾಗಲೀ ಪವಿತ್ರಾತ್ಮನಾಗಲೀ ಸಾಯಲೂ ಇಲ್ಲ, ಅವರನ್ನು ಹೂಣಿಡಲೂ ಇಲ್ಲ, ಆದುದರಿಂದ ಅಂಥಹ ಸಂಕೇತಗಳು ಸಂಪೂರ್ಣವಾಗಿ ಸಮಂಜಸವಾದುವುಗಳಲ್ಲ ಎಂಬುದು ಬಹುಶಃ ನಮ್ಮ ಈ ಕ್ರೈಸ್ತ ಸ್ನೇಹಿತರುಗಳಿಗೆ ಹೊಳೆಯಲೇ ಇಲ್ಲ! ತಂದೆ, ಮಗ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ ಎಂಬ ಮಾತುಗಳ ಭಾವವು ಯುಕ್ತವಾಗಿ– "ತಂದೆ, ಮಗ ಹಾಗೂ ಪರಿಶುದ್ಧಾತ್ಮನ ಅಧಿಕಾರದ ಮೇರೆಗೆ" – ಅಂದರೆ ತಂದೆ, ಮಗ ಮತ್ತು ಪರಿಶುದ್ಧಾತ್ಮ ಇವರುಗಳು ವಿಶ್ವಾಸಿಗಳ ದೀಕ್ಷಾಸ್ನಾನದ ನಿಯಮವನ್ನು ಸಮ್ಮತಿಸುವವರಾಗಿದ್ದಾರೆ ಎಂಬರ್ಥ ನಿಡುವುದಾಗಿದೆ.

ತಲೆಯನ್ನು ಹಿಂದಕ್ಕೆ ಬಾಗಿಸಿ ಸ್ನಾನ ದೀಕ್ಷೆನೀಡುವವರಲ್ಲಿ ಎರಡು ದೊಡ್ಡ ಪಂಥಗಳಿವೆ. ಅವುಗಳೆಂದರೆ 'Baptists' ಮತ್ತು 'Disciples' ಇವರುಗಳು ಈ ದೀಕ್ಷೆಯನ್ನು ಅದರ ಭಾವನೆ ಮತ್ತು ಫಲಿತಾಂಶಗಳಿಗೆ ಬೆಲೆಕೊಟ್ಟು ಭಿನ್ನವಾದ ಮನೋಭಾವದೊಡನೆ ಆಚರಿಸುತ್ತಾರೆ. ತಮ್ಮನ್ನು "ಕ್ರೈಸ್ತರು' ಎಂದು ಕರೆದುಕೊಳ್ಳುವ (ಕೆಲವೊಮ್ಮೆ ಅವರ ಸಮ್ಮತಿಯಿಲ್ಲದೆಯೇ Campbellites' ಎಂದು ಗುರುತಿಸಲ್ಪಡುವ) ಈ 'Disciples' ಗಳ ಪ್ರಕಾರ ದೀಕ್ಷಾಸ್ನಾನವೆಂಬುದು ಪಾಪಗಳ ಪರಿಹಾರಕ್ಕಾಗಿ ಮತ್ತು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಹೊಂದದೇ ಇರುವವರು ತಮ್ಮ ತಮ್ಮ ಪಾಪಗಳಲ್ಲಿಯೇ ಇದ್ದು ಇನ್ನೂ ದೇವರ ಕೋಪಕ್ಕೆ ಗುರಿಯಾದ ಮಕ್ಕಳಾಗಿಯೇ ಇದ್ದಾರೆ. ಇಂತಹ ದೃಷ್ಟಿಕೋನವು ಯಾವುದೇ ರೀತಿಯಲ್ಲಿ ಅರ್ಥಮಾಡಿಕೊಂಡರೂ ಶಿಶುಗಳನ್ನು ಹೊರತುಪಡಿಸಿ (ಇವರ ಮೂಲಪಾಪವನ್ನು ಗಣನೆಗೆ ತೆಗೆದುಕೊಳ್ಳಲಾಗದು) ಮಾನವ ಕುಲದ ಹೆಚ್ಚಿನವರನ್ನು ಅಂದರೆ ಮೆಥೋಡಿಸ್ಟರು, ಪ್ರೆಸ್ಬಿಟೇರಿಯನ್ನರು, ಯುನೈಟೆಡ್ ಪ್ರೆಸ್ಬಿಟೇರಿಯನ್ನರು ಲೂಥರನ್ನರು, ಎಪಿಸ್ಕೋಪಾಲಿಯನ್ನರು, ರೋಮನ್ ಕ್ಯಾಥೋಲಿಕರು, ಗ್ರೀಕ್ ಕ್ಯಾಥೊಲಿಕರು ಇವರೇ ಮುಂತಾದ ಇನ್ನೂ ಅನೇಕರನ್ನು ತೊಡೆದುಹಾಕುತ್ತದೆ. ಇವರುಗಳನ್ನು ಪಾಪಿಗಳು, ದೇವರ ಮುಂದೆ ಅನೀತಿವಂತರು ಮತ್ತು ದೇವರ ಕೋಪಕ್ಕೆ ತುತ್ತಾಗುವವರು ಎಂದು ಗುರುತಿಸಲಾಗುವುದು. 'Disciples' ಒಳಗೊಂಡು ಎಲ್ಲರೂ ಇದನ್ನು ನಿತ್ಯವಾದ ನರಕಯಾತನೆಗೆ ಹೋಗುವರೆಂದು ಎಣಿಸುತ್ತಾರೆ.

ಕೇವಲ ಮಾತುಗಳಲ್ಲಿ ಮಾತ್ರವೇ ಅಲ್ಲದೆ, ಕ್ರಿಸ್ತನ ಅನುಯಾಯಿಗಳ ಬೃಹತ್ ಸಂಖ್ಯೆಯವರ ಬಗ್ಗೆ ಈ ರೀತಿಯಾಗಿ ಆಲೋಚಿಸುವುದು ಬಹು ಕಷ್ಟಕರ. ನಮ್ಮ 'Disciples' ಸ್ನೇಹಿತರಿಗೆ ಪ್ರಸ್ತಾಪದ ತರ್ಕವು ಸ್ಪಷ್ಟವಾಗಿರುವುದಾದರೂ ಇಂತಹ ಉಗ್ರವಾದ ಹೇಳಿಕೆಯ ಬಗ್ಗೆ ಪ್ರಶ್ನೆಗಳನ್ನು ಎದುರಿಸಲು ಸಾಮಾನ್ಯವಾಗಿ ಹಿಂದೇಟು ಹಾಕುವುದು ನಮಗೆ ಆಶ್ಚರ್ಯವೆನಿಸದು. ಇದು ದೀಕ್ಷಾಸ್ನಾನದ ಸರಿಯಾದ ದೃಷ್ಟಿಕೋನವೆಂದು ನಾವು ಒಪ್ಪಿಕೊಳ್ಳುವುದಿಲ್ಲ. ನಮಗೆ ಇದು ದೇವರ ವಾಕ್ಯಕ್ಕೆ ಅನುಸಾರವಾಗಿಯಾಗಲೀ, ವಿವೇಚನೆಯುಳ್ಳದ್ದಾಗಿಯಾಗಲೀ ಕಂಡುಬರುವುದಿಲ್ಲ. ನಮ್ಮ ಕರ್ತನು ತಿಳಿವಳಿಕೆಯ ಮೇಲೆ ಅಥವಾ ಯಾವುದೇ ಅಂತಹ ಆಚರಣೆಗಳಿಗೆ ವಿಧೇಯರಾಗುವುದರ ಮೇಲೆ ಆತುಕೊಂಡು ನಮ್ಮ ಜನಾಂಗದ ನಿತ್ಯವಾದ ಕಲ್ಯಾಣವನ್ನು ಸ್ಥಾಪಿಸಲಿಲ್ಲ. ಆದಾಗ್ಯೂ ನಮ್ಮ Disciples' ಸ್ನೇಹಿತರು ಕೆಲವೊಂದು ದೇವರ ವಾಕ್ಯದ ಆಧಾರದ ಮೇರೆಗೆ ತಮ್ಮನ್ನು ಸಮರ್ಥಿಸಿಕೊಳ್ಳುವುದನ್ನು ನಾವು ಅಲಕ್ಷಿಸಲಾಗದು. ಅವುಗಳೆಂದರೆ, ಸ್ನಾನಿಕನಾದ ಯೋಹಾನನು ಪಶ್ಚಾತ್ತಾಪ ಮತ್ತು ಪಾಪಪರಿಹಾರ ಇವುಗಳ ಬಗ್ಗೆ ನೀಡಿದ ಬೋಧನೆಗಳು, ಪಂಚಾಶತ್ತಮ ದಿನದಂದು ಅಪೋಸ್ತಲರುಗಳು ಯೆಹೂದ್ಯರಿಗೆ ಪಾಪಗಳಿಗಾಗಿ ಪಶ್ಚಾತ್ತಾಪಪಡಲೂ, ಕ್ರಿಸ್ತನ ಹೆಸರಲ್ಲಿ ತಮ್ಮ ಪಾಪಗಳನ್ನು ತೊಳೆದುಕೊಳ್ಳಲು ನೀಡಿದ ಪ್ರಭೋದನೆಗಳು ಮುಂತಾದವುಗಳು (ಮತ್ತಾಯ 3:6, ಯೋಹಾನ 4:1,2 ಮತ್ತು ಅ. ಕೃ. 2:38.41). ಸೂಕ್ತ ಸಮಯದಲ್ಲಿ ನಾವೂ ಈ ವಾಕ್ಯಭಾಗಗಳ ಬಗ್ಗೆ ಪರಿಗಣಿಸಲಿದ್ದು ಯಾಕೆ ಮತ್ತು ಹೇಗೆ ಇವುಗಳು ಯೆಹೂದ್ಯರಿಗೆ ಮಾತ್ರವೇ ಅನ್ವಯಿಸುವುದಾಗಿದ್ದು, ಅನ್ಯಜನಗಳಿಗೆ ಎಂದಿಗೂ ಅನ್ವಯಿಸದು ಎಂಬುದನ್ನು ನಾವು ಪರಿಶೀಲಿಸುವವರಾಗಿದ್ದೇವೆ. ಎಫೆಸದ ಕೆಲವು ಅನ್ಯಜನರು ತಾವು ತಮ್ಮ ಪಾಪಪರಿಹಾರಕ್ಕಾಗಿ ಯೋಹಾನನಿಂದ ದೀಕ್ಷಾಸ್ನಾನ ಪಡಕೊಂಡಿದ್ದೇವೆ ಎಂದು ಹೇಳಿದಾಗ ಪೌಲನು ಅವರಿಗೆ ಯೇಸುಕ್ರಿಸ್ತನ ಹೆಸರಿನಲ್ಲಿ ಮತ್ತೊಮ್ಮೆ ದೀಕ್ಷಾಸ್ನಾನ ನೀಡಿದನು. (ಅ. ಕೃ. 19: 3–5).

ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವುದು ಮಾತ್ರವೇ ನಿಜವಾದ ದೀಕ್ಷಾಸ್ನಾನ ಎಂದು ಪ್ರತಿಪಾದಿಸಲು ಶ್ರಮಿಸುವ ನಮ್ಮ ಬ್ಯಾಪ್ಟಿಸ್ಟ್ ಮಿತ್ರರುಗಳು ಇದರ ಪರಿಣಾಮಕತ್ವ ಶಕ್ತಿಯ ಬಗ್ಗೆ ಸಂಪೂರ್ಣ ಭಿನ್ನವಾದ ಹಕ್ಕಿನ ಹೇಳಿಕೆಯನ್ನು ನೀಡುತ್ತಾರೆ. ಇದು ನಮ್ಮ ಪಾಪಗಳ ಪರಿಹಾರಕ್ಕಾಗಿ ಎಂಬುದನ್ನು ಅವರು ಅಲ್ಲಗಳೆಯುತ್ತಾರೆ. ಯಾಕೆಂದರೆ ಪಾಪಗಳ ಪರಿಹಾರವನ್ನು ವಿಮೋಚಕನಾದ ಯೇಸುಕ್ರಿಸ್ತನ ಮೇಲೆ ನಂಬಿಕೆಯಿಡುವುದರಿಂದ ಅನುಭವಿಸಬಹುದು. ಸ್ನಾನದೀಕ್ಷೆಯು ಸಭೆಯ ದ್ವಾರದಂತಿದ್ದು, ಮುಳುಗಿ ದೀಕ್ಷಾಸ್ನಾನ ಪಡಕೊಳ್ಳುವವರು ಮಾತ್ರವೇ ಸಭೆಯೊಳಗೆ ಪ್ರವೇಶಿಸಬಹುದು, ಇತರರು ಇಂಥಹ ಸೌಕರ್ಯವನ್ನು, ಆಶೀರ್ವಾದಗಳನ್ನು ಪ್ರಸ್ತುತ ಜೀವಿತದಲ್ಲಿಯಾಗಲೀ, ಮುಂಬರುವ ಜೀವಿತದಲ್ಲಿಯಾಗಲೀ ಎಂದಿಗೂ ನಿರೀಕ್ಷಿಸಲೂಬಾರದು ಮತ್ತು ಅವುಗಳು ಅವರಿಗೆ ಲಭಿಸುವುದಿಲ್ಲ ಎಂಬುದನ್ನು ಅವರು ದೃಢವಾಗಿ ಎತ್ತಿ ಹಿಡಿಯುತ್ತಾರೆ. ಈ ಅಲೋಚನೆಗಳಿಗೆ ಹೊಂದಾಣಿಕೆಯೆಂಬಂತೆ ಅವರು ಪವಿತ್ರ ಭೋಜನದ ಮೇಜಿಗೆ, ಮುಣಿಗಿ ದೀಕ್ಷಾಸ್ನಾನ ಪಡೆಯದೇ ಇರುವವರನ್ನು ಆಹ್ವಾನಿಸಲು ನಿರಾಕರಿಸುತ್ತಾರೆ. ಪವಿತ್ರ ರಾತ್ರಿಭೋಜನವು ಲೋಕದವರಿಗಾಗಿ ಅಲ್ಲ ಅದು ಕೇವಲ ಕ್ರೈಸ್ತಸಭೆಯವರಿಗೆ ಮತ್ತು ಈ ಸಭೆಯಲ್ಲಿ ಮುಣುಗಿ ದೀಕ್ಷಾಸ್ನಾನ ಎಂಬ ದ್ವಾರದಿಂದ ಪ್ರವೇಶ ಪಡಕೊಂಡವರಲ್ಲದೆ ಬೇರೆ ಯಾರಿಗೂ ಇಲ್ಲವೆಂಬುದು ಅವರ ವಾದ. ಇತ್ತೀಚಿನ ದಿನಗಳಲ್ಲಿ ಕೆಲವು ಬ್ಯಾಪ್ಟಿಸ್ಟ್ ಸಭೆಗಳು ತಮ್ಮ ಸಿದ್ಧಾಂತವನ್ನು ಉಲ್ಲಂಘಿಸಿ ಈ ನಿಯಮಕ್ಕೆ ರಿಯಾಯಿತಿ ನೀಡಿದ್ದಾರೆ. 'Religious Herald' ಎಂಬ ಪತ್ರಿಕೆಯಲ್ಲಿ ಜೆ.ಟಿ. ಲಾಯ್ಡ್ ಎಂಬುವವರು ಬರೆದ ಲೇಖನವೊಂದನ್ನು ಇಲ್ಲಿ ನಾವು ಉಲ್ಲೇಖಿಸುತ್ತೇವೆ :

"ಕ್ರೈಸ್ತ ದೀಕ್ಷಾಸ್ನಾನವೆಂದರೆ ತಂದೆ, ಮಗ ಮತ್ತು ಪರಿಶುದ್ಧಾತ್ಮನ ಹೆಸರಿನಲ್ಲಿ ಓರ್ವ ವಿಶ್ವಾಸಿಯನ್ನು ನೀರಿನಲ್ಲಿ ಮುಣಿಗಿಸುವುದು–ಇದಲ್ಲದೆ ಬೇರೆ ಯಾವುದೂ ದೀಕ್ಷಾಸ್ನಾನವಲ್ಲ. ಆದುದರಿಂದ ಬಾಪ್ಟಿಸ್ಟ್ ಸಭೆಯು ಮಾತ್ರವೇ ಇರುವ ಒಂದೇ ಕ್ರೈಸ್ತ ಸಭೆ. ಶಿಶು ದೀಕ್ಷಾಸ್ನಾನ ಮಾಡುವವರಿಗೆ ಕರ್ತನ ಭೋಜನಪಡಕೊಳ್ಳುವ ಹಕ್ಕು ಇಲ್ಲ. ಅವರು ಇದರಲ್ಲಿ

ಪಾಲು ತೆಗೆದುಕೊಳ್ಳುವಾಗಲೆಲ್ಲಾ ಅನರ್ಹರಾಗಿಯೇ ಪಾಲು ತೆಗೆದುಕೊಳ್ಳುತ್ತಾರೆ ಮತ್ತು ತಮ್ಮ ನಾಶನಕ್ಕಾಗಿಯೇ ಅದನ್ನು ತಿಂದು ಕುಡಿಯುತ್ತಾರೆ"

ಈ ಬಾಪ್ಟಿಸ್ಟ್ ಸಿದ್ಧಾಂತವು ಸರಿಯೆನ್ನುವುದಾದರೆ, ಇತರ ಪಂಗಡಗಳಿಗೆ ಸೇರಿದ ಮುಳುಗಿ ದೀಕ್ಷಾಸ್ನಾನ ಪಡೆಯದವರೆಲ್ಲರೂ ಯಾವುದೇ ಅರ್ಥದಲ್ಲಿ ತಾವು ಕ್ರೈಸ್ತ ಸಭೆಗೆ ಸೇರಿದವರೆಂದು ಹೇಳಿಕೊಳ್ಳುವಲ್ಲಿ ತಮ್ಮನ್ನು ಮೋಸ ಪಡಿಸಿಕೊಳ್ಳುವವರಾಗಿದ್ದಾರೆ. ಯಾಕೆಂದರೆ, ನಮ್ಮ ಬಾಪ್ಟಿಸ್ಟ್ ಸಹೋದರರು ಮುಳುಗಿ ದೀಕ್ಷಾಸ್ನಾನ ಹೊಂದುವುದು ಮಾತ್ರವೇ ಸಭೆಗೆ ದ್ವಾರವಾಗಿದೆ ಎಂದು ಹೇಳುತ್ತಾರೆ. ಮುಣುಗದೇ ಇರುವವರು ಅದರಲ್ಲಿ ಪ್ರವೇಶಿಸಿಲ್ಲ ಮತ್ತು ಕ್ರಿಸ್ತನ ದೇಹವಾಗಿರುವ ಸಭೆಗೆ ಸೇರಿದವರಲ್ಲ. ನಮ್ಮ ಈ ಬಾಪ್ಟಿಸ್ಟ್ ಸಹೋದರರು ವಿಶೇಷವಾಗಿ ಉನ್ನತ ಮಟ್ಟದ ಹೃದಯವಂತರೂ ಬುದ್ಧಿವಂತರೂ ಆಗಿರುವವರು, ತಮ್ಮ ವಿಶ್ವಾಸದ ಈ ತಾರ್ಕಿಕ ತೀರ್ಮಾನಕ್ಕೆ ಸಾರ್ವಜನಿಕರಿಗೆ ಒತ್ತುಕೊಡಲು ಹಿಂದೇಟು ಹಾಕುತ್ತಾರೆಂದು ನಾವು ಆಶ್ಚರ್ಯಪಡುವುದಿಲ್ಲ. ಅವರ ಸಿದ್ಧಾಂತಗಳು ವಿರೋದಾತ್ಮಕವಾಗಿದ್ದಾಗ್ಯೂ ಅವರು ತಾವು ಕ್ರೈಸ್ತರಾಗಿ ಗೌರವ ನೀಡಬೇಕಾದವರ ಮುನಿಸು ಮತ್ತು ನಿಷ್ಟುರದ ಮಾತುಗಳನ್ನು ತಮ್ಮ ಮೇಲೆ ಎಳೆದುಕೊಂಡಂತೆ ಹೊರತು ಎದುರಿಸುವುದಲ್ಲ. ಈ ಬಾಪ್ಟಿಸ್ಟ್ ಸಿದ್ಧಾಂತಗಳು ಸತ್ಯವೇ ಆಗಿದ್ದಲ್ಲಿ ಏನಾದೀತು? ಮುಣಿಗಿ ದೀಕ್ಷಾಸ್ನಾನ ಪಡಕೊಂಡವರು ಮಾತ್ರವೇ ರಕ್ಷಿಸಲ್ಪಡುತ್ತಾರೆ ಉಳಿದ ಪಂಗಡಗಳಿಗೆ ಸೇರಿದವರೆಲ್ಲರೂ, ಮತ್ತು ಈ ಪಂಗಡಗಳಿಂದ ಹೊರಗುಳಿದಿರುವ ಪ್ರಪಂಚದವರೆಲ್ಲರೂ ನಾಶವಾಗುತ್ತಾರೆ ಎಂದೂ, ಕ್ರೈಸ್ತ ಪ್ರಪಂಚದ ವಿವಿಧ ವಿಶ್ವಾಸ ಸೂತ್ರಗಳಿಗನುಸಾರವಾಗಿ ಇದೆ ಎಂಬುದನ್ನು ನಾವು ಉತ್ತರಿಸುತ್ತೇವೆ. ಯಾಕೆಂದರೆ ಸಭೆಯು ರಕ್ಷಿಸಲ್ಪಡಬೇಕೆಂಬುದು ಮತ್ತು ಉಳಿದವರೆಲ್ಲರೂ ನಾಶನಕ್ಕೆ ಅಥವಾ ನಿತ್ಯವಾದ ಚಿತ್ರಹಿಂಸೆಗೆ ಗುರಿಯಾಗುತ್ತಿದ್ದಾರೆಂಬುದು ಎಲ್ಲಾ ವಿಶ್ವಾಸ ಸೂತ್ರಗಳ ಸಿದ್ಧಾಂತವಲ್ಲವೇ?

ಮೇಲಿನ ಮಾನವ ಸಿದ್ಧಾಂತಗಳೆಲ್ಲವೂ ಏಕ ರೂಪತೆಯಿಲ್ಲದೆ ಅಸಮರ್ಪಕವಾಗಿವೆ ಎಂದು ಸ್ಪಷ್ಟವಾಗಿ ಪ್ರಕಟವಾಗುವುದರಿಂದ ನಾವು ಅವನ್ನು ಅಸಮ್ಮತಿಸಲು ಬದ್ಧರಾಗಿದ್ದೇವೆ. ಅವುಗಳ ಕೇವಲ ಹೇಳಿಕೆಗಳೇ ತಕ್ಷಣದ ದೋಷಭರಿತ ಅಭಿಪ್ರಾಯಗಳಿಂದ ಕೂಡಿದವುಗಳಾಗಿವೆ ಎಂದು ಯಾವುದೇ ಬುದ್ಧಿವಂತ ಮತ್ತು ನಿಷ್ಪಕ್ಷಪಾತ ಮನುಸ್ಸುಳ್ಳವರಿಗೆ ತಿಳಿದು ಬರುತ್ತದೆ. ಶಿಷ್ಯರುಗಳ ಪಂಗಡದವರಾಗಲೀ, ಬಾಪ್ಟಿಸ್ಟ್ ಪಂಗಡವಾಗಲೀ ಅಥವಾ ಇವೆರಡೂ ಜೀವಸ್ವರೂಪನಾದ ದೇವರ ಸಭೆಯಾಗಿ ರಚಿತವಾಗಿವೆ ಹಾಗೂ ಅವುಗಳ ಹೆಸರುಗಳು ಪರಲೋಕ ರಾಜ್ಯದಲ್ಲಿ ಬರೆಯಲ್ಪಟ್ಟಿವೆ ಮತ್ತು ಇದರಲ್ಲಿ ಮುಣಿಗಿ ದೀಕ್ಷಾಸ್ನಾನ ಪಡೆದವರ ಹೆಸರು ಮಾತ್ರವೇ ಒಳಗೊಂಡಿದ್ದು ಮುಳುಗದೇ ದೀಕ್ಷಾಸ್ನಾನ ಪಡೆದ ಉಳಿದ ಪಂಗಡಗಳವರ ಹೆಸರುಗಳು ಬಿಡಲ್ಪಟ್ಟಿವೆ ಎಂಬುದನ್ನು ನಾವು ಒಪ್ಪುವುದಿಲ್ಲ. ಮನುಷ್ಯಕುಮಾರನು ಈ ಲೋಕವೆಂಬ ಹೊಲದಲ್ಲಿ ಉತ್ತಮ ಬೀಜವನ್ನು ಬಿತ್ತಿದಾಗ ಬ್ಯಾಪ್ಟಿಸ್ಟ್ ಆವರಣದಲ್ಲಿರುವುದೆಲ್ಲವೂ "ಗೋಧಿ"ಯಾಗಿದ್ದು ಉಳಿದವುಗಳೆಲ್ಲವೂ "ಹಣಜಿ"ಯಾಗಿದೆ ಮತ್ತು ಅವುಗಳನ್ನು ಆರಿಸಿ ಸುಟ್ಟುಬಿಡುವರು (ಮತ್ತಾಯ 13ನೇ ಅಧ್ಯಾಯವನ್ನು ನೋಡಿರಿ) ಎಂಬುದನ್ನು ನಾವು ಒಪ್ಪುವುದಿಲ್ಲ. ಈ ಎಲ್ಲಾ ತಿಕ್ಕಾಟಗಳಿಂದ ಕೂಡಿದ ಸಿದ್ಧಾಂತಗಳೆಲ್ಲವೂ ತಪ್ಪಾಗಿದ್ದು ದೇವರಿಂದ ಒಪ್ಪತಕ್ಕದ್ದಲ್ಲವೆಂದು ನಾವು ಹಕ್ಕಿನಿಂದ ಹೇಳುವವರಾಗಿದ್ದೇವೆ. ಎಲ್ಲಾ ಪಂಗಡಗಳೂ, ಗುಂಪುಗಳೂ ಒಂದೇ ಶಿರ, ಒಂದೇ ದೇಹ, ಒಂದೇ ವಿಶ್ವಾಸ ಮತ್ತು ಒಂದೇ ದೀಕ್ಷಾಸ್ನಾನವೆಂಬ ದೇವರ ನಿಯಮಕ್ಕೆ ವಿರುದ್ಧವಾಗಿವೆ ಎಂದೂ ನಾವು ಹೇಳುತ್ತೇವೆ. ದೇವರ ನೂತನ ಸೃಷ್ಟಿಯಾದ ಕರ್ತನ ಸಭೆಯಲ್ಲಿ ಹೆಚ್ಚು ಮಂದಿ ಸದಸ್ಯರಿದ್ದಾರೆಂದು ನಾವು ಹೇಳುವುದಿಲ್ಲ ಆದರೆ ಅದೊಂದು "ಚಿಕ್ಕ ಹಿಂಡು" ಆಗಿದೆ ಎಂದು ಒಪ್ಪಿಕೊಳ್ಳುತ್ತೇವೆ.

ನಮ್ಮ ಬಾಪ್ಟಿಸ್ಟ್ ಮತ್ತು ಡಿಸೈಪಲ್ ಸ್ನೇಹಿತರನ್ನು ನಮ್ಮ ಪ್ರೆಸ್ಬಿಟೇರಿಯನ್. ಮೆಥೋಡಿಸ್ಟ್, ಲೂಥರನ್, ಎಪಿಸ್ಕೋಪಲ್ ಮತ್ತು ರೋಮನ್ ಕ್ಯಾಥೋಲಿಕ್ ಸ್ನೇಹಿತರೊಂದಿಗೆ ಸಾಮಾನ್ಯವಾದ ಕ್ರೈಸ್ತ ಪ್ರಪಂಚದ ಭಾಗವನ್ನಾಗಿ ಅಥವಾ ಸತ್ಯವೇದದಲ್ಲಿ ಹೇಳಿರುವ "ಬ್ಯಾಬಿಲೋನ್' ನಲ್ಲಿ ನಾವು ಸೇರಿಸುತ್ತೇವೆ. ಮನುಷ್ಯ ಕುಮಾರನೂ ಆತನ ನಿಷ್ಠಾವಂತ ಶಿಷ್ಯರುಗಳು ಉತ್ತಮವಾದ ಬೀಜವನ್ನು ಬಿತ್ತಿದರು ಮತ್ತು ಇದು ಕ್ರೈಸ್ತ ಪ್ರಪಂಚದಾದ್ಯಂತ ಉತ್ತಮವಾದ ಫಲನೀಡಿತು. ಇದನ್ನು ಸುವಾರ್ತಾಯುಗದ ಗೋಧಿಯ ಹೊಲವೆಂಬುದಾಗಿ ಪರಿಗಣಿಸಬಹುದಾಗಿದೆ. ವಿರೋಧಿಯು ಬಂದು ಹಣಜಿಯನ್ನು ಯಾವ ರೀತಿಯಲ್ಲಿ ಸಮೃದ್ಧಿಯಾಗಿ ಬಿತ್ತಿದ್ದಾನೆಂದರೆ ಅದರಿಂದ ಗೋಧಿಯು ಹೆಚ್ಚುಕಡಿಮೆ ಉಸಿರುಕಟ್ಟುವಂತಾಗಿದೆ. ಒಂದು ರೀತಿಯಲ್ಲಿ "ಗೋಧಿಯ ಹೊಲ" ಎಂದು ಗುರುತಿಸಲಾಗಿದ್ದ ಈ ಹೊಲವು "ಹಣಜಿಯ ಹೊಲ"ವೋ ಎಂಬಂತಾಗಿದೆ. ಆದರೆ ದೇವರ ವಾಗ್ದಾನಕ್ಕನುಸಾರವಾಗಿ ಈಗ ಸುವಾರ್ತಾಯುಗದ ಸುಗ್ಗಿಯ ಕಾಲ ಬಂದಿದೆ. ಆತನ ಆಳುಗಳನ್ನು ಗೋಧಿಯನ್ನು ಕೂಡಿಸುವ ಸಲುವಾಗಿ ಕಳುಹಿಸಿಕೊಡುತ್ತಾನೆ. ಅವರು ಅದರ ಪ್ರತಿಯೊಂದು ಕಾಳನ್ನೂ ಆತನ ಕಣಜಕ್ಕೆ ತುಂಬುತ್ತಾರೆ. ಇದರಿಂದ ಒಳ್ಳೆಯ ಗೋಧಿಯು ಕೇವಲ ಬಾಪ್ಟಿಸ್ಟ್, ಡಿಸೈಪಲ್ ಪಂಗಡಗಳಲ್ಲಿ ಮಾತ್ರವಲ್ಲ ಪ್ರೆಸ್ಬಿಟೇರಿಯನ್, ಮೆಥೋಡಿಸ್ಟ್, ಎಪಿಸ್ಕೋಪಲ್, ಲೂಥರನ್, ಕಾಂಗ್ರಿಗೇಷನಲಿಸ್ಟ್, ರೋಮನ್ ಕ್ಯಾಥೋಲಿಕ್ ಇವೇ ಮುಂತಾದ ಇತರ ಪಂಗಡಗಳಲ್ಲಿಯೂ ಸೇರಿಕೊಂಡಿದೆ ಎಂಬುದು ಇದರಿಂದ ವೇದ್ಯವಾಗುತ್ತದೆ. ಎಲ್ಲೆಡೆ ಇದರ ಸಾಮರಸ್ಯದೊಂದಿಗೆ ಬ್ಯಾಬಿಲೋನಿನಲ್ಲಿರುವ ಕರ್ತನ ಜನರಿಗೆ 'ಮಹತ್ತರವಾಗಿದ್ದ ಬ್ಯಾಬಿಲೊನ್' ಪತನಗೊಂಡಿದೆ, (ದೇವರ ನ್ಯಾಯತೀರ್ಪು ಅವರ ವಿರುದ್ಧವಾಗಿದ್ದು ಅವರು ಕರ್ತನಿಂದ ತಿರಸ್ಕರಿಸಲ್ಪಟ್ಟಿದ್ದಾರೆ...), ನನ್ನ ಪ್ರಜೆಗಳೇ, ಅವಳನ್ನು ಬಿಟ್ಟು ಬನ್ನಿರಿ; ನೀವು ಅವಳ ಪಾಪದಲ್ಲಿ ಪಾಲುಗಾರರಾಗಬಾರದು (ಪ್ರಕಟನೆ 18 : 2–4) ಎಂಬ ಸಂದೇಶವು ರವಾನೆಯಾಗಿದೆ.

ಇದು ನಿಜವಾಗಿರುವಾಗ, ಬಾಫ್ಟಿಸ್ಟ್ ಮತ್ತು ಡಿಸೈಪಲ್ ಪಂಗಡಗಳವರು ದೀಕ್ಷಾಸ್ನಾನದ ಬಗ್ಗೆ ಮತ್ತು ಅದರಿಂದುಂಟಾಗುವ ಆಶೀರ್ವಾದಗಳ ಬಗ್ಗೆ, ಸೌಕರ್ಯಗಳ ಬಗ್ಗೆ ಘೋರವಾದ ತಪ್ಪು ಮಾಡಿದ್ದಾರೆ ಎಂಬುದು ವಿಶದವಾಗುತ್ತದೆ. ನಾವು ದೀಕ್ಷಾಸ್ನಾನದ ಬಗ್ಗೆ ಪ್ರಚಲಿತವಾಗಿರುವ ಎಲ್ಲಾ ಸಂಗತಿಗಳ ಬಗ್ಗೆ ಇಂದಿನವರೆಗಿನ ಸಮಗ್ರ ಪರಿಸ್ಥಿತಿಯ ಸಂಕ್ಷಿಪ್ತವಾದ ಪುನರಾವಲೋಕನ ಮಾಡಿದ್ದೇವೆ. ಹೀಗಾಗಿ ಈ ಪ್ರಸ್ತಾಪದ ಬಗ್ಗೆ ಕರ್ತನ ಸ್ಫೂರ್ತಿಭರಿತ ಅಪೋಸ್ತಲರ ಮೂಲಕ ದೇವರು ನೇಮಿಸಿದ ದೈವ ವ್ಯವಸ್ಥೆಯ ಮುಖ್ಯವಾದ ಸಂಗತಿಗಳ ವಿರೋಧವಾದ ಈ ಎಲ್ಲಾ ಮಾನವ ಸಂಪ್ರದಾಯಗಳಿಂದ ನಾವು ಪೂಜ್ಯಭಾವನೆಯುಳ್ಳವರಾಗಿ ಪ್ರಾರ್ಥನಾ ಪೂರ್ವಕವಾಗಿ ಹಿಂದಕ್ಕೆ ಸರಿಯುವವರಾಗಿದ್ದೇವೆ. ಆಗ ಮಾತ್ರವೇ ಕ್ರೈಸ್ತ ಪ್ರಪಂಚದಲ್ಲಿರುವ ಈ ಎಲ್ಲಾ ಸಿದ್ಧಾಂತಗಳ ಗೊಂದಲವನ್ನು ನಾವು ಕಾಣಬಹುದಾಗಿದೆ ಮತ್ತು ಈ ಬಗ್ಗೆ ದೇವರ ಸಂದೇಶದಲ್ಲಿನ ಸರಳತೆಯನ್ನು ಮೆಚ್ಚಿಕೊಳ್ಳಬಹುದಾಗಿದೆ.

## ದೀಕ್ಷಾಸ್ನಾನದ ಬಗ್ಗೆ ಸತ್ಯವೇದದಲ್ಲಿರುವ ಪುರಾವೆಗಳು

### The Scripture Testimony on Baptism

ಪಾತ್ರೆಗಳ ಶುಚಿತ್ವ ಮತ್ತು ಅಶುದ್ಧ ವ್ಯಕ್ತಿಯ ಮೇಲೆ ನೀರು ಚಿಮುಕಿಸುವುದು ಮುಂತಾದ ಅನೇಕ ನಿಯಮಗಳು ಯೆಹೂದ್ಯ ಧರ್ಮಾಚರಣೆಯಲ್ಲಿವೆ. ಆದರೆ ಯೆಹೂದ್ಯ ಯುಗದ ಅಂತ್ಯಕಾಲದಲ್ಲಿ ಸ್ನಾನಿಕನಾದ ಯೋಹಾನನು ಬೋಧಿಸಿದ ಬಾಪ್ತಿಸಂ ಬಗ್ಗೆ ಯಾವುದೂ ಇಲ್ಲ (ಬಾಪ್ಟಿಜ್ಹೋ ಅಂದರೆ ಮುಳುಗಿಸುವಿಕೆ). ಯೋಹಾನನ ದೀಕ್ಷಾಸ್ನಾನವು ಯೆಹೂದ್ಯರಿಗೆ ಮಾತ್ರವೇ ಆಗಿತ್ತು. ಅವರುಗಳು ಪ್ರಾಯಶ್ಚಿತ್ತ ದಿನದಂದು ಬಲಿ ಅರ್ಪಿಸುವುದರ ಮೂಲಕ ಶುದ್ಧರಾಗುತ್ತಾರೆಂದು ಈಗಾಗಲೇ ಅಂಗೀಕರಿಸಲಾಗಿತ್ತು. ಇವರುಗಳಿಗೆ ಯೋಹಾನನ ದೀಕ್ಷಾಸ್ನಾನವು ಅಂಗೀಕೃತ ಅಪರಾಧಗಳಿಂದ, ಧರ್ಮಶಾಸ್ತ್ರ ಒಡಂಬಡಿಕೆಗಳ ಉಲ್ಲಂಘನೆಯಿಂದ ಶುದ್ಧಿಕರಿಸಿಕೊಳ್ಳುವ ಸಾಂಕೇತಿಕ ಪ್ರಾಯಶ್ಚಿತ್ತ– ಹೃದಯ ಅಥವಾ ಆಕಾಂಕ್ಷೆಗಳಿಂದ ನೀತಿವಂತಿಕೆಯ ಸ್ಥಿತಿಗೆ ಹಿಂತಿರುಗುವುದು ಆಗಿತ್ತು. ಈ ರೀತಿಯಾಗಿ ಪಶ್ಚಾತ್ತಾಪ ಪಡುವ ಮತ್ತು ಸಾಂಕೇತಿಕವಾಗಿ ಶುದ್ಧೀಕರಣ ಹೊಂದುವ ಯೆಹೂದ್ಯರು ಅವರು ಧರ್ಮಶಾಸ್ತ್ರದ ಒಡಂಬಡಿಕೆಯ ಅಡಿಯಲ್ಲಿ ಈ ಹಿಂದೆ ಅನುಭವಿಸುತ್ತಿದ್ದ ದೇವರ ಸಾಂಗತ್ಯಕ್ಕೆ ಮರಳುವರು ಎಂದು ಎಣಿಸಲಾಗುತ್ತಿತ್ತು. ಯೋಹಾನನ ಬೋಧನೆ ಮತ್ತು ದೀಕ್ಷಾಸ್ನಾನದ ಹಿಂದಿದ್ದ ಉದ್ದೇಶವೆಂದರೆ ಯೋಹಾನನ ಬೋಧನೆಗನುಸಾರ ಸಮೀಪಿಸುತ್ತಿರುವ ದೇವರ ರಾಜ್ಯದ ಮತ್ತು ಮೆಸ್ಸೀಯನ ಬರೋಣದ ಸೂಕ್ತವಾದ ಆಶೀರ್ವಾದ ಪಡಕೊಳ್ಳುವಂತೆ ಅವರನ್ನು ಸಿದ್ಧಪಡಿಸುವುದೇ ಆಗಿತ್ತು. ಇದಕ್ಕಾಗಿ ಜನರು ಹೃತ್ಪೂರ್ವಕವಾದ ಸಿದ್ಧತೆಯಿಂದ ಇರಬೇಕಾಗಿತ್ತು. ಈ ಧರ್ಮಶಾಸ್ತ್ರದ ಅಡಿಯಲ್ಲಿರುವ ಪ್ರತಿಯೊಬ್ಬ ಯೆಹೂದ್ಯನೂ ಮೋಶೆಯ ಮನೆಯವನಾಗಿದ್ದಾನೆ. ಯಾಕೆಂದರೆ, "ಅವರೆಲ್ಲರೂ ಮೋಶೆಯ ಶಿಷ್ಯರಾಗುವುದಕ್ಕಾಗಿ ಮೇಘದಲ್ಲಿಯೂ, ಸಮುದ್ರದಲ್ಲಿಯೂ ದೀಕ್ಷಾಸ್ನಾನ ಹೊಂದಿದರು" (1 ಕೊರಿ. 10:2) ಎಂದು ಬರೆಯಲ್ಪಟ್ಟಿದೆ. "ಮೋಶೆಯು ಸೇವಕನಾಗಿ ದೇವರ ಮನೆಯಲ್ಲೆಲ್ಲಾ ನಂಬಿಗಸ್ತನಾಗಿದ್ದನು" (ಇಬ್ರಿಯ 3:5) ಎನ್ನುವಾಗ ಮೋಶೆಯ ಮನೆಯು ದಾಸರ ಮನೆಯಾಗಿದೆ. ದೇವರ ವ್ಯವಸ್ಥೆಯ ಪ್ರಕಾರ ಯಾರ್‍ಯಾರು ಸಾಂಕೇತಿಕ ಇಸ್ರಾಯೇಲಿನ ಅಥವಾ ಧರ್ಮಶಾಸ್ತ್ರದ ಒಡಂಬಡಿಕೆಯ ಮಧ್ಯಸ್ಥನಾಗಿರುವ ಮೋಶೆಯ ಅಧೀನದಲ್ಲಿರುವ ದಾಸರ ಮನೆಯ ಸದಸ್ಯರಾಗಿದ್ದರೋ ಅವರೆಲ್ಲರೂ ಮೋಶೆಯ ಪ್ರತಿರೂಪದಂತಿರುವ ಮೆಸ್ಸೀಯನ ಅಥವ ಕ್ರಿಸ್ತನ ಆಗಮನದಲ್ಲಿ ಆತನನ್ನು ಮೋಶೆಯ ಪ್ರತಿರೂಪನೋ ಎಂಬಂತೆ ಸ್ವೀಕರಿಸಲು ಹೃದಯ ಪೂರ್ವಕವಾಗಿ ಸಿದ್ಧರಿರಬೇಕು. ಅವರು ಮೇಘದಲ್ಲಿಯೂ ಸಮುದ್ರದಲ್ಲಿಯೂ ಮೋಶೆಯೊಡನೆ ದೀಕ್ಷಾಸ್ನಾನ ಹೊಂದುವಲ್ಲಿ, ಮೋಶೆಯ ಬದಲಿಗೆ ಕ್ರಿಸ್ತೇಸುವನ್ನು ಸ್ವೀಕರಿಸುವುದಲ್ಲದೆ ಅವರು ಆತನ ದೇಹದ ಅಂಗಗಳಾಗಿದ್ದಾರೆ ಎಂಬ ಅಭಿಪ್ರಾಯವನ್ನು ಮೂಡಿಸುತ್ತದೆ. ಆತನೇ ಅದರ ಶಿರಸ್ಸಾಗಿ ಅವರು ಆತನ ಅನ್ಯೋನ್ಯತೆಯಲ್ಲಿ ನೂತನ ಒಡಂಬಡಿಕೆಯ ನಿರ್ವಾಹಕರಾಗಿರುತ್ತಾರೆ. ಸಂಪೂರ್ಣನೂ, ಮಹಿಮೆಯುಳ್ಳವನೂ ಆದ ಕ್ರಿಸ್ತನು ಇದರ ಮಧ್ಯಸ್ಥನಾಗಿದ್ದಾನೆ.

ಆದುದರಿಂದ ಯೋಹಾನನು ವಿಶ್ವಾಸಿಗಳಿಗೆ ಕ್ರಿಸ್ತನಲ್ಲಿ ದೀಕ್ಷಾಸ್ನಾನ ನೀಡಲಿಲ್ಲ. ಆದರೆ ಕೇವಲ ಪಶ್ಚಾತ್ತಾಪಕ್ಕೆ, ಮೋಶೆಯೊಂದಿಗೆ ಸಾಮರಸ್ಯಗೊಳ್ಳುವ ಪರಿಸ್ಥಿತಿಗೆ ಹಿಂತಿರುಗುವುದು ಮುಂತಾದವುಗಳಿಗಾಗಿ ದೀಕ್ಷಾಸ್ನಾನ ನೀಡಿದನು, ಇಂತಹ ಸ್ಥಿತಿಯಲ್ಲಿ ಓಲೀವ್ ಮರದ ಸ್ವಾಭಾವಿಕ ಕೊಂಬೆಗಳಂತೆ ಅವರಿಗೆ ಕ್ರಿಸ್ತನೊಂದಿಗೆ ಕಸಿಗೊಳ್ಳುವ ಅಗತ್ಯವಿಲ್ಲ. (ರೋಮಾ. 11:16–21 ನೋಡಿರಿ). ಯಾಕೆಂದರೆ, ಕ್ರಿಸ್ತನು ಅವರಿಗೆ ಮೋಶೆಯ ಸ್ಥಾನವನ್ನು ತೆಗೆದುಕೊಳ್ಳುತ್ತಾನೆ ಆತನು ಆ ಸಮಯಕ್ಕೆ ಕೇವಲ ಕ್ರಿಸ್ತನ ಪ್ರತಿರೂಪದಂತಿದ್ದಾನೆ. ಯೋಹಾನನ ದೀಕ್ಷಾಸ್ನಾನವೆಂದು ಕರೆಯಲ್ಪಡುವ ಈ ದೀಕ್ಷಾಸ್ನಾನವು ಪಾಪಗಳ ಪಶ್ಚಾತ್ತಾಪಕ್ಕಾಗಿಯೂ, ಅದರ ವಿಮೋಚನೆಗಾಗಿಯೂ ಇರುವುದು ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. "ಪಾಪಗಳನ್ನು ತೊಳೆದು ಕೊಳ್ಳುವುದು" ಎಂಬುದು ಯೆಹೂದ್ಯರಿಗೆ ಮಾತ್ರವೇ ಅನ್ವಯವಾಗುತ್ತದೆ. ಯಾಕೆಂದರೆ ಅನ್ಯಜನಾಂಗದವರು ಮೋಶೆಯಲ್ಲಿ ದೀಕ್ಷಾಸ್ನಾನ ಹೊಂದಿಕೊಳ್ಳುವುದಿಲ್ಲ ಮತ್ತು ಯಾವ ಕಾಲಕ್ಕೂ ಸೇವಕನ ಮನೆಯವರಾಗುವುದಿಲ್ಲ ಮತ್ತು ಪಶ್ಚಾತ್ತಾಪದ ಮೂಲಕ ಅವರೆಂದೂ ಹೊಂದಿರದ ಸ್ಥಿತಿಗೆ ಹಿಂತಿರುಗುವವರಲ್ಲ. ಆದುದರಿಂದ ಕ್ರಿಸ್ತನನ್ನು ನಂಬಿದ ಅನ್ಯರು ಬೇರೆ ರೀತಿಯಲ್ಲಿ ಮಕ್ಕಳ ಮನೆಗೆ ಪ್ರತಿಷ್ಠಿಸಲ್ಪಡಬೇಕು. ಅಪೋಸ್ತಲನು ವಿವರಿಸುವಂತೆ ಅವರೆಲ್ಲರೂ ಸ್ವಾಭಾವಿಕವಾಗಿ ದೈವೀಕೋಪದ ಮಕ್ಕಳೂ, ಅಪರಿಚಿತರೂ, ಅನ್ಯರೂ, ಪರಕೀಯರೂ ಆಗಿದ್ದು ಕಾಡೆಣ್ಣೆ ಮರದಂತಿರುವರು. ಎಷ್ಟೇ ಮಟ್ಟದ ಪಶ್ಚಾತ್ತಾಪ ಮತ್ತು ಸುಧಾರಣೆಗಳು, ಅನ್ಯರೂ ಪರಕೀಯರೂ ಆದ ಇವರನ್ನು ದಾಸನ ಮನೆಯ ಸದಸ್ಯರನ್ನಾಗಿ ಮಾಡಲು ಸಾಧ್ಯವಿಲ್ಲ. ಅವರಿಗೆ ಮಾತ್ರವೇ ಕ್ರಿಸ್ತನ ಮೇಲಿನ

ನಂಬಿಕೆಯ ಮೂಲಕವಾಗಿ ದಾಸನ ಮನೆಯಿಂದ ಮಕ್ಕಳ ಮನೆಗೆ ಬರಲು ಸಾಧ್ಯವಾಗುತ್ತದೆ. ಇತರರ ಮೂಲವು ಅಬ್ರಹಾಮನ ವಾಗ್ದಾನವಾಗಿರುವುದರಿಂದ (ಗಲಾತ್ಯ 3:16,29 ನೋಡಿರಿ) ಅವರು ಕ್ರಿಸ್ತನ ಓಲೀವ್ (ಎಣ್ಣೆ) ಮರದ ಕೊಂಬೆಗಳಾಗುವುದಾದರೆ ಅವರು ದಾಸನ ಮನೆಯನ್ನು ಪ್ರತಿನಿಧಿಸುವ ಮೂಲ ಓಲೀವ್ ಮರದ ಸ್ವಾಭಾವಿಕ ಕೊಂಬೆಗಳು ಕಡಿಯಲ್ಪಟ್ಟ ಖಾಲಿ ಸ್ಥಾನಗಳಲ್ಲಿ ಕಸಿ ಕಟ್ಟಿಸಿಕೊಳ್ಳಬಹುದು. "ಆತನು ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತಜನರು ಆತನನ್ನು ಅಂಗೀಕರಿಸಲಿಲ್ಲ. ಯಾರ್ಯಾರು ಆತನನ್ನು ಅಂಗೀಕರಿಸಿದರೋ. ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರಕೊಟ್ಟನು. ಇವರು ರಕ್ತಸಂಬಂಧದಿಂದಾಗಲೀ, ಕಾಮದಿಂದಾಗಲೀ, ಪುರುಷ ಸಂಕಲ್ಪದಿಂದಾಗಲೀ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು" (ಯೋಹಾನ 1:11–13) ಈ ರೀತಿಯಾಗಿ ಅವರು ಆಧ್ಯಾತ್ಮಿಕವಾದ ನೂತನ ಸೃಷ್ಟಿಯಲ್ಲಿ ಸದಸ್ಯರಾದರು.

ಇಡೀ ಲೋಕಕ್ಕೆ ಮಾದರಿಯಾಗಿರುವ ಇಸ್ರಾಯೇಲು (ಭೂಲೋಕಕ್ಕೆ ಸಾಂಕೇತಿಕವಾಗಿರುವ) ಐಗುಪ್ತವನ್ನು ತೊರೆದು ಮೋಶೆಯ ನೇತೃತ್ವವನ್ನು ಹಿಂಬಾಲಿಸುವುದೆಂದು ಮುಂಚಿತವಾಗಿಯೇ ತಿಳಿದಿದ್ದರು. ಆದರೆ, ಕೆಂಪು ಸಮುದ್ರದ ಬಳಿ ಅವರಿಗೆ ಆದ ಪರೀಕ್ಷೆಯಲ್ಲಿ ಅವರು ಸರ್ವನಾಶವಾಗದಂತೆ ದೇವರು ಮೋಶೆಯ ಮುಖಾಂತರ ಮಧ್ಯಸ್ಥಿಕೆ ವಹಿಸಿದುದರ ಫಲವಾಗಿ, ಅವರೆಲ್ಲರೂ ಸಮುದ್ರದ ಮಧ್ಯೆ ಮತ್ತು ಮೇಘಗಳ ಮೇಘಗಳಡಿಯಲ್ಲಿ ದೀಕ್ಷಾಸ್ನಾನ ಹೊಂದಿದರು; ಎರಡೂ ಬದಿಯಲ್ಲಿ ಸಮುದ್ರ ಮತ್ತು ಮೇಲ್ಗಡೆ ಮೋಡ ಇವರೆಲ್ಲರಿಗೂ ಒಂದು ಮನೆಯಂತೆ, ಕುಟುಂಬವಾಗಿದ್ದು ಮೋಶೆಯು ಅದರ ಯಜಮಾನನಂತೆ ಪ್ರತಿನಿಧಿಸಲ್ಪಟ್ಟನು. ಅವರು ಮೋಶೆಗೆ ದೃಢ ನಿಷ್ಠೆಯುಳ್ಳವರಾಗಿ ಸಮುದ್ರದಿಂದ ಹೊರಬಂದು ಆತನನ್ನು ಹಿಂಬಾಲಿಸುವೆವು ಮತ್ತು ಆತನಿಗೆ ವಿಧೇಯರಾಗಿರುವೆವು ಎಂಬ ಪ್ರತಿಜ್ಞೆ ಕೈಕೊಂಡರು. ಅವರು ಸಿನಾಯಿ ಬೆಟ್ಟದಲ್ಲಿ ಇನ್ನೂ ಮುಂದುವರೆದು ಆತನನ್ನು ಧರ್ಮಶಾಸ್ತ್ರದ ಒಡಂಬಡಿಕೆಯ ಮಧ್ಯಸ್ಥಗಾರನೆಂಬ ವಚನ ಬದ್ಧತೆಗೊಳಗಾದರು. ಅವರೆಲ್ಲಾ ನಿರೀಕ್ಷೆಗಳೂ ಆತನ ಮೇಲೆ ಹಾಕಿದಾಗ ಆತನು ಹೇಳಿದ್ದೇನೆಂದರೆ ದೇವರಾಗಿರುವ ಕರ್ತನು ನನ್ನನ್ನು ಏರ್ಪಡಿಸಿದಂತೆ ನಿಮ್ಮ ಸಹೋದರರಲ್ಲಿ ಮತ್ತೊಬ್ಬ ಪ್ರವಾದಿಯನ್ನು ನಿಮಗೆ ಏರ್ಪಡಿಸಿಕೊಡುವನು, ಆತನು ನಿಮಗೆ ಹೇಳುವ ಎಲ್ಲಾ ಮಾತುಗಳಿಗೆ ನೀವು ಕಿವಿಗೊಡಬೇಕು"(ಧರ್ಮೋ. 18:15,18 ಮತ್ತು ಅ.ಕೃ.3:22). ಪ್ರತಿಯೊಬ್ಬ "ನಿಜವಾದ ಇಸ್ರಾಯೇಲ್ಯ"ನೂ ಈ ರೀತಿಯಾಗಿ ಮೋಶೆಗೆ ಮರಣದ ಪರ್ಯಂತ ಕಟ್ಟುಬಿದ್ದು ತಮ್ಮ ಜೀವಿತದ ಎಲ್ಲಾ ನಿರೀಕ್ಷೆಗಳೊಡನೆ ಆತನಲ್ಲಿ ಭರವಸವಿಟ್ಟರು. ಆತನ ಸ್ಥಳದಲ್ಲಿ ಆತನ ಪ್ರತಿರೂಪನಾಗಿ ಕ್ರಿಸ್ತನನ್ನು ಅಂಗೀಕರಿಸುವುದು ಮತ್ತು ಮೋಶೆಯ ಧರ್ಮಶಾಸ್ತ್ರದ ಅಡಿಯಲ್ಲಿ ಕೈಕೊಂಡ ಪ್ರತಿಜ್ಞಾವಿಧಿಗಳು ಈಗ ದೈವಿಕ ವ್ಯವಸ್ಥೆಯ ಸಲುವಾಗಿ ಕ್ರಿಸ್ತನಿಗೆ ವರ್ಗಾವಣೆಯಾಯಿತು ಮತ್ತು ಆತನು ಹೊಸ ಒಡಂಬಡಿಕೆಯ ಸೇವಕರಾಗುವ ಸಾಮರ್ಥ್ಯವನ್ನು ನಮಗೆ ಅನುಗ್ರಹಿಸಿದ್ದಾನೆ (2 ಕೊರಿ.3:6) ಎನ್ನುವುದಾದರೆ ಇದೊಂದು ಸಣ್ಣ ಬದಲಾವಣೆ ಮಾತ್ರವೇ ಆಗಿತ್ತು.

ಅನ್ಯರ ವಿಷಯದಲ್ಲಿ ಈ ಪ್ರಸ್ತಾಪವು ಸಂಪೂರ್ಣವಾಗಿ ಬದಲಾಗುತ್ತದೆ. ಅವರು ಕ್ರಿಸ್ತನನ್ನು ಅಂಗೀಕರಿಸುವುದು ಎಂದರೆ ಯೆಹೂದ್ಯರು ಮೋಶೆಗೆ ಶಿಷ್ಯವರ್ತನೆ ಮಾಡಿದ ಎಲ್ಲಾ ಸಂಗತಿಗಳು ನಂತರದಲ್ಲಿ ಕ್ರಿಸ್ತನಿಗೆ ವರ್ಗಾಯಿಸಿದಂತೆ ಎಂಬುದನ್ನು ಯುಕ್ತವಾಗಿ ಸೂಚಿಸುತ್ತದೆ. ಆದುದರಿಂದ, ಸತ್ಯವೇದದಲ್ಲಿ ಯೆಹೂದ್ಯರಲ್ಲದವರಿಗೆ, ಧರ್ಮಶಾಸ್ತ್ರದ ಅಥವಾ ಮೋಶೆಯ ಅಧೀನದಲ್ಲಿಲ್ಲದುದರಿಂದ ಮೋಶೆಯಿಂದ ಕ್ರಿಸ್ತನಿಗೆ ವರ್ಗಾಯಿಸಲ್ಪಡದವರಿಗೆ ಅನ್ವಯಿಸುವಂತೆ ಸ್ನಾನದೀಕ್ಷೆಗೆ ವಿಶಾಲವಾದ ಮತ್ತು ಆಳವಾದ ಅರ್ಥವನ್ನು ಕಂಡುಕೊಳ್ಳುವುದು ಆಶ್ಚರ್ಯವೆಂದು ನಮಗನಿಸದು. ಇವರಿಗೆ ದೀಕ್ಷಾಸ್ನಾನವೆಂದರೆ ಅಪೋಸ್ತಲನಾದ ಪೌಲನು ಹೇಳಿರುವಂತೆ ಕಾಡೆಣ್ಣೆ ಮರದ ಕೊಂಬೆಗೆ ಊರೆಣ್ಣೆ ಮರದೊಂದಿಗೆ ಕಸಿಕಟ್ಟಿಸಿದಾಗ ಎಲ್ಲಾ ರೀತಿಯ ಮೂಲಸ್ವರೂಪದ ಬದಲಾವಣೆಗಳು ಉಂಟಾಗುತ್ತದೆ (ರೋಮಾ. 11ನೇ ಅಧ್ಯಾಯ ನೋಡಿರಿ). ಇದು ಒಂದು ಸಂಪೂರ್ಣವಾದ ಪರಿವರ್ತನೆಯಾಗಿದೆ.

## ಕ್ರಿಸ್ತನ ಮರಣದಲ್ಲಿ ದೀಕ್ಷಾಸ್ನಾನ ಹೊಂದುವುದು.

## Baptism into Christ's Death

**"ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ? ಹೀಗಿರಲಾಗಿ ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು. ಆದುದರಿಂದ ಕ್ರಿಸ್ತನು ಸತ್ತು ತಂದೆಯ ಮಹಿಮೆಯಿಂದ ಜೀವಿತನಾಗಿ ಎಬ್ಬಿಸಲ್ಪಟ್ಟಂತೆಯೇ ನಾವು ಕೂಡ ಜೀವದಿಂದೆದ್ದು ಹೊಸಬರಾಗಿ ನಡಕೊಳ್ಳಬೇಕು. ಹೇಗೆಂದರೆ ನಾವು ಆತನ ಮರಣಕ್ಕೆ ಸಾದೃಶವಾದ ಮರಣವನ್ನು ಹೊಂದಿ ಅತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸಾದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು" (ರೋಮಾ. 6 : 3–5)**

ಸ್ವಾಭಾವಿಕವಾಗಿ ಅನ್ಯರಾಗಿರುವ ನಾವು, ರೋಮಾಪುರದ ವಿಶ್ವಾಸಿಗಳನ್ನುದ್ದೇಶಿಸಿ ಪೌಲನು ಮಾಡಿದ ಈ ಪ್ರಸಂಗವನ್ನು ಒಪ್ಪಿಕೊಳ್ಳದೆ ವಿಧಿಯಿಲ್ಲ. ಅವರಲ್ಲಿ ಎಲ್ಲರೂ ಅಲ್ಲದಿದ್ದರೂ, ದೇವರ ರೌದ್ರಕ್ಕೆ ಗುರಿಯಾದ ಮಕ್ಕಳಾಗಿದ್ದ ಅನ್ಯರೂ ಆಗಿದ್ದರೂ, ಮೂರು ವಚನಗಳಲ್ಲಿ ಇಲ್ಲಿ ಅಪೋಸ್ತಲನು ನಮಗೆ ಅನ್ವಯವಾಗುವ ದೀಕ್ಷಾಸ್ನಾನದ ಬಗ್ಗೆ ಸಾದ್ಯಂತವಾಗಿ ವಿವರಿಸುತ್ತಾನೆ. ಈ ಮೂರು ವಚನಗಳು ದೀಕ್ಷಾಸ್ನಾನದ ಬಗ್ಗೆ ಇರುವ ವಿವಿಧ ಸಿದ್ಧಾಂತಗಳನ್ನು ರುಜುವಾತು ಪಡಿಸಲು ಸಾಮಾನ್ಯವಾಗಿ ಉಪಯೋಗಿಸಲ್ಪಡುತ್ತವೆ. ಅದರಲ್ಲೂ ವಿಶೇಷವಾಗಿ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನವನ್ನು ಮಾನ್ಯಮಾಡುವ ನಮ್ಮ ಸಹೋದರಿಂದ ಇವು

ಉಲ್ಲೇಖಿಸಲ್ಪಡುತ್ತವೆ. ಹೀಗಿದ್ದಾಗ್ಯೂ, ಇಲ್ಲಿ ಅಪೋಸ್ತಲನು ನೀರಿನ ಬಗ್ಗೆ ಒಂದು ಮಾತಿನ ಗಮನವನ್ನೂ ಸೆಳೆಯದಿರುವುದು ಸ್ಪಷ್ಟವಾಗಿದೆ. ನೀರಿನ ದೀಕ್ಷಾಸ್ನಾನವೆಂಬುದು ನಿಜವಾದ ದೀಕ್ಷಾಸ್ನಾನದ ಕೇವಲ ಸಂಕೇತ ಅಥವಾ ಚಿತ್ರಣ. ಅಪೋಸ್ತಲನು ಈ ವಚನಗಳಲ್ಲಿ ವಿವಿಧ ದೃಷ್ಟಿಕೋನಗಳಲ್ಲಿ ನಿಜವಾದ, ಅಗತ್ಯವಾದ ಸ್ನಾನದೀಕ್ಷೆಯ ಬಗ್ಗೆ ವಿವರಿಸುತ್ತಾನೆ. ಇದಲ್ಲದೆ ಯಾರೂ ಕ್ರಿಸ್ತನ ಸಭೆಯೆಂಬ ದೇಹದ ಅಂಗಗಳಾಗಲು ಸಾಧ್ಯವಿಲ್ಲ. ಈ ದೀಕ್ಷಾಸ್ನಾನವನ್ನು ಪಡಕೊಳ್ಳುವವರ ಹೆಸರು, ಸ್ಥಳ, ಲಿಂಗ, ವರ್ಣಭೇದಗಳೇನೇ ಇರಲಿ ಅವರೆಲ್ಲರೂ ಪವಿತ್ರ ಸಭೆಯ, ನೂತನ ಸೃಷ್ಟಿಯ ಸದಸ್ಯರಾಗುತ್ತಾರೆ.

ಅಪೋಸ್ತಲನು ಈಗಾಗಲೇ ಕ್ರಿಸ್ತನಲ್ಲಿ ಸದಸ್ಯ ರಾಗಿರುವವರನ್ನು ಉದ್ದೇಶಿಸಿ ಮಾತನಾಡುವವನಾಗಿದ್ದಾನೆ. ಆತನು " ಕ್ರಿಸ್ತ ಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?" ಎಂದು ಪ್ರಶ್ನಿಸುತ್ತಾನೆ – ನಮ್ಮಲ್ಲಿ ಇಷ್ಟು ಮಂದಿ ಚಿಮುಕಿಸುವ ದೀಕ್ಷಾಸ್ನಾನ ಪಡೆಕೊಂಡೆವು, ಇಷ್ಟು ಮಂದಿ ಮುಳುಗಿ ದೀಕ್ಷಾಸ್ನಾನ ಪಡಕೊಂಡೆವು ಎಂದು ಆತನು ಇಲ್ಲಿ ಹೇಳದೆ ನಮ್ಮಲ್ಲಿ ಅನೇಕರು ಕ್ರಿಸ್ತನಲ್ಲಿ (ಮುಳುಗಿ) ದೀಕ್ಷಾಸ್ನಾನ ಪಡೆಕೊಂಡೆವು ಎಂದು ಆತನು ಹೇಳುವುದನ್ನು ಗಮನಿಸಲು ನಾವು ಇಲ್ಲಿ ಸ್ವಲ್ಪ ತಡೆಯಬೇಕಾಗುತ್ತದೆ. ಕ್ರಿಸ್ತನಲ್ಲಿ ಮುಳುಗುವುದು ಅಂದರೆ ಏನು? ಖಂಡಿತವಾಗಿಯೂ "ನೀವು ಕ್ರಿಸ್ತನ ದೇಹವು, ಮತ್ತು ಒಬ್ಬೊಬ್ಬರಾಗಿ ಅದಕ್ಕೆ ಅಂಗಗಳಾಗಿದ್ದೀರಿ" (1ಕೊರಿ.12:27) ಎಂಬ ಆಲೋಚನೆಯನ್ನೇ ಇಲ್ಲಿ ಆತನು ಮುಂದುವರಿಸುತ್ತಿದ್ದಾನೆ. ನಾವು ಯಾವ ರೀತಿಯಲ್ಲಿ ಕ್ರಿಸ್ತನ ದೇಹಕ್ಕೆ ಸೇರಿಕೊಳ್ಳುತ್ತೇವೆ? ಎಂಬ ಪ್ರಶ್ನೆಗೆ ಅಪೋಸ್ತಲನು ನಾವು ಅದರೊಳಗೆ ದೀಕ್ಷಾಸ್ನಾನ ಪಡಕೊಂಡಿದ್ದೇವೆ. ಆದಕಾರಣ ನಾವು ಆತನ ದೇಹದ ಅಂಗಗಳಾಗಿದ್ದೇವೆ ಎಂದು ಉತ್ತರಿಸುತ್ತಾನೆ. ಆತನೇ ತನ್ನ ಶರೀರವಾದ ಈ ಸಭೆಯ ಶಿರಸ್ಸಾಗಿದ್ದಾನೆ.

ಯಾವ ಪ್ರಕ್ರಿಯೆಯ ಮೂಲಕ ನಾವು ಕ್ರಿಸ್ತಯೇಸುವಿನ ಸದಸ್ಯರಾದೆವು ಎಂದು ನಾವೀಗ ವಿಚಾರಿಸಿಕೊಳ್ಳೋಣ. ಇದಕ್ಕೆ ಉತ್ತರವನ್ನು ಆತನು ತನ್ನ ಮುಂದಿನ ಹೇಳಿಕೆಯಲ್ಲಿ ಹೀಗೆ ನೀಡುತ್ತಾನೆ ಕ್ರಿಸ್ತಯೇಸುವಿನಲ್ಲಿ ಸೇರುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡವರಾದ ನಾವೆಲ್ಲರೂ ಆತನ ಮರಣದಲ್ಲಿ ಪಾಲುಗಾರರಾಗುವುದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡೆವೆಂದು ನಿಮಗೆ ತಿಳಿಯದೋ?. ಇಲ್ಲಿ ನಾವು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡದ್ದರಿಂದ ಆತನಲ್ಲಿ ದೀಕ್ಷಾಸ್ನಾನ ಹೊಂದಿದ ಬಗ್ಗೆ ಒಂದು ಮಾತಾದರೂ ಇಲ್ಲ. ಇಲ್ಲವೇ ಇಲ್ಲ! ನಾವು ಸಾವಿರ ಸಲ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರೂ ಕ್ರಿಸ್ತನ ದೇಹದ ಅಂಗಗಳಾಗಲಾರೆವು ಎಂಬುದು ಇದರಿಂದ ಎಷ್ಟೋ ಸ್ಪಷ್ಟವಾಗುತ್ತದೆ! ಆದರೆ, ಅಪೋಸ್ತಲನ ಈ ಹೇಳಿಕೆಯನ್ನು ಅಂಗೀಕರಿಸುವಾಗ ಕ್ರಿಸ್ತನೊಂದಿಗೆ ನಮ್ಮ ಅನ್ಯೋನ್ಯತೆ, ಆತನ ಪವಿತ್ರ ಸಭೆಯಲ್ಲಿ ನಮ್ಮ ಸದಸ್ಯತ್ವ, ಆತನ ಮರಣದಲ್ಲಿ ದೀಕ್ಷಾಸ್ನಾನ ಹೊಂದಿದ ದಿನದಿಂದಲೇ ನಮ್ಮ ಹೆಸರುಗಳು ಪರಲೋಕದಲ್ಲಿ ಬರೆಯಲ್ಪಟ್ಟಿರುವುದು ಇವುಗಳನ್ನು ನಾವು ಗ್ರಹಿಸುತ್ತೇವೆ. ಆದರೆ, ಯಾವಾಗ ಮತ್ತು ಹೇಗೆ ನಾವು ಕ್ರಿಸ್ತನ ಮರಣದಲ್ಲಿ ದೀಕ್ಷಾಸ್ನಾನ ಹೊಂದಿಕೊಳ್ಳುತ್ತೇವೆ? ನಾವು ನಮ್ಮ ಎಲ್ಲಾ ಚಿತ್ತವನ್ನೂ ಸಂಪೂರ್ಣವಾಗಿ ಕ್ರಿಸ್ತನಿಗೆ ಒಪ್ಪಿಸಿಕೊಟ್ಟವರಾಗಿ, ಮರಣದ ಪರ್ಯಂತ ಆತನಿಗೆ ವಿಧೇಯರಾಗಲು ನಮ್ಮನ್ನು ಪ್ರತಿಷ್ಠೆ ಪಡಿಸಿಕೊಂಡಾಗ ನಾವು ಮಿತಿಮೀರಿ ನಮ್ಮ ಶರೀರವನ್ನು ಅಂದರೆ ಐಹಿಕತೆಯನ್ನು ಹೂಣಲ್ಪಡುವುದರ ಫಲವಾಗಿ ನಾವು ಆತನ ದೇಹದ ಅಂಗಗಳಾಗಿ ಸಂಯೋಜಿಸಲ್ಪಡುತ್ತೇವೆ ಹಾಗೂ ಆ ಕ್ಷಣದಲ್ಲಿಯೇ ನೂತನ ಸೃಷ್ಟಿಗಳಾಗುತ್ತೇವೆ ಎಂದು ನಾವು ಇದಕ್ಕೆ ಉತ್ತರಿಸುತ್ತೇವೆ.

"ಚಿತ್ತ" (will) ಎಂಬುದು ಸಮಗ್ರ ವ್ಯಕ್ತಿಯನ್ನೂ, ಆತನು ಹೊಂದಿರುವುದೆಲ್ಲವನ್ನೂ ಪ್ರತಿನಿಧಿಸುತ್ತದೆ. ಚಿತ್ತಕ್ಕೆ ದೇಹದ, ಕೈಗಳ, ಪಾದಗಳ, ಕಣ್ಣಿನ, ಬಾಯಿಯ ಮತ್ತು ಮೆದುಳಿನ ನಿಯಂತ್ರಣವಿದೆ. ಇದಕ್ಕೆ ನಮ್ಮ ಜೇಬಿನ, ಬ್ಯಾಂಕ್ ಅಕೌಂಟಿನ, ಲೇವಾದೇವಿ, ಅಸ್ತಿಪಾಸ್ತಿಗಳ ನಿಯಂತ್ರಣವೂ ಸಹಾ ಇದೆ! ಇದು ನಮ್ಮ ಸಮಯವನ್ನು, ನಮ್ಮ ಮೇಧಾಶಕ್ತಿಯನ್ನು, ನಮ್ಮ ಪ್ರಭಾವವನ್ನೂ ನಿಯಂತ್ರಿಸುತ್ತದೆ. ಚಿತ್ತದ ನಿಯಂತ್ರಣ ಹೊಂದದ ಯಾವುದೇ ಬೆಲೆಬಾಳುವ ವಸ್ತುವೇ ಆಗಲಿ ನಮ್ಮಲ್ಲಿಲ್ಲ. ಆದುದರಿಂದ ನಾವು ನಮ್ಮ ಚಿತ್ತವನ್ನು ಅಥವಾ ದೇವರ ವಾಕ್ಯದಲ್ಲಿ ಕೆಲವೊಮ್ಮೆ ಹೇಳುವಂತೆ ನಮ್ಮ ಹೃದಯವನ್ನು ಕರ್ತನಿಗೆ ಒಪ್ಪಿಸಿಕೊಡುವಾಗ, ನಾವು ನಮ್ಮದೆಲ್ಲವನ್ನೂ ಆತನಿಗೆ ಒಪ್ಪಿಸಿಕೊಡುತ್ತೇವೆ. ಇದುವೇ ನಮ್ಮ ಮಾನವ ಚಿತ್ತವನ್ನು ಕ್ರಿಸ್ತನ ಚಿತ್ತದಲ್ಲಿ ಹೂಣುತ್ತೇವೆ. ಇದುವೇ ಕ್ರಿಸ್ತನಲ್ಲಿ ನಾವು ಮಾನವರಾಗಿ ಮರಣಹೊಂದುವುದಾಗಿದೆ –" ನೀವು ಸತ್ತಿರಲ್ಲಾ, ನಿಮ್ಮ ಜೀವವು ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿಬಿಟ್ಟಿದೆ" (ಕೊಲೊಸ್ಸೆ 3:3) ಈ ಮರಣ ಮತ್ತು ಹೂಣುವಿಕೆಯು ಆತನ ಮರಣದಲ್ಲಿ ನಾವು ಹೊಂದಿಕೊಳ್ಳುವ ದೀಕ್ಷಾಸ್ನಾನವಾಗಿದೆ. ಇಂದಿನಿಂದ, ದೇವರ ದೃಷ್ಟಿಯಲ್ಲಿ ನಾವು ನಮ್ಮನ್ನು ಮಾನವರೆಂದೂ, ಮಾನವ ಸ್ವಭಾವದವರೆಂದೂ, ಲೋಕದವರೆಂದೂ, ಲೋಕದ ಧ್ಯೇಯ, ಉದ್ದೇಶ ಮತ್ತು ನಿರೀಕ್ಷೆಯನ್ನು ಹೊಂದಿದವರೆಂದೂ ಎಣಿಸಿಕೊಳ್ಳುವಂತಿಲ್ಲ. ಆದರೆ ಕ್ರಿಸ್ತನಲ್ಲಿ ನೂತನ ಸೃಷ್ಟಿಗಳು ಎಂದು ಎಣಿಸಿಕೊಳ್ಳತಕ್ಕದ್ದು.

ಕ್ರಿಸ್ತನ ಚಿತ್ತದೊಂದಿಗೆ ನಮ್ಮ ಚಿತ್ತವನ್ನು ಹೂಣುವುದು ಅಥವಾ ಮುಣಿಗಿಸುವ ಈ ಘಟನೆಯಿಂದಾಗಿ ನಾವು ನೂತನ ಜೀವಿತವನ್ನು –ಅಂದರೆ ನೂತನ ಸ್ವಭಾವವನ್ನು ಪಡಕೊಳ್ಳುವುದರಲ್ಲಿ ಮುಂದುವರೆಯುತ್ತದೆ. ನಮ್ಮ ಕರ್ತನು ತನ್ನ ತಂದೆಯ ಚಿತ್ತವನ್ನು ನೆರವೇರಿಸಲು ತನ್ನ ಮಾನವ ಸ್ವಭಾವವನ್ನು ಮರಣದವರೆಗೆ ಪ್ರತಿಷ್ಠಿಸಿಕೊಂಡರೂ ಮರಣದಲ್ಲಿ ಉಳುಕೊಳ್ಳದೆ, ಸತ್ತವರಿಂದ ಜೀವಿತನಾಗಿ ನೂತನ ಸ್ವಭಾವವನ್ನು ಪಡಕೊಂಡಂತೆ ನಾವು ಸಹಾ ಆತನಿಗೆ ಪ್ರತಿಷ್ಠೆ ಹೊಂದಿಕೊಳ್ಳುವುದರ ಮೂಲಕ "ಆತನಲ್ಲಿ ಮರಣಹೊಂದುತ್ತೇವೆ", ಆತನ ಪ್ರತಿಷ್ಠೆಯಲ್ಲಿ ಪಾಲುಗಾರರಾಗು

ವುದರಿಂದ ಮರಣಾವಸ್ಥೆಯಲ್ಲಿ ಇರುವವರಲ್ಲ. ಆದರೆ ಕ್ಷಣಮಾತ್ರದಲ್ಲಿ ದೇವರೊಡನೆ ನಮ್ಮ ಸಂಬಂಧವನ್ನು ಅರಿತವರಾಗಿ ನಂಬಿಕೆಯ ಮೂಲಕ ನೂತನ ಸೃಷ್ಟಿಗಳಾಗಿ ಎಬ್ಬಿಸಲ್ಪಡುತ್ತೇವೆ. ಆದುದರಿಂದ ಅಪೋಸ್ತಲನು –**"**ನಿಮ್ಮಲ್ಲಿ ದೇವರಾತ್ಮನು ವಾಸವಾಗಿರುವುದಾದರೆ ನೀವು ಶರೀರ ಭಾವಾಧೀನರಲ್ಲ. ದೇವರಾತ್ಮನಿಗೆ ಅಧೀನರಾಗಿದ್ದೀರಿ. ಕ್ರಿಸ್ತನು ನಿಮ್ಮಲ್ಲಿ ವಾಸಿಸುವವನಾಗಿದ್ದಾನೆ**"** (ರೋಮಾ. 8:9). ಪ್ರಪಂಚದವರಿಗೆ ಇದೆಲ್ಲವೂ ಮರೆಯಾಗಿರುವ ರಹಸ್ಯವಾಗಿದೆ (ಸಂಪುಟ I ಅಧ್ಯಾಯ V ನೋಡಿರಿ). ದೇವರ ದೃಷ್ಟಿಯಲ್ಲಿ ನಂಬಿಕೆಯ ಮೂಲಕ ನಾವು ನೀತಿವಂತರಾಗಿರುವುದನ್ನು ಅವರು ಒಪ್ಪಿಕೊಳ್ಳುವುದಿಲ್ಲ. ಆದರೆ ಬೇರೆಯವರಂತೆ ನಾವು ಇನ್ನೂ ಸಹಾ ಪಾಪದಲ್ಲಿಯೇ ಇದ್ದೇವೆಂದು ಎಣಿಸುತ್ತಾರೆ. ನಾವು ಯಾತಕ್ಕಾಗಿ ನಮ್ಮನ್ನು ಅರ್ಪಿಸಿಕೊಳ್ಳಬೇಕು ಅಥವಾ ನಮ್ಮ ಚಿತ್ತವನ್ನು ಕರ್ತನಿಗೆ ಪ್ರತಿಷ್ಠಿಸಿಕೊಳ್ಳಬೇಕು, ಮತ್ತು ಸತ್ತ ಮಾನವರಂತಾಗಿ ಆ ಮೂಲಕ ನೂತನ ಸೃಷ್ಟಿಗಳಾಗಿ ಆತನಲ್ಲಿ ಪಾಲು ಹೊಂದುತ್ತೇವೆ ಎಂಬುದಕ್ಕೆ ಯಾವುದೇ ಕಾರಣವನ್ನು ಅವರು ಅರಿಯರು. ಅವರು ನಮ್ಮ ಸಮರ್ಪಣೆಯನ್ನಾಗಲೀ ಅದರ ಅಂಗೀಕಾರವನ್ನಾಗಲೀ ಕಾಣರು. ನೂತನ ಜೀವಿತಕ್ಕೆ, ನೂತನ ನಿರೀಕ್ಷೆಗಳಿಗೆ, ನೂತನ ಆಕಾಂಕ್ಷೆ, ದೇವರೊಂದಿಗೆ ಕ್ರಿಸ್ತನಲ್ಲಿ ನೂತನ ಸಂಬಂಧ ಮುಂತಾದ ನಮ್ಮ ಅಲಂಕಾರಿಕ ಸಚೇತನವನ್ನು ಅವರು ಮೆಚ್ಚಿಕೊಳ್ಳುವುದಿಲ್ಲ. ನಮ್ಮ ಜೀವಿತದ ಕೆಲವೊಂದು ಉತ್ತಮ ಫಲಗಳನ್ನು ಅವರು ಖಂಡಿತವಾಗಿಯೂ ಕಾಣುವರೆಂದು ನಾವು ನಂಬುತ್ತೇವಾದರೂ ಇವುಗಳು ಅವರಿಗೆ ಉತ್ತಮವಾದವುಗಳಾಗಿ, ವಿವೇಕವುಳ್ಳ ಅಥವಾ ಪ್ರಸ್ತುತ ಪರಿಸ್ಥಿತಿಯಲ್ಲಿ ಲಾಭದಾಯಕವಾದುದು ಎಂಬುದನ್ನು ಅವರು ಅರಿತುಕೊಳ್ಳುವರೆಂದು ನಾವು ನಿರೀಕ್ಷಿಸುವುದಿಲ್ಲ –**"ಲೋಕವು ನಮ್ಮನ್ನು ತಿಳಿದುಕೊಳ್ಳುವುದಿಲ್ಲ** (ನೂತನ ಸೃಷ್ಟಿಗಳನ್ನಾಗಿ), **ಅದು ಆತನನ್ನೂ ತಿಳಿದುಕೊಳ್ಳಲಿಲ್ಲವಲ್ಲಾ"** (1ಯೋಹಾನ 3:1)

ಇವೆಲ್ಲವುಗಳಲ್ಲಿಯೂ, ವಿಶ್ವಾಸಿಗಳು ಕ್ರಿಸ್ತನ ಹೆಜ್ಜೆಜಾಡನ್ನು ಅನುಸರಿಸುತ್ತಿದ್ದಾರೆ– ತಮ್ಮ ತಮ್ಮ ಶಿಲುಬೆಗಳನ್ನು ಹೊತ್ತುಕೊಂಡು ಆತನನ್ನು ಹಿಂಬಾಲಿಸುತ್ತಿದ್ದಾರೆ. ಪರಿಶುದ್ಧನೂ, ನಿರ್ದೋಷಿಯೂ, ನಿಷ್ಕಳಂಕನೂ, ಪಾಪಿಸಂತಾನದಿಂದ ಪ್ರತ್ಯೇಕಗೊಂಡವನೂ ಆದ ಯೇಸುವು ಪಾಪಗಳ ಯಾವುದೇ ಪ್ರಾಯಶ್ಚಿತ್ತ ಯಜ್ಞಕ್ಕಾಗಿ ಕಾಯಬೇಕಾಗಿರಲಿಲ್ಲ; ಯಾಕೆಂದರೆ ಆತನಿಗೆ ಯಾವ ಪಾಪವೂ ತಿಳಿಯದು–ಆದರೆ ಧರ್ಮಶಾಸ್ತ್ರದ ಪ್ರಕಾರ ಪುರುಷ ಪ್ರಾಯವನ್ನು (ಮೂವತ್ತು ವರ್ಷ) ಮುಟ್ಟಿದ ಕೂಡಲೇ ಆತನು ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳಲು ಸಿದ್ದನಾದನು. ತಂದೆಯ ಚಿತ್ತವನ್ನು ಮಾತ್ರವೇ ನೆರವೇರಿಸಲೋಸುಗ ಆತನು ಈ ಲೋಕದ ಎಲ್ಲಾ ಹಿತಾಸಕ್ತಿಗಳನ್ನು,ನಿರೀಕ್ಷೆಗಳನ್ನು, ಆಕಾಂಕ್ಷೆ ಮತ್ತು ಬಯಕೆಗಳನ್ನು ತ್ಯಾಗಮಾಡಿದನು.ಆತನು ಯೋರ್ದಾನ್ ನದಿಯಬಳಿ ಸ್ನಾನಿಕನಾದ ಯೋಹಾನನೆಡೆಗೆ ಬಂದಾಗ **"**ಇಗೋ, ದೇವರೇ, ನಿನ್ನ ಚಿತ್ತವನ್ನು ನೆರವೇರಿಸುವುದಕ್ಕೆ ಬಂದಿದ್ದೇನೆ, ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ**"** (ಇಬ್ರಿ.10:7,ಕೀರ್ತ.40:7–8)ಎಂಬ ಪ್ರವಾದನೆ ನೆರವೇರಿತು. ಆದುದರಿಂದ ನಮ್ಮ ಕರ್ತನು ದೇವರ ಚಿತ್ತಕ್ಕೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡನು. ಬಾಹ್ಯರೂಪವಾಗಿ ದೀಕ್ಷಾಸ್ನಾನದಲ್ಲಿ ತನ್ನ ಲೌಕಿಕ ಜೀವನ ಮತ್ತು ಸ್ವಚಿತ್ತವನ್ನು ತಂದೆಯ ಚಿತ್ತದಲ್ಲಿ ಐಕ್ಯಗೊಳಿಸಿ ಮರಣದ ಪರ್ಯಂತ ಅವುಗಳನ್ನು ಹೂಣಿಟ್ಟನು. ಆತನು ನೀರಿನಲ್ಲಿ ಮುಣಿಗಿದ್ದು ಸ್ನಾನದೀಕ್ಷೆಯ ಕೇವಲ ಸಾಂಕೇತಿಕ ನಿರೂಪಣೆಯಾಗಿತ್ತು. ಆತನ ಚಿತ್ತವನ್ನು ಹೂಣಿಡುವುದು ಇದನ್ನು ಹಿಂಬಾಲಿಸಿತು. ಈ ದೃಷ್ಟಿಕೋನದಿಂದ ಈ ದೀಕ್ಷಾಸ್ನಾನವು ಆತನಿಗೆ ಸಂಪೂರ್ಣವಾಗಿ ಅರ್ಥಗರ್ಭಿತವಾಗಿತ್ತು. ಆದರೆ ಯೋಹಾನನಿಗಾದರೋ ಹಾಗೆನಿಸದೆ "ಪಾಪರಹಿತ'ನೊಬ್ಬನು ಸ್ನಾನದೀಕ್ಷೆ ಪಡಕೊಂಡದ್ದು ಹೇಗೆಂದು ನಿಬ್ಬೆರಗಾದನು. ಯಾಕೆಂದರೆ ಆತನು ನೀಡುತ್ತಿದ್ದ ದೀಕ್ಷಾಸ್ನಾನವು ಧರ್ಮಶಾಸ್ತ್ರದ ವಿರುದ್ಧವಾಗಿ ಪಾಪಮಾಡಿದವರ ಪಾಪವಿಮೋಚನೆಯ ಸಲುವಾಗಿ ಇತ್ತು.

ನಮ್ಮ ಕರ್ತನಾದ ಯೇಸುಕ್ರಿಸ್ತನು ಮಾತ್ರವೇ ಧರ್ಮಶಾಸ್ತ್ರವನ್ನೆಲ್ಲಾ 'ಯೋಗ್ಯವಾಗಿ' ನೆರವೇರಿಸುವ ಅಗತ್ಯತೆಯನ್ನು ಮನಗಂಡಿದ್ದನು. ಇಂತಹ ಮುಳುಗುವಿಕೆಯು (ಪಾಪದಿಂದ ಶುದ್ಧೀಕರಣ ಹೊಂದುವ ಚಿತ್ರಣ) ತನಗೆ ಅಗತ್ಯವಿಲ್ಲದಿರುವಾಗ್ಯೂ ತನ್ನ ನಿರೀಕ್ಷಿತ ದೇಹಕ್ಕೆ ತಾನೇ ನಿರೀಕ್ಷಿತ ಶಿರಸ್ಸು ಎಂಬ ಕಾರಣದಿಂದಾಗಿ ಅದರ ಅಗತ್ಯತೆಯನ್ನು ಆತನು ಮಾತ್ರವೇ ಗ್ರಹಿಸಿದ್ದನು. ಇದು ಆತನ ಹಿಂಬಾಲಕರಿಗೆ ಅಂದರೆ ಇಸ್ರಾಯೇಲಿನ ಮನೆಯವರೇ ಆದ ತನ್ನ ದೇಹದ ಅಂಗಗಳಿಗೆ ಮಾತ್ರವೇ ಅಲ್ಲ, ಉಳಿದ ಎಲ್ಲಾ ಅನ್ಯರಿಗೂ ಪರಕೀಯರಿಗೂ ಒಂದು ನೀತಿಪಾಠವಾಗಬೇಕೆಂಬುದೇ ಆತನ ಉದ್ದೇಶವಾಗಿತ್ತು. ಆತನು ತನ್ನೆಲ್ಲಾ ಚಿತ್ತವನ್ನು ಆತನ ನಂತರ ಬರುವ ನಾವು ಆತನ ಹೆಜ್ಜೆಜಾಡನ್ನು ಅನುಸರಿಸುವಂತೆ ಸಂಪೂರ್ಣವಾಗಿ ಮರಣದ ಪರ್ಯಂತ ಒಪ್ಪಿಸಿಕೊಟ್ಟನು.

ನಮ್ಮ ಕರ್ತನು ಯೋಹಾನನಿಂದ ನೀರಿನ ದೀಕ್ಷಾಸ್ನಾನ ಹೊಂದಿದ್ದು ನಿಜವಾದದ್ದಲ್ಲ. ಅದು ಒಂದು ಚಿತ್ರಣ ಅಥವಾ ಉದಾಹರಣೆಯಾಗಿದೆ ಎಂಬುದು ಸ್ಪಷ್ಟವಾಗಿ ನಿರೂಪಿತವಾಗಿದೆ ಇದಕ್ಕೆ ಆಧಾರವಾಗಿ ಕರ್ತನು ರಾತ್ರಿ ಭೋಜನದ ಸಮಯದಲ್ಲಿ ಹೇಳಿರುವ ಮಾತುಗಳು– "ನಾನು ಹೊಂದತಕ್ಕ ದೀಕ್ಷಾಸ್ನಾನ ಒಂದುಂಟು, ಅದು ನೆರವೇರುವ ತನಕ ಎಷ್ಟೋ ಬಿಕ್ಕಟ್ಟಿನಲ್ಲಿದ್ದೇನೆ" (ಲೂಕ 12:50) ಎಂಬುದನ್ನು ಗಮನಿಸಿ. ಇಲ್ಲಿ ಕರ್ತನು ಅದು ನೀರಿನ ದೀಕ್ಷಾಸ್ನಾನವಲ್ಲ –ಆದರೆ ಅದು ಸಾವಿನ ದೀಕ್ಷಾಸ್ನಾನ–ದೀಕ್ಷಾಸ್ನಾನದ ಮರಣ–ಇದಕ್ಕೆ ಸಮಂಜಸವಾಗಿ ದೇವರು ಏರ್ಪಡಿಸಿರುವ ಮಾನವನಿಗಾಗಿ ಕೊಡುವ ಪಾಪ ಪರಿಹಾರದ ಬೆಲೆ, ವಿಮೋಚನಾ ಯಜ್ಞವೆಂದು ತೋರಿಸಿದ್ದಾನೆ.

ಈ ಮರಣ ದೀಕ್ಷಾಸ್ನಾನಕ್ಕೆ ಆತನು ಸಾಧ್ಯವಾದಷ್ಟು ಮುಂಚಿತವಾಗಿ ಅಂದರೆ ತಾನು ಮೂವತ್ತನೇ ವರ್ಷವನ್ನು ಪ್ರವೇಶಿಸಿದ ಕೂಡಲೇ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಮುಂದಿನ ಸುಮಾರು ಮೂರುವರೆ

ವರ್ಷಗಳಲ್ಲಿ ತನ್ನ ಸೇವೆಯಲ್ಲಿ ಪ್ರತಿಷ್ಠೆಯ ಎಲ್ಲಾ ಹಂಚಿಕೆಗಳನ್ನು–"ಪ್ರತಿನಿತ್ಯ ಸಾಯುವುದು', "ಮರಣದವರೆಗೆ ತನ್ನ ಆತ್ಮನನ್ನು ಸುರಿಸುವುದು" ಮುಂತಾದವುಗಳನ್ನು ತನ್ನ ಶಕ್ತಿ, ಚೇತನಗಳನ್ನೆಲ್ಲಾ ತನ್ನ ತಂದೆಯ ಸೇವೆಯಲ್ಲಿ, ತನ್ನ ಹಿಂಬಾಲಕರ ಸೇವೆಯಲ್ಲಿ, ಹೆಚ್ಚಿನ ಅರ್ಥದಲ್ಲಿ ತನ್ನ ವೈರಿಗಳ ಸೇವೆಯಲ್ಲಿಯೂ ಸಮರ್ಪಕವಾಗಿ ಉಪಯೋಗಿಸಿ ಜಾಗರೂಕತೆಯಿಂದ ಪಾಲಿಸಿದನು. ಕಡೆಗೆ, ಮರಣ–ದೀಕ್ಷಾಸ್ನಾನದ ಅಂತ್ಯದಲ್ಲಿ ಅದು ಪೂರ್ಣವಾಗಿ ನೆರವೇರುವಾಗ, ಅದರ ಭಾರವನ್ನು, ಅದರ ತಾಪತ್ರಯಗಳನ್ನು, ಸಂಕಟಗಳನ್ನು ಎದುರಿಸುವಾಗ ಅವು ಪ್ರತಿಕ್ಷಣ ಹೆಚ್ಚುತ್ತಾ ಹೆಚ್ಚುತ್ತಾ ಹೋಗುವಾಗ, ಸಂತೈಸಲು ಒಬ್ಬನೂ ಇರಲಿಲ್ಲ –"ಮನುಷ್ಯರಲ್ಲಿ ಯಾರೂ ಆತನೊಡನೆ ಇರಲಿಲ್ಲ" –ಯಾರೊಬ್ಬರೂ ಆತನ ಸಂಧರ್ಭಗಳನ್ನೂ, ಪರಿಸ್ಥಿತಿಗಳನ್ನೂ ಅರಿತುಕೊಳ್ಳಲಿಲ್ಲ. ಆತನ ಕಷ್ಟದಲ್ಲಿ ಪಾಲುಗಾರರಾಗಲು, ಆತನನ್ನು ಸಂತೈಸಲು ಯಾರೂ ಇಲ್ಲದಿರುವಾಗ ಆತನು – "ನಾನು ಹೊಂದತಕ್ಕ ದೀಕ್ಷಾಸ್ನಾನ ಒಂದುಂಟು. ಅದು ನೆರವೇರುವ ತನಕ ನಾನು ಎಷ್ಟೊ ಬಿಕ್ಕಟ್ಟಿನಲ್ಲಿದ್ದೇನೆ" (ಲೂಕ 12:50) ಎಂದು ಉದ್ಗರಿಸಿದನು. ಆತನ ಈ ದೀಕ್ಷಾಸ್ನಾನವು ಕಡೆಯಲ್ಲಿ ಆತನು "ತೀರಿತು" ಎಂದು ಹೇಳಿ ಪ್ರಾಣಬಿಟ್ಟಾಗ ನೆರವೇರಿತು.

ಕರ್ತನು ಮತ್ತು ಆತನ ದೇಹವಾದ ಸಭೆಯು ಮಾತ್ರವೇ ಮರಣಿಸುವುದಿಲ್ಲ. ಇಡೀ ಲೋಕವೇ ಮರಣಿಸುತ್ತಿದೆ. ಆದರೆ, ಕ್ರಿಸ್ತನ ದೇಹವಾದ ಸಭೆಯು ಪಾಲುತೆಗೆದುಕೊಳ್ಳುವಂತೆ ಈ ಲೋಕವು ಕ್ರಿಸ್ತನ ಮರಣದಲ್ಲಿ ಪಾಲುತೆಗೆದುಕೊಳ್ಳುವುದಿಲ್ಲ. ಇದರಲ್ಲಿ ಬಹಳ ಹೆಚ್ಚಾದ ಭಿನ್ನತೆ ಇದೆ. ಇಡೀ ಲೋಕವು ತಂದೆಯಾದ ಆದಾಮನ ಶಾಪದೊಂದಿಗೆ ಮರಣಹೊಂದಿತು. ಆದರೆ ನಮ್ಮ ಕರ್ತನು ಈ ಲೋಕದವನಲ್ಲ, ಆದಾಮನೊಂದಿಗೆ ಮರಣ ಹೊಂದಿದವನಲ್ಲ. ಈಗಾಗಲೇ ನೋಡಿರುವಂತೆ ಆತನ ಜೀವಿತವು ಪರಿಶುದ್ಧವಾಗಿತ್ತು, ಎಲ್ಲಾ ಪಾಪಿಗಳ ಜೀವಿತಕ್ಕಿಂತಲೂ ಪ್ರತ್ಯೇಕವಾಗಿತ್ತು, ಇದನ್ನು ಲೋಕದಲ್ಲಿದ್ದ ಆತನ ತಾಯಿಯು ಎದುರಿಸಲಾಗದೆ – ಆತನು ಈ ಶಿಕ್ಷೆಗೆ ಒಳಗಾದವನಲ್ಲವಾದರೆ ಆತನು ಸತ್ತದ್ದೇಕೆ? ಎಂದು ಪ್ರಶ್ನಿಸಿದಳು. (5ನೇ ಸಂಪುಟ 4ನೇಅಧ್ಯಾಯ ಓದಿರಿ). "ಆತನು ನಮ್ಮ ಪಾಪಗಳ ದೆಸೆಯಿಂದ ಸತ್ತನು" ಎಂದು ಸತ್ಯವೇದವು ಉತ್ತರಿಸುತ್ತದೆ. ಆತನ ಮರಣವು ತ್ಯಾಗವಾಗಿತ್ತು. ಅದರಂತೆ ಆತನ ದೇಹವಾದ ಸಭೆಯೂ ಸಹಾ ಆತನೊಂದಿಗೆ ಮರಣ ಹೊಂದುವುದಕ್ಕಾಗಿ ಸ್ನಾನದೀಕ್ಷೆ ಹೊಂದಿಕೊಂಡಿತು. ಸ್ವಾಭಾವಿಕವಾಗಿ ಆದಾಮನ ಮಕ್ಕಳು ಇತರರಂತೆ "ದೈವಕೋಪಕ್ಕೆ ಗುರಿಯಾದ ಮಕ್ಕಳು'. ಅವರು ಮೊದಲಿಗೆ ನಮ್ಮ ಕರ್ತನಾದ ಯೇಸುವಿನಲ್ಲಿ ಮತ್ತು ಆತನ ವಿಮೋಚನಾ ಕಾರ್ಯದಲ್ಲಿ ವಿಶ್ವಾಸವಿಡುವುದರ ಮೂಲಕ ಆದಾಮನ ಮರಣ ಶಿಕ್ಷೆಯಿಂದ ಜೀವ ಹೊಂದುವಂತೆ ನಿರ್ಣಯಿಸಲ್ಪಟ್ಟರು. ಅವರು ಕ್ರಿಸ್ತನೊಳಗೆ ದೀಕ್ಷಾಸ್ನಾನ ಹೊಂದುವ ಭಾಧ್ಯತೆ ಪಡೆದರು ಮತ್ತು ಆತನ ಪವಿತ್ರ ಸಭೆಯ ಅಂಗಗಳಾದರು ಮತ್ತು ಆತನ ಮರಣದಲ್ಲಿ ದೀಕ್ಷೆಹೊಂದುವುದರ ಮೂಲಕ ಮತ್ತು – ಆತನ ತ್ಯಾಗದ ಮರಣದಲ್ಲಿ ಜೊತೆ ತ್ಯಾಗಿಗಳಂತೆ ಪಾಲುಗಾರರಾದರು. ಅಹಾ! ಆದಾಮನಲ್ಲಿ ಮರಣಹೊಂದುವುದಕ್ಕೂ, ಕ್ರಿಸ್ತನಲ್ಲಿ ಮರಣ ಹೊಂದುವುದಕ್ಕೂ ಎಷ್ಟೋ ಅಗಾಧವಾದ ವ್ಯತ್ಯಾಸವುಂಟಲ್ಲವೆ !

ಈ ಮರಣದ ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಡನೆ ನಮ್ಮ ತ್ಯಾಗದ ಸಂಬಂಧ ಮತ್ತು ಇದರ ಫಲವಾದ ಮಹಿಮೆಯೊಂದಿಗೆ ಆತನೊಡನೆ ಇರುವ ಸಂಬಂಧಗಳನ್ನು ಮತ್ತು ಅದನ್ನು ಅನುಸರಿಸುವ ಅನ್ಯೋನ್ಯತೆ ಎಂಬ ಈ ಧಾರ್ಮಿಕ ರಹಸ್ಯವನ್ನು ಈ ಪ್ರಪಂಚದವರು ಗ್ರಹಿಸಲಾರರು. ಹೀಗಿದ್ದಾಗ್ಯೂ ಇದನ್ನು ಕರ್ತನ ನಂಬಿಗಸ್ತರು ಮೆಚ್ಚಿಕೊಳ್ಳುತ್ತಾರೆ ಮತ್ತು ಇದು ದೇವರ ಪರಿಶುದ್ಧ ಗ್ರಂಥದಲ್ಲಿ ದೃಢೀಕರಿಸಲ್ಪಟ್ಟಿದೆ:– "ನಾವು ಆತನೊಡನೆ ಸತ್ತಿದ್ದರೆ ಆತನೊಡನೆ ಜೀವಿಸುವೆವು; ಸಹಿಸಿಕೊಳ್ಳುವವರಾಗಿದ್ದರೆ, ಆತನೊಡನೆ ಆಳುವೆವು"(2ತಿಮೋ. 2:11–12)"ನಾವು ಕ್ರಿಸ್ತನೊಡನೆ ಸತ್ತಪಕ್ಷದಲ್ಲಿ ಆತನೊಡನೆ ಜೀವಿಸುವೆವೆಂದು ನಂಬುತ್ತೇವೆ" (ರೋಮಾ. 6:8) "ಕ್ರಿಸ್ತನಿಗೆ ಸಂಭವಿಸಿದ ಬಾಧೆಗಳಲ್ಲಿ ನಾವು ಪಾಲುಗಾರರಾಗುವುದಾದರೆ [ಆತನ ದೇಹದ ಸದಸ್ಯರಾಗಿ ಆತನೊಂದಿಗೆ ಮರಣ ದೀಕ್ಷಾಸ್ನಾನ ಅನುಭವಿಸಿದರೆ] ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" (ರೋಮಾ. 8 :17)

ನಾವು ಪರಿಶೀಲಿಸುತ್ತಿರುವ ರೋಮಾಪುರದವರಿಗೆ ಬರೆದ ಪತ್ರಿಕೆ 6ನೇ ಅಧ್ಯಾಯದ ನಾಲ್ಕನೆಯ ವಚನದಲ್ಲಿ ಅಪೋಸ್ತಲನು ಇದೇ ಆಲೋಚನೆಯನ್ನು ಮತ್ತೊಂದು ದೃಷ್ಟಿಕೋನದಲ್ಲಿ ಹೀಗೆ ಪುನರುಚ್ಚರಿಸುತ್ತಾನೆ "ನಾವು ದೀಕ್ಷಾಸ್ನಾನ ಮಾಡಿಸಿಕೊಂಡಾಗ ಆತನ ಮರಣದಲ್ಲಿ ಪಾಲುಗಾರರಾಗಿ ಆತನೊಂದಿಗೆ ಹೂಣಲ್ಪಟ್ಟೆವು." ಪುನಃ ನೀರಿನ ದೀಕ್ಷಾಸ್ನಾನದ ಬಗ್ಗೆ ಯಾವುದೇ ಸಲಹೆಗಳಿಲ್ಲ, ಆದರೆ ಮರಣದಲ್ಲಿ ನಮ್ಮನ್ನು ಸಮರ್ಪಿಸಿಕೊಳ್ಳುವ ಮರಣ ದೀಕ್ಷಾಸ್ನಾನದ ಬಗ್ಗೆ ಸಕಾರಾತ್ಮಕವಾದ ಹೇಳಿಕೆ ಇದೆ. ಮುಂದೆ ಸಾಗುತ್ತಾ, ಅಪೋಸ್ತಲನು ಈ ಚಿತ್ರಣವನ್ನು ಮುಂದುವರಿಸಿ ಕ್ರಿಸ್ತನಲ್ಲಿ ನಾವು ಮರಣ ಹೊಂದಲು ಇರುವ ಕಾರಣಗಳನ್ನು ವಿವರಿಸುತ್ತಾ "ಕ್ರಿಸ್ತನು ಸತ್ತಮೇಲೆ ದೇವರ ಮಹಿಮೆಯಿಂದ ಜೀವಿತನಾಗಿ ಎದ್ದುಬಂದದ್ದರಿಂದ, ನಾವು ಸಹಾ ನೂತನ ಜೀವಿತವನ್ನು ಹೊಂದಿಕೊಳ್ಳಬೇಕು" ಎಂದು ಹೇಳುವವನಾಗಿದ್ದಾನೆ. ಇಲ್ಲಿ ಅಪೋಸ್ತಲನು ನಾವು ಕ್ರಿಸ್ತನ ಮಹಿಮೆಯ ರಾಜ್ಯದಲ್ಲಿ ಪಾಲ್ಗೊಳ್ಳುವಾಗ ಪ್ರಥಮ ಪುನರುತ್ಥಾನದಲ್ಲಿ ನಮಗಿರುವ ಪಾಲನ್ನು ಪರೋಕ್ಷವಾಗಿ ಸೂಚಿಸುತ್ತಾನೆ; ಆತನು ಪ್ರಮುಖವಾಗಿ ಪ್ರಸ್ತುತ ಜೀವನವನ್ನು ಸೂಚಿಸುತ್ತಾನೆ. ಯಾರು ನಮ್ಮ ಕರ್ತನಿಗೆ ತಮ್ಮ ಸಂಪೂರ್ಣ ಜೀವಿತವನ್ನು ಪ್ರತಿಷ್ಠೆಗೊಳಿಸುತ್ತಾರೋ ಅಂದರೆ ಆತನೊಡನೆ ಮರಣ ಹೊಂದುತ್ತಾರೋ, ಸತ್ಯದ ಸೇವೆಯಲ್ಲಿ ಆತನೊಡನೆ ಸಹತ್ಯಾಗಿಗಳಾಗಿರುತ್ತಾರೋ ಅಂಥವರು ಈ ಲೋಕದಲ್ಲಿ ಜೀವಿಸುವಾಗ ತಾವು ಇತರರಿಗಿಂತ ಭಿನ್ನರಾದವರೆಂದು ಭಾವಿಸಿಕೊಳ್ಳಬೇಕು. ಇತರರನ್ನು ಒತ್ತಿಹಿಡಿದಿರುವ ಲೌಕಿಕ ಸಂಗತಿಗಳಿಗೆ ಅವರು ಸಾಯುತ್ತೇವೆಂಬ ಒಡಂಬಡಿಕೆ ಮಾಡಿಕೊಳ್ಳುತ್ತಾರೆ ಮತ್ತು ಇವರನ್ನು ಮಾತ್ರ ನೂತನ ಸೃಷ್ಟಿಯ

ಸೇವಕರುಗಳನ್ನಾಗಿ ಉಪಯೋಗಿಸುತ್ತಾರೆ. ನೂತನ ಸೃಷ್ಟಿಗಳು ವಿಮೋಚಕನ ಮೂಲಕವಾಗಿ ಪರಲೋಕದ ಸಂಗತಿಗಳ ಪ್ರತೀಕ್ಷೆಗಳಿಗಾಗಿ ಜೀವಿಸುತ್ತಾರೆ. ಇವರನ್ನು ನಮ್ಮ ಸುತ್ತಲಿರುವ ಪ್ರಪಂಚದವರು ನೋಡುವುದೂ ಇಲ್ಲ, ಅರ್ಥ ಮಾಡಿಕೊಳ್ಳುವುದೂ ಇಲ್ಲ. ಇದಕ್ಕೆ ಸಾಮರಸ್ಯವಾಗಿ ಈ ಪ್ರಪಂಚದಲ್ಲಿ ನಮ್ಮ ಜೀವಿತವು ನೂತನವಾಗಿರಬೇಕು, ಭಿನ್ನವಾಗಿರಬೇಕು ಮತ್ತು ಪ್ರತ್ಯೇಕತೆಯಿಂದ ಕೂಡಿದ್ದಾಗಿರಬೇಕು. ಯಾಕೆಂದರೆ ನಾವು ನೂತನ ಆತ್ಮನೊಂದಿಗೆ ಪರಲೋಕದ ನೂತನ ನಿರೀಕ್ಷೆ ಮತ್ತು ನೂತನ ಧ್ಯೇಯೆಗಳೊಂದಿಗೆ ಉತ್ತೇಜಿಸಲ್ಪಟ್ಟಿದ್ದೇವೆ.

ಮುಂದಿನ ಐದನೆಯ ವಚನಕ್ಕೆ ಬರುವಾಗ, ಅಪೋಸ್ತಲನು ಇನ್ನೂ ಸಹಾ ನೀರಿನ ದೀಕ್ಷಾಸ್ನಾನದ ಬಗ್ಗೆ ಒಂದು ಚಿಕ್ಕ ಸೂಚನೆಯನ್ನೂ ಮಾಡುವುದಿಲ್ಲ. ಆದರೆ ಕೆಲವರು ಆತನ ಮುಂದಿನ ಮಾತುಗಳನ್ನು ಬೇರೆ ರೀತಿಯಾಗಿಯೇ ತಿಳುಕೊಂಡಿರಬಹುದು– "ನಾವು ಆತನ ಮರಣಕ್ಕೆ ಸಾದೃಶವಾದ ಮರಣವನ್ನು ಹೊಂದಿ ಆತನಲ್ಲಿ ಐಕ್ಯವಾಗಿದ್ದರೆ ಆತನ ಪುನರುತ್ಥಾನಕ್ಕೆ ಸಾದೃಶವಾದ ಪುನರುತ್ಥಾನವನ್ನೂ ಹೊಂದಿ ಆತನಲ್ಲಿ ಐಕ್ಯವಾಗುವೆವು" (ರೋಮಾ.6:5). "ಮರಣಕ್ಕೆ ಸಾದೃಶವಾದ ಮರಣ" ಎಂಬುದನ್ನು ನೀರಿನ ದೀಕ್ಷಾಸ್ನಾನ ಎಂದು ಅರ್ಥೈಸುವುದಾದರೆ, ಈ ಲೋಕದ ಯಾವುದೇ ಬೋಧಕನು ಒಪ್ಪಿಕೊಳ್ಳಲಾಗದ ಮಟ್ಟಿಗೆ ಅದು ನೀರಿನ ದೀಕ್ಷಾಸ್ನಾನಕ್ಕೆ ಒತ್ತುಕೊಡುವುದಾಗುತ್ತದೆ. ಕ್ರೈಸ್ತರಾಗಿ ನಾವು ನಿಷ್ಠೆಯಿಂದ ನಿರೀಕ್ಷಿಸುವುದಾದರೂ ಏನು? ನಾವು ನಮ್ಮ ಕರ್ತನ ಪುನರುತ್ಥಾನದ ಪ್ರಥಮ ಪುನರುತ್ಥಾನದಲ್ಲಿ ಪಾಲುಗಾರರಾಗಬೇಕೆಂಬುದಲ್ಲವೆ? ಅಪೋಸ್ತಲನು ಇದನ್ನು ತನ್ನ ಮನದ ಮುಂದಿನ ಒಂದು ಭವ್ಯವಾದ ಆದರ್ಶವೆಂಬಂತೆ "ಕ್ರಿಸ್ತನನ್ನೂ ಆತನ ಪುನರುತ್ಥಾನದಲ್ಲಿರುವ ಶಕ್ತಿಯನ್ನೂ (ಆತನ ದೇಹ ಸದಸ್ಯನಾಗಿ) ಆತನ ಬಾಧೆಗಳಲ್ಲಿ ಪಾಲುಗಾರನಾಗಿರುವ ಪದವಿಯನ್ನೂ ತಿಳುಕೊಂಡು ಆತನ ಮರಣದ ವಿಷಯದಲ್ಲಿ ಆತನಿಗೆ ಸರೂಪವಾಗಬೇಕೆಂಬುದೇ ನನ್ನ ಕುತೂಹಲವಾಗಿದೆ ಹೀಗಾದರೆ ಸತ್ತವರಲ್ಲಿ ಕೆಲವರಿಗೆ ಆಗುವ ಪುನರುತ್ಥಾನವು ನನಗೆ ಒದಗಿ ಬಂದೀತು." (ಫಿಲಿಪ್ಪಿ 3:10–11) ಎಂದಿದ್ದಾನೆ. ನಾವೀಗ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಪಡೆಯುವುದರ ನಿಶ್ಚಿತ ಫಲವೆಂದರೆ ಕ್ರಿಸ್ತನ ಪುನರುತ್ಥಾನದಲ್ಲಿ ಪಾಲುಗಾರರಾದಂತೆ ಎಂದು ಅರ್ಥ ಮಾಡಿಕೊಳ್ಳುವುದು ರೋಮಾಪುರ 6:5ನೇ ವಚನದ ಈ ವಾಕ್ಯಭಾಗವನ್ನು ಇತರ ವಾಕ್ಯಭಾಗಗಳೊಂದಿಗೆ ವ್ಯತಿರಿಕ್ತವಾಗಿ ಮಾಡಿದಂತಾಗುತ್ತದೆ. ಇದು ಘಾತಕತನದ ಉದ್ದೇಶವೆನಿಸುತ್ತದೆ. ನೀರಿನಲ್ಲಿ ನೆಡುವಿಕೆ ಅಥವಾ ಮುಳುಗಿಸುವಿಕೆಯು ಪ್ರಥಮ ಪುನರುತ್ಥಾನದಲ್ಲಿ ಪಾಲುದಾರಿಕೆ ಎಂದು ಏತಕ್ಕಾಗಬೇಕು? ಸಾವಿರಾರು ಜನರು ನೀರಿನಲ್ಲಿ ನೆಡಲ್ಪಟ್ಟಿದ್ದಾರೆ, ಮುಳುಗಿಸಲ್ಪಟ್ಟಿದ್ದಾರೆ, ಅಥವಾ ಹೂಣಲ್ಪಟ್ಟಿದ್ದಾರೆ. ಇವರೆಲ್ಲರೂ ಎಂದಿಗೂ ಕ್ರಿಸ್ತನ ಪುನರುತ್ಥಾನವಾದ ಆ ಪ್ರಥಮ ಪುನರುತ್ಥಾನದ ಪಾಲುಗಾರರಾಗುವುದಿಲ್ಲ ಎಂದು ತಿಳುಕೊಳ್ಳುವುದೇ ಮೇಲು.

ಆದರೆ ಈ ವಚನವನ್ನು ಹಿಂದಿನ ಎರಡು ವಚನಗಳ ಸಾಮರಸ್ಯದೊಂದಿಗೆ ನಾವು ಅರ್ಥಮಾಡಿಕೊಳ್ಳುವುದಾದರೆ ಮರಣದಲ್ಲಿ ದೀಕ್ಷಾಸ್ನಾನ ಹೊಂದುವುದು, ಮರಣದಲ್ಲಿ ನೆಡಲ್ಪಡುವುದು, ಕ್ರಿಸ್ತನ ಕೂಡ ಶಿಲುಬೆಗೆ ಹಾಕಲ್ಪಡುವ ರೀತಿಯಲ್ಲಿ ಇವುಗಳೆಲ್ಲವೂ ಸರಳವಾಗಿಯೂ ಮತ್ತು ವಿವೇಚನಾಯುಕ್ತವಾಗಿ ಕೂಡಿದೆಯೆಂಬದಾಗಿ ಕಂಡುಬರುತ್ತದೆ ನಮ್ಮ ಕರ್ತನಿಂದ ಆತನ ಮಗನೊಂದಿಗೆ ಜೊತೆ ವಾರಸುದಾರ ರಾಗುವುದಾಕ್ಕೂ, ಆತನೊಂದಿಗೆ ಶ್ರಮೆಹೊಂದುವುದಕ್ಕೂ, ಆತನೊಂದಿಗೆ ಮರಣಹೊಂದುವುದಕ್ಕೂ, ಆತನೊಂದಿಗೆ ಜೀವಿಸುವುದಕ್ಕೂ, ಆತನೊಂದಿಗೆ ಆಳುವುದಕ್ಕೂ ಕರೆಯಲ್ಪಡುವಾಗ, ನಾವು ಈ ಕರೆಗೆ ನಿಷ್ಠೆಯಿಂದಿರುವುದಾದಲ್ಲಿ ನಾವು ಆತನಂತೆ ಮರಣದಲ್ಲಿ ಖಚಿತವಾಗಿ ನೆಲೆಗೊಂಡಿದ್ದರೆ, ಹೂಣಲ್ಪಟ್ಟಿದ್ದರೆ ದೇವರ ಪ್ರಾಮಾಣಿಕ ಸೈನಿಕರಂತೆ, ಸತ್ಯದ ಸೇವಕರಂತೆ ದೇವರು ವಾಗ್ದಾನ ಮಾಡಿರುವ ಬಹುಮಾನವನ್ನು ಅಂದರೆ ಪ್ರಥಮ ಪುನರುತ್ಥಾನ ಅಂದರೆ ಕ್ರಿಸ್ತನ ಪುನರುತ್ಥಾನದಲ್ಲಿ ಪಾಲನ್ನು ಅದರ ಮಹಿಮೆ, ಗೌರವ ಮತ್ತು ಅಮರತ್ವಗಳನ್ನು ಹೊಂದಬಹುದಲ್ಲವೆ?

ಮರಣದಲ್ಲಿ ದೀಕ್ಷಾಸ್ನಾನ ಹೊಂದಿಕೊಳ್ಳುವುದೇ ಕ್ರೈಸ್ತ ಸಭೆಯ ನಿಜವಾದ ದೀಕ್ಷಾಸ್ನಾನವಾಗಿದೆ. ಯಾಕೆಂದರೆ, ಇದುವೇ ನಮ್ಮ ಕರ್ತನ ನಿಜವಾದ ದೀಕ್ಷಾಸ್ನಾನವಾಗಿತ್ತು; ನೀರಿನ ದೀಕ್ಷಾಸ್ನಾನವೆಂಬುದು ಆತನಿಗಿದ್ದಂತೆ ನಮಗೂ ಸಹಾ ಅದರ ಕೇವಲ ಸಂಕೇತ ಅಥವಾ ಚಿತ್ರಣ ಮಾತ್ರ. ಇದು ಯೇಸುವಿನ ಇಬ್ಬರು ಶಿಷ್ಯಂದಿರುಗಳಾದ ಯಾಕೋಬ ಮತ್ತು ಯೋಹಾನರು ದೇವರ ರಾಜ್ಯದಲ್ಲಿ ಯೇಸುವಿನ ಬಲಬದಿಗೆ ಒಬ್ಬನೂ, ಎಡಬದಿಗೆ ಒಬ್ಬನೂ ಕುಳಿತುಕೊಳ್ಳ ಬಯಸಿದಾಗ ನಮ್ಮ ಕರ್ತನು ಅವರಿಗೆ ಹೇಳಿದ ಮಾತುಗಳಲ್ಲಿ ನಿರ್ಧಾರಾತ್ಮಕವಾಗಿ ತೋರಿ ಬರುತ್ತದೆ. ಆತನು ಅವರಿಗೆ "ನೀವು ಬೇಡಿಕೊಂಡದ್ದು ಏನೆಂದು ನಿಮಗೆ ತಿಳಿಯದು. ನನಗಾಗುವ ದೀಕ್ಷಾಸ್ನಾನವನ್ನು ಹೊಂದುವುದು ನಿಮ್ಮಿಂದಾದೀತೆ?" ಎಂದು ಪ್ರಶ್ನಿಸುತ್ತಾನೆ. ಪಾಲುಹೊಂದುವ ಅವರ ಬಹಿರಂಗ ಒಪ್ಪುವಿಕೆಯು ಆತನ ಅವಮಾನವನ್ನು ಮಾತ್ರವಲ್ಲ, ಮರಣದಲ್ಲಿ ಆತನ ದೀಕ್ಷಾಸ್ನಾನದಲ್ಲಿಯೂ ಆಗಿತ್ತು. ನಮ್ಮ ಕರ್ತನು ಇದನ್ನು ಒಪ್ಪುತ್ತಾ "ನಾನು ಕುಡಿಯುವ ಪಾತ್ರೆಯಲ್ಲಿ ಕುಡಿಯುವಿರಿ; ನನಗಾಗುವ ಸ್ನಾನವು ನಿಮಗಾಗುವುದು" (ಮಾರ್ಕ 10:35–39) ಎಂದು ಹೇಳುತ್ತಾನೆ. ಆತನು ಕರೆಯುವವರಲ್ಲಿ ಯಾರು ಹೃದಯ ಪೂರ್ವಕವಾಗಿ ಈ ಅನುಭವಗಳನ್ನು ಒಪ್ಪಿಕೊಳ್ಳುತ್ತಾರೋ ಅಂಥವರಿಗೆ ಆತನು ಸವಲತ್ತುಗಳನ್ನು ಮತ್ತು ಆತನ ಸಹಾಯಗಳನ್ನು ದಯಪಾಲಿಸುತ್ತಾನೆ. ಅವರುಗಳು ಖಂಡಿತವಾಗಿಯೂ ಆತನ ಮರಣದಲ್ಲಿ ಪಾಲುಹೊಂದುವರು. ಇದರ ಪರಿಣಾಮವಾಗಿ ಅವರು ಆತನ ಪ್ರಥಮ ಪುನರುತ್ಥಾನದಲ್ಲಿ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ರಾಜ ವೈಭೋಗಗಳಲ್ಲಿಯೂ ಪಾಲು ಹೊಂದುವರು. ಇಲ್ಲಿ ನಮ್ಮ ಕರ್ತನು ನೀರಿನ ದೀಕ್ಷಾಸ್ನಾನದ ಬಗ್ಗೆ ಉಲ್ಲೇಖಿಸದಿರುವುದು ಸ್ಪಷ್ಟವಾಗಿದೆ: ಈ ಇಬ್ಬರು ಶಿಷ್ಯರುಗಳು ಆತನೊಂದಿಗೆ ಆತನ ಸೇವೆಯ ಆರಂಭದಿಂದಲೂ ಇದ್ದವರು ಮತ್ತು ಆತನ

ಪ್ರತಿನಿಧಿಗಳಾಗಿ ದೊಡ್ಡ ಸಂಖ್ಯೆಯಲ್ಲಿ ಜನರಿಗೆ ಅವರ ಪಾಪಗಳ ಪಶ್ಚಾತ್ತಾಪಕ್ಕಾಗಿಯೂ, ವಿಮೋಚನೆಗಾಗಿಯೂ ನೀರಿನಿಂದ ಯೋಹಾನನ ದೀಕ್ಷಾಸ್ನಾನ ನೀಡಿದವರು (ಯೋಹಾ.3:22–23; 4:1,2; ಮಾರ್ಕ1:4). ನಮ್ಮ ಕರ್ತನು ಅವರಿಗೆ ತನ್ನ ದೀಕ್ಷಾಸ್ನಾನದಲ್ಲಿ ಪಾಲು ತೆಗೆದುಕೊಳ್ಳಬೇಕೆಂದು ಹೇಳಿದ್ದನ್ನು ಅಪೋಸ್ತಲರು ತಪ್ಪಾಗಿ ತಿಳಿಯಲಿಲ್ಲ. ಮತ್ತೊಮ್ಮೆ ನೀರಿನಲ್ಲಿ ದೀಕ್ಷಾಸ್ನಾನ ಪಡಕೊಳ್ಳಬೇಕೆಂದು ಆತನು ಹೇಳಿದನೆಂಬ ಆಲೋಚನೆ ಅವರಿಗೆ ಉಂಟಾಗಲಿಲ್ಲ. ಅವರ ಚಿತ್ತವನ್ನು ಆತನ ಚಿತ್ತದೊಂದಿಗೆ ಮತ್ತು ತಂದೆಯ ಚಿತ್ತದೊಂದಿಗೆ ದೀಕ್ಷಾಸ್ನಾನ ಮಾಡಿಕೊಳ್ಳುವುದು ಮತ್ತು ಅದೇ ಪ್ರಕಾರ ಆತನ ತ್ಯಾಗದಲ್ಲಿಯೂ ಭಾಗವಹಿಸುವುದು– ಅಂತ್ಯದವರೆಗೆ ಪ್ರತಿನಿತ್ಯ ಸಾಯುವುದು, ಸಹೋದರರಿಗಾಗಿ ತಮ್ಮ ಪ್ರಾಣವನ್ನೇ ಅರ್ಪಿಸುವುದು ಎಂಬುದನ್ನು ಅವರು ಅರ್ಥಮಾಡಿಕೊಂಡಿದ್ದರು:

## "ನಾವೆಲ್ಲರೂ ಒಂದೇ ದೇಹವಾಗುವುದಕ್ಕಾಗಿ, ಒಂದೇ ಆತ್ಮನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡೆವು"

**–1 ಕೊರಿಂಥ. 12:12,13 –**

## By one Spirit we are all baptized into one body"- 1Cori. 12:12,13,

ಮರಣದಲ್ಲಿ ನಮ್ಮ ದೀಕ್ಷಾಸ್ನಾನ ಎನ್ನುವಾಗ, ಕರ್ತನೊಂದಿಗೆ "ಆತನ ಮರಣದಲ್ಲಿ" ಎನ್ನುವುದನ್ನು ಪವಿತ್ರಾತ್ಮನ ದೀಕ್ಷಾಸ್ನಾನವೆಂದು ಯಾರೊಬ್ಬರೂ ಅಪೋಸ್ತಲನನ್ನು ತಪ್ಪಾಗಿ ಅರ್ಥಮಾಡಿಕೊಳ್ಳದಿರಲಿ. "ಮರಣ' ಮತ್ತು "ಪವಿತ್ರಾತ್ಮ' ಈ ಎರಡು ದೀಕ್ಷಾಸ್ನಾನಗಳು ವಿಭಿನ್ನವಾದವುಗಳು. ಮರಣದಲ್ಲಿ ದೀಕ್ಷಾಸ್ನಾನ ಹೊಂದುವುದು ವೈಯುಕ್ತಿಕವಾದ ಸಂಗತಿ. ಇದರಲ್ಲಿ ಕ್ರಿಸ್ತನ ದೇಹದ ಅಂಗಗಳಾಗುವ ಪ್ರತಿಯೊಬ್ಬರೂ ವ್ಯಕ್ತಿಗತವಾಗಿ ತನ್ನನ್ನು ಪ್ರತಿಷ್ಠೆಗೊಳಿಸಿಕೊಳ್ಳಬೇಕು ಮತ್ತು ತನ್ನ ಚಿತ್ತವನ್ನು ತ್ಯಾಗ ಮಾಡಬೇಕು. ತರುವಾಯ, ಆತನ ತ್ಯಾಗವು ಅಂಗೀಕರಿಸಲ್ಪಡುತ್ತದೆ. ಕರ್ತನು ತಾನೇ ತನ್ನ ಆತ್ಮನ ಮೂಲಕವಾಗಿ ಪ್ರತಿಯೊಬ್ಬನೂ ಸತ್ಯದ ಸೇವೆಗಾಗಿ, ತನ್ನ ಸಹೋದರರ ಸೇವೆಗಾಗಿ ತನ್ನ ಜೀವಿತವನ್ನು ಮರಣದ ಪರ್ಯಂತ ಮುಡುಪಾಗಿಡುವಂತೆ ಸಹಾಯ ಮಾಡುತ್ತಾನೆ. ಪವಿತ್ರಾತ್ಮ ಸ್ನಾನವೆಂಬುದು ಸಮಗ್ರ ಸಭೆಗೆ ಉಂಟಾಗುವ ಏಕೈಕ ಸ್ನಾನ. ಇದು ಮೇಲುಪ್ಪರಿಗೆಯಲ್ಲಿ ಪಂಚಾಶತ್ತಮಹಬ್ಬದಂದು ಉಂಟಾಗಿತ್ತು. ಇದರ ಪುನರಾವರ್ತನೆಯ ಅವಶ್ಯವಿಲ್ಲ. ಯಾಕೆಂದರೆ, ಅಂದಿನಿಂದ ಇಂದಿನವರೆಗೂ ಇದು ಸಭೆಯಲ್ಲಿ ಸತತವಾಗಿ ನೆಲೆಯಾಗಿರುವುದು. ಕೆಲವೊಂದು ಬಾಹ್ಯ ಪ್ರಮಾಣಗಳು ಕೊರ್ನೇಲ್ಯನ ಪ್ರಕರಣದಲ್ಲಿ ನೀಡಲ್ಪಟ್ಟಿದೆ. ಇದು ಕೇವಲ ಪೇತ್ರನ ಮತ್ತು ಎಲ್ಲಾ ಯೆಹೂದ್ಯ ವಿಶ್ವಾಸಿಗಳ ಮತ್ತು ಕೊರ್ನೇಲ್ಯ ಮತ್ತು ಅಲ್ಲಿನ ವರೆಗಿನ ಎಲ್ಲಾ ಅನ್ಯಜನರ ಸಾಕ್ಷಿಗಾಗಿ ಮಾತ್ರ. ದೇವರು ಯೆಹೂದ್ಯರೆಂದಾಗಲೀ, ಅನ್ಯಜನರೆಂದಾಗಲೀ ಯಾವುದೇ ಬೇಧಭಾವವನ್ನು ತೋರುವುದಿಲ್ಲ ಎಂದು ತಿಳಿಸುವ ಸಲುವಾಗಿ. ಪಂಚಾಶತ್ತಮದ ಮುಣಿಗಿಸುವಿಕೆಯು ಮೇಲುಪ್ಪರಿಗೆ ಮನೆಯಲ್ಲಿ ಪವಿತ್ರಾತ್ಮನು ಇಳಿದು ಬಂದು ಆವರಿಸಿಕೊಂಡದ್ದರಿಂದ ಯಶಸ್ವಿಯಾಗಿ ನೆರವೇರಿದೆ ಎಂದು ನಮಗೆ ತಿಳಿಸಲ್ಪಟ್ಟಿದೆ. ಅಲ್ಲಿದ್ದ ಎಲ್ಲಾ 120 ಮಂದಿ ಸಹೋದರರು ಪವಿತ್ರಾತ್ಮನಿಂದ ಅಭಿಷೇಕ ಹೊಂದಿದರೆ ಅಪೋಸ್ತಲರ ತಲೆಯ ಮೇಲೆ ಉರಿಯುವ ಅಗ್ನಿ ನಾಲಿಗೆಯಂತೆ ಪವಿತ್ರಾತ್ಮನು ಇಳಿದು ಬಂದದ್ದು ದೇವರ ವಿಶೇಷ ಕೃಪೆ ತೋರಿಬರುತ್ತದೆ.

ಪವಿತ್ರಾತ್ಮನ ಈ ಅಭಿಷೇಕವು ಇಸ್ರಾಯೇಲ್ಯರ ಮಹಾಯಾಜಕರುಗಳು ಮತ್ತು ರಾಜರಿಗೆ ಮಾಡುತ್ತಿದ್ದ ತೈಲಾಭಿಷೇಕಕ್ಕೆ ಅನುಗುಣವಾಗಿದೆ. ತೈಲವನ್ನು ತಲೆಯ ಮೇಲೆ ಸುರಿಯುತ್ತಿದ್ದು ಅದು ದೇಹದ ಮೇಲೆಲ್ಲಾ ಇಳಿದು ಬರುತ್ತಿತ್ತು. ತಲೆಯ ಮೇಲೆ ಸುರಿಯುವ ಪ್ರತಿಸಂಕೇತವು ನಮ್ಮ ಕರ್ತನು ತನ್ನ ಮೂವತ್ತನೆಯ ಪ್ರಾಯದಲ್ಲಿ ದೀಕ್ಷಾಸ್ನಾನ ಪಡಕೊಂಡಾಗ ಇಳಿದು ಬಂದುದಕ್ಕೆ ಸಮವಾಗಿದೆ. ಆಗ ತಂದೆಯಾದ ದೇವರು ತನ್ನ ಮಗನ ಮೇಲೆ ಅಳತೆಮಾಡದೆ ತನ್ನ ಆತ್ಮವರವನ್ನು ಅನುಗ್ರಹಿಸಿದನು (ಯೋಹಾ. 3:34). ಪಂಚಾಶತ್ತಮವು ಪೂರ್ಣವಾಗಿ ಬಂದಾಗ, ಮಹಿಮೆಗೊಂಡ ನಮ್ಮ ಶಿರಸ್ಸಾದ ಕ್ರಿಸ್ತನು ತಂದೆಯ ಮುಂದೆ ಕಾಣಿಸಿಕೊಂಡು ಆತನ ಜನರ ಪಾಪಪರಿಹಾರಾರ್ಥ ತನ್ನ ತಂದೆಗೆ ವಿಜ್ಞಾಪನೆ ಸಲ್ಲಿಸುತ್ತಿರಲು ಆತನಿಗೆ ಈ ಪಂಚಾಶತ್ತಮದ ಪವಿತ್ರಾತ್ಮನನ್ನು ತನ್ನ ಸಭೆಯ ಮೇಲೆ ಸುರಿಸುವ ಅನುಮತಿ ದೊರಕಿತು. ಇದು ಅವರು ಆತನ ಶರೀರವಾದ ಪವಿತ್ರ ಸಭೆಯ ಅಂಗಗಳೆಂಬ, ನೂತನ ಸೃಷ್ಟಿಯ ಸದಸ್ಯರೆಂಬ ತಂದೆಯ ಅಂಗೀಕಾರವನ್ನು ಸೂಚಿಸುವುದಾಗಿತ್ತು. ಆತನ ದೇಹವೆಂಬ ಸಭೆಯು ಅಂದಿನಿಂದ ಮುಂದುವರೆಯುತ್ತಾ ಇದ್ದು ಪವಿತ್ರಾತ್ಮನು ಅದರ ಮೇಲೆ ಇಂದಿಗೂ ಮುಂದುವರೆಯುತ್ತಾ ಇದ್ದಾನೆ. ಆತನ ದೇಹವಾದ ಈ ಸಭೆಗೆ ಪ್ರತಿಯೊಬ್ಬ ಹೆಚ್ಚಿನ ಸದಸ್ಯನು ಸೇರಿಸಲ್ಪಡುವಾಗ, ಆ ಪ್ರತಿಯೊಬ್ಬನೂ ಆತ್ಮನ ಆ ಒಂದು ಸ್ಥಾನದಲ್ಲಿ ಭಾಗವಹಿಸುತ್ತಾನೆ ಮತ್ತು ಇದು ಆ ಸಭೆಯೆಂಬ ದೇಹಕ್ಕೆ ಸೇರಿದ್ದಾಗಿದ್ದು ಅದನ್ನು ವ್ಯಾಪಿಸುತ್ತಾ ಬರುತ್ತದೆ.

ನಾವೀಗ ಪರೀಶೀಲಿಸುತ್ತಿರುವ ಪ್ರಸ್ತಾಪವು ಈ ಪಂಚಾಶತ್ತಮದ ಪವಿತ್ರಾತ್ಮ ಅಭಿಷೇಕವಾಗಿದ್ದು ಇದು ನಮ್ಮ ಮರಣದೊಂದಿಗಿನ ವ್ಯಕ್ತಿಗತ ದೀಕ್ಷಾಸ್ನಾನಕ್ಕೆ ಸಂಬಂಧಿಸುವುದಾಗಿದ್ದು ನಮಗೆ ಇವುಗಳೆರಡರ ಸಂಬಂಧವನ್ನು ತೋರಿಸಿಕೊಡುವುದಾಗಿದೆ. ನೀತಿನಿರ್ಣಯ ಹೊಂದಿದವರಾಗಿ ನಾವು ಮರಣದಲ್ಲಿ ದೀಕ್ಷಾಸ್ನಾನ ಪಡಕೊಳ್ಳುತ್ತೇವೆ; ನೂತನ ಸೃಷ್ಟಿಯ ಸದಸ್ಯರಾಗಿ ನಾವು ಪವಿತ್ರಾತ್ಮನಿಂದ ಅಭಿಷೇಕ ಪಡೆಯುತ್ತೇವೆ ಮತ್ತು ಕ್ರಿಸ್ತನ ದೇಹವಾದ ಪವಿತ್ರ ಸಭೆಯ ಸದಸ್ಯರಾಗಿ ನೇಮಕಗೊಳ್ಳುತ್ತೇವೆ. ಈಗಾಗಲೇ ನೋಡಿರುವಂತೆ ನಮ್ಮ ತ್ಯಾಗವು ನೀತಿಯುಳ್ಳದ್ದಾಗಿ ಸಮರ್ಪಣೆಗೊಳ್ಳಬೇಕಾದಲ್ಲಿ ಮತ್ತು ನಮ್ಮ ಕರ್ತನೂ, ಶಿರಸ್ಸೂ ಆದವನೊಂದಿಗೆ ಮರಣಹೊಂದಿದ್ದೇವೆ ಎಂದು ಪರಿಗಣನೆಗೊಳ್ಳುವ ಮುನ್ನ ನಾವು ಆ ನಮ್ಮ ವಿಮೋಚಕನ ಮೇಲಿನ ನಂಬಿಕೆಯ ಮೂಲಕ ಆದಾಮನ ಪಾಪ ಮತ್ತು ಮರಣದಿಂದ ನೀತಿನಿರ್ಣಯ ಹೊಂದಿಕೊಳ್ಳಬೇಕು. ಅದರಂತೆ,

ನಾವು ಮೊದಲಿಗೆ ಈ ಸ್ವಯಂ ನೀತಿನಿರ್ಣಯ ಹೊಂದಿಕೊಂಡ ಪ್ರತಿಷ್ಠೆಯನ್ನು ಅಥವಾ ತ್ಯಾಗವನ್ನು ಮಾಡಬೇಕು ಮತ್ತು ನೂತನ ಸೃಷ್ಟಿಯ ಸದಸ್ಯರಾಗಿ ಅಂಗೀಕೃತರಾಗಬೇಕು. ಇದು ಸಾಯುವ ಪ್ರತಿಕ್ರಿಯೆ ಪ್ರಾರಂಭವಾಗುವ ಮುನ್ನವೇ ನಡೆಯಬೇಕು. ಇದು ಕರ್ತನ ಕೃಪೆಯಿಂದ ಮರಣದೊಂದಿಗೆ ನಮ್ಮ ಸಂಪೂರ್ಣ ದೀಕ್ಷಾಸ್ನಾನವನ್ನು ನಮ್ಮ ಕರ್ತನು ಮರಣದೊಂದಿಗೆ ಹೊಂದಿದ ದೀಕ್ಷಾಸ್ನಾನದೋಪಾದಿಯಲ್ಲಿ ಉಂಟುಮಾಡುವುದಾಗಿದೆ. ಈ ರೀತಿಯಲ್ಲಿ ನಮಗೆ ಪ್ರಥಮ ಪುನರುತ್ಥಾನದಲ್ಲಿ ಪಾಲನ್ನು ಖಚಿತ ಪಡಿಸುವುದಾಗಿದೆ. ನಾವೀಗಾಗಲೇ ಕಂಡುಕೊಂಡ ಪ್ರಕಾರ – ನೀತಿನಿರ್ಣಯದ ನಿಮಿತ್ತವಾಗಿ ನಾವು ನೂತನ ಸೃಷ್ಟಿಗಳು ಅಂದರೆ ಕರ್ತನ ಪವಿತ್ರ ದೇಹದ ಅಂಗಗಳಾಗುವುದಲ್ಲ ಆದರೆ ಅಪೋಸ್ತಲನು ಹೇಳುವಂತೆ ಆತನ ಮರಣದಲ್ಲಿ ನಾವು ದೀಕ್ಷಾಸ್ನಾನ ಹೊಂದಿಕೊಳ್ಳುವುದರ ಮೂಲಕ–"ಹೇಗೆ ದೇಹವು ಒಂದಾಗಿದ್ದರೂ ಅದಕ್ಕಿರುವ ಅಂಗಗಳು ಅನೇಕವಾಗಿವೆಯೋ, ಹೇಗೆ ದೇಹದ ಅಂಗಗಳೆಲ್ಲವೂ ಅನೇಕವಾಗಿದ್ದು ಒಂದೇ ದೇಹವಾಗಿರುವುದೋ, ಹಾಗೆಯೇ ಕ್ರಿಸ್ತನು... ನಾವೆಲ್ಲರೂ ಒಂದೇ ದೇಹವಾಗುವುದಕ್ಕಾಗಿ ಒಂದೇ ಆತ್ಮನಿಂದ ದೀಕ್ಷಾಸ್ನಾನ ಮಾಡಿಸಿಕೊಂಡೆವು; ಒಂದೇ ಆತ್ಮ ನಮ್ಮೆಲ್ಲರಿಗೂ ಪಾನವಾಗಿ ಕೊಡಲ್ಪಟ್ಟಿತು" (1 ಕೊರಿ. 12:12–13).

ಸುವಾರ್ತಾಯುಗವು "ಕರ್ತನು ನೇಮಿಸಿದ ಶುಭವರ್ಷವಾಗಿದೆ". ಈ ಅವಧಿಯಲ್ಲಿ ಆತನು ತನ್ನ ವಿಶ್ವಾಸಿಗಳ ತ್ಯಾಗವನ್ನು, ಮರಣದಲ್ಲಿ ಅವರ ಪೂರ್ಣ ಪ್ರತಿಷ್ಠೆಯನ್ನು ಅಂಗೀಕರಿಸಲು ಇಷ್ಟವುಳ್ಳವನಾಗಿದ್ದಾನೆ. ಈ ರೀತಿಯಲ್ಲಿ ಪ್ರತಿಯೊಬ್ಬ ತ್ಯಾಗಿಯೂ "ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚಿಗೆಯಾಗಿಯೂ ಇರುವ ಸಜೀವ ಯಜ್ಞವನ್ನಾಗಿ ಅರ್ಪಿಸಿರಿ" (ರೋಮಾ. 12:1) ಎಂಬ ಈ ಯುಗದ ಕರೆಗೆ ಓಗೊಡುವ ಮೂಲಕ ಹೊಸದಾಗಿ ಹುಟ್ಟಿದವರ ಸಭೆಯ ಸದಸ್ಯರ ಸ್ಥಾನವನ್ನು ಪಡಕೊಳ್ಳುತ್ತಾರೆ. ಅವರ ಹೆಸರುಗಳು ಪರಲೋಕದಲ್ಲಿನ ಚೊಚ್ಚಲ ಮಕ್ಕಳ ಸಭೆಯ ಪಟ್ಟಿಯಲ್ಲಿ ಬರೆಯಲ್ಪಡುತ್ತವೆ. ಆದರೆ, ನಾವು ಕಂಡುಕೊಂಡಂತೆ ಈ ಅಂಗೀಕಾರವು ಅಲ್ಲಿಗೇ ಮುಕ್ತಾಯಗೊಳ್ಳುವುದಿಲ್ಲ. ಪ್ರತಿಷ್ಠೆ ಹೊಂದಿದವರೆಲ್ಲಾ "ಪ್ರತಿನಿತ್ಯ ಸಾಯಲು' ಸಿದ್ಧರಿರಬೇಕು. ಅಂದರೆ ಸಮಗ್ರ ಪ್ರತಿಷ್ಠೆಯಲ್ಲಿರುವ ಅವರ ಮನೋಭಿಪ್ರಾಯವು ಅವರು ಕಡೆಗೆ "ತೀರಿತು" ಎಂದು ಹೇಳುವವರೆಗೂ ಪ್ರತಿನಿತ್ಯ ಮುಂದುವರೆಯಬೇಕು. ತ್ಯಾಗಮಾಡುವ ಮತ್ತು ಒಳ್ಳೆಯದನ್ನು ಮಾಡುವ ಈ ಅವಿರತ ಯತ್ನವು ಅವರ ಪ್ರತಿಷ್ಠೆಯಲ್ಲಿ ಸಮಾಧಾನಕರವಾಗಿ ಮತ್ತು ಪ್ರಾಮಾಣಿಕವಾಗಿ ಮುಂದುವರೆಯಬೇಕು. ನಮ್ಮೊಂದಿಗೆ ಇದರ ಅಂತ್ಯ ನಮ್ಮ ಕರ್ತನೂ ಶಿರಸ್ಸೂ ಆದವನೊಂದಿಗೆ ಇದ್ದಂತೆ ಅಕ್ಷರಶಃ 'ಮರಣ' ಯಾಕೆಂದರೆ –"ನೀವು ದೇವರುಗಳು, (ಎಲೋಹಿಮ್ ಅಂದರೆ ಪರಾಕ್ರಮಿಗಳು) ಎಲ್ಲರೂ ಪರಾತ್ಪರನ ಮಕ್ಕಳು ಎಂದು ನಾನು ಹೇಳಿದೆನು. ಆದರೂ ನರರಂತೆ ಸತ್ತೇ ಹೋಗುವಿರಿ; ಪ್ರತಿಯೊಬ್ಬ ಪ್ರಭುವಿನಂತೆ ನೀವೆಲ್ಲರೂ ಬಿದ್ದೇ ಹೋಗುವಿರಿ" ಪ್ರಭು ಆದಾಮನಂತಲ್ಲ, ಅಪರಾಧಿಯಾಗಿಯೂ ಅಲ್ಲ; ಆದರೆ ಪ್ರಭುವಾದ ಯೇಸುವಿನ ಮರಣದಲ್ಲಿ ಪಾಲುಗಾರರಾಗಿ (ಕೀರ್ತನೆ 82:6–7) ಎಂದು ಬರೆದದೆ. ಈ ಪ್ರಾಮಾಣಿಕತೆ, ದಿನನಿತ್ಯ ಸಾಯುವಿಕೆಯು ನಮ್ಮ ಕರೆಯನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾಗಿವೆ; ಮತ್ತು ಈ ರೀತಿಯಾಗಿ ಪ್ರಾಮಾಣಿಕತೆಯಿಂದ ಕರ್ತನ ಹೆಜ್ಜೆಜಾಡಿನಲ್ಲಿ ನಡೆಯುವುದರಿಂದ ನಮ್ಮ ಕರ್ತನು ವಾಗ್ದಾನ ಮಾಡಿರುವ ಮಹಿಮೆ, ಗೌರವ ಮತ್ತು ನಿರ್ಲಯತ್ವವನ್ನು ಹೊಂದಿಕೊಂಡು ನೂತನ ಸೃಷ್ಟಿಯ "ದೇವರಾದುಕೊಂಡ" (very elect) ಸದಸ್ಯರಾಗುತ್ತೇವೆ. ನಮ್ಮನ್ನು ಕರ್ತನು ಹೇಳಿರುವಂತೆ "ನೀನು ಸಾಯಬೇಕಾದರೂ ನಂಬಿಗಸ್ಥನಾಗಿರು; ನಾನು ನಿನಗೆ ಜೀವವೆಂಬ ಜಯಮಾಲೆಯನ್ನು ಕೊಡುವೆನು" (ಪ್ರಕಟನೆ 2:10) ಆದುದರಿಂದ ನಮ್ಮ ಕರ್ತನಲ್ಲಿದ್ದಂತೆ ನಮ್ಮ ಸಭೆಯಲ್ಲಿ ಪ್ರತಿಷ್ಠೆಯು ಆತ್ಮನ ಪ್ರಥಮ ಫಲಗಳನ್ನು ತರುತ್ತವೆ, ಪ್ರತಿನಿತ್ಯದ ಪ್ರಾಮಾಣಿಕತೆಯು ಆತ್ಮನ ಆಶೀರ್ವಾದಗಳನ್ನು ಇನ್ನೂ ಹೆಚ್ಚಿನ ಸಂತೋಷ ಮತ್ತು ಫಲಗಳೊಂದಿಗೆ ಮುಂದುವರೆಸುತ್ತದೆ. ನಿಜವಾದ ಮರಣದಲ್ಲಿ ಒಡಂಬಡಿಕೆಯ ಪ್ರಾಮಾಣಿಕ ಮುಕ್ತಾಯವು ಸಂಪೂರ್ಣ ಬಾಧ್ಯತೆಯನ್ನು ಪಡೆಯಲು ಅವಶ್ಯವಾಗಿದೆ ಮೊದಲನೆಯ ಪುನರುತ್ಥಾನದ ಮಹಿಮೆ ಮತ್ತು ಗೌರವಗಳಲ್ಲಿ ಪಾಲು. "ಕ್ರಿಸ್ತನಲ್ಲಿಯೇ ಸಮಸ್ತವೂ ಒಂದಾಗುವುದು. ಇದಲ್ಲದೆ ಆತನಲ್ಲಿ ನಾವು ದೇವರ ಸ್ವಕೀಯ ಪ್ರಜೆಗಳಾದೆವು. ಬರಬೇಕಾಗಿದ್ದ ಕ್ರಿಸ್ತನನ್ನು ಎದುರು ನೋಡುತ್ತಿದ್ದ ನಾವು ತನ್ನ ಮಹಿಮೆಯನ್ನು ಪ್ರಖ್ಯಾತಪಡಿಸಬೇಕೆಂದು ಸಮಸ್ತ ಕಾರ್ಯಗಳನ್ನು ತನ್ನ ಇಷ್ಟದಂತೆ ನಡೆಸುವ ದೇವರು ತನ್ನ ಸಂಕಲ್ಪದ ಮೇರೆಗೆ ನಮ್ಮನ್ನು ಆದಿಯಲ್ಲಿಯೇ ಆರಿಸಿಕೊಂಡನು. ನಿಮ್ಮ ರಕ್ಷಣೆಯ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುವವು ಎಂಬುದಕ್ಕೆ ಪವಿತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರ ವಾಗಿದ್ದಾನೆ. ಆ ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನುಂಟು ಮಾಡುವುದು (ಎಫೆಸ.1:12–14) "ನಾವು ದೇವರ ಮಕ್ಕಳಾಗಿದ್ದೇವೆಂಬುದಕ್ಕೆ ಪವಿತ್ರಾತ್ಮನೇ ನಮ್ಮ ಆತ್ಮನೊಂದಿಗೆ ಸಾಕ್ಷಿ ಹೇಳುತ್ತಾನೆ. ಮಕ್ಕಳಾಗಿದ್ದರೆ ಬಾಧ್ಯರಾಗಿದ್ದೇವೆ; ದೇವರಿಗೆ ಬಾಧ್ಯರು, ಕ್ರಿಸ್ತನೊಂದಿಗೆ ಬಾಧ್ಯರು. ಹೇಗೆಂದರೆ ಕ್ರಿಸ್ತನಿಗೆ ಸಂಭವಿಸಿದ ಭಾಧೆಗಳಲ್ಲಿ ನಾವು ಪಾಲುಗಾರರಾಗುವುದಾದರೆ ಆತನ ಮಹಿಮೆಯಲ್ಲಿಯೂ ಪಾಲುಗಾರರಾಗುವೆವು" (ರೋಮಾ. 8:16–17)

## ಬೆಂಕಿಯ ದೀಕ್ಷಾಸ್ನಾನ

### The Baptism of Fire

ಸ್ನಾನಿಕನಾದ ಯೋಹಾನನು ಯೇಸುವಿನ ಬಗ್ಗೆ ಯೆಹೂದ್ಯರಿಗೆ "ಆತನು ಪವಿತ್ರಾತ್ಮದಲ್ಲಿಯೂ, ಬೆಂಕಿ ಯಲ್ಲಿಯೂ ನಿಮಗೆ ಸ್ನಾನಮಾಡಿಸುವನು "(ಮತ್ತಾಯ 3:11)

ಎಂದು ಹೇಳಿದ ಮಾತುಗಳ ಬಗ್ಗೆ ಈಗಾಗಲೇ ಸುವಿಸ್ತಾರವಾಗಿ ಚರ್ಚಿಸಿದ್ದೇವೆ* (**ಸಂಪುಟ 5 ಅಧ್ಯಾಯ 9**). ಈ ರೀತಿಯಲ್ಲಿ ನಾವು ನಂಬಿಗಸ್ತ ಇಸ್ರಾಯೇಲ್ಯರ ಮೇಲೆ ಪಂಚಾಶತ್ತಮ ದಿನದ ಆಶೀರ್ವಾದಗಳನ್ನು ಮತ್ತು ಜನಾಂಗದ ಉಳಿದವರ ಮೇಲೆ "ದೇವರ ರೌದ್ರದ" ಬಗ್ಗೆ ತಿಳಿಸಿದ್ದೇವೆ (2ಥೆಸ.2:16). ಬೆಂಕಿಯ ದೀಕ್ಷಾಸ್ನಾನವು ಕೆಲವೊಂದು ಬುದ್ಧಿವಂತ ಕ್ರೈಸ್ತರು ಪ್ರಾರ್ಥಿಸಿಕೊಳ್ಳುವಂತೆ ಒಂದು ಆಶೀರ್ವಾದವಲ್ಲ. ಇಂಥಹ ಒಂದು ಬೆಂಕಿಯ ಸ್ನಾನವು ಯೆಹೂದ್ಯ ಯುಗದ ಅಂತ್ಯದಲ್ಲಿ ಹೊಟ್ಟಿನಂತಹ ಜನರಿಗೆ ಉಂಟಾಗಲಿರುವುದರಿಂದ ಇಂತಹ "ಬೆಂಕಿ"ಯು ಹಣಜಿ ವರ್ಗದ ಕ್ರೈಸ್ತರ ಮೇಲೆ ಯುಗಾಂತ್ಯದಲ್ಲಿ ಬೀಳಲಿದೆಯೆಂದು ನಮ್ಮ ಕರ್ತನು ಸೂಚಿಸುವವನಾಗಿದ್ದಾನೆ. ಈ ಬೆಂಕಿಯ ಸ್ನಾನವು ತೊಂದರೆಯುಳ್ಳದ್ದಾಗಿದೆ, ಭಯದಿಂದ ನಿಸ್ತೇಜನ ಗೊಳಿಸುವುದಾಗಿದೆ– "ಜನಾಂಗವು ಉಂಟಾದಂದಿನಿಂದ ಅಂದಿನವರೆಗೆ ಸಂಭವಿಸದಂತಹ ಸಂಕಟವು ಸಂಭವಿಸುವುದು. (ದಾನಿ. 12:1)

## ಸಾಂಕೇತಿಕವಾದ ನೀರಿನ ದೀಕ್ಷಾಸ್ನಾನ
## The Symbolical Baptism in Water

ಕ್ರೈಸ್ತ ಜನರಲ್ಲಿ ವಾಡಿಕೆಯಲ್ಲಿರುವ ವಿವಿಧ ರೀತಿಯ ನೀರಿನ ದೀಕ್ಷಾಸ್ನಾನದ ಬಗ್ಗೆ ನಾವೀಗಾಗಲೇ ನಮ್ಮ ಗಮನವನ್ನು ಹರಿಸಿದ್ದೇವೆ. ಇವುಗಳು ಬಹುತೇಕ ಸರಿಯಾದವುಗಳೆಂದು ಸಾರ್ವತ್ರಿಕವಾಗಿ ಹಲವರು ತಪ್ಪಾಗಿ ತಿಳಿದಿದ್ದಾರೆ. ಈ ನೀರಿನ ದೀಕ್ಷಾಸ್ನಾನದ ಬಗ್ಗೆ ಆಧಾರಗೊಂಡಿರುವ ಪರೀಕ್ಷೆಗಳು ಎಷ್ಟರವಮಟ್ಟಿಗೆ ತಪ್ಪುಗಳಿಂದ ಕೂಡಿದೆ ಮತ್ತು ಅಸಮಂಜಸವಾಗಿದೆ ಎಂಬುದನ್ನು ನಾವು ತೋರಿಸಿಕೊಟ್ಟಿದ್ದೇವೆ. ಇದು ಹೃದಯದ ಮೇಲೆ ಯಾವ ಪರಿಣಾಮವನ್ನು ಬೀರುವುದಿಲ್ಲ ಮತ್ತು ಇವುಗಳು ಹೆಚ್ಚೆಂದರೆ ಕೇವಲ ಸಂಕೇತಗಳು. ಆದರೆ ಇದರ ಪ್ರತಿಪಾದಕರು ಇವನ್ನು ಸಂಕೇತಗಳೆಂದು ತಿಳಿದಿಲ್ಲ. ಯಾಕೆಂದರೆ ಕ್ರಿಸ್ತನೊಂದಿಗೆ ನಿಜವಾದ ಮರಣದಲ್ಲಿ ದೀಕ್ಷಾಸ್ನಾನ ಹೊಂದಿಕೊಳ್ಳುವಿಕೆಯ ಬಗ್ಗೆ ಅವರು ಅರಿಯರು. ನಿಜವಾದ ಕ್ರಿಸ್ತನ ದೇಹವಾದ ಈ ಪವಿತ್ರ ಸಭೆಯ ಬಗ್ಗೆ ದೀಕ್ಷಾಸ್ನಾನದ ಪರೀಕ್ಷೆಯು ಎಷ್ಟೊಂದು ಸರಳ ಮತ್ತು ಖಚಿತವಾದುದು! ಇದರ ಹೆಸರು ಪರಲೋಕ ರಾಜ್ಯದಲ್ಲಿ ಬರೆಯಲ್ಪಟ್ಟಿವೆ ಮತ್ತು ಇದು ಈ ಲೋಕದ ರೀತಿಯಲ್ಲಿ ಹೆಸರು ಬರೆಯಿಸಿಕೊಳ್ಳುವುದರ ಮೇಲೆ ಆಧಾರಗೊಂಡಿಲ್ಲ! ಈ ನಿಜವಾದ ದೀಕ್ಷಾಸ್ನಾನವು ಸತ್ಯವಾಗಿಯೂ ನಿಜವಾದ ಸತ್ಯಸಭೆಯ ದ್ವಾರವಾಗಿದೆ. ಆತನ ಚಿತ್ತದ, ಆತನ ಹೃದಯದ ಈ ದೀಕ್ಷಾಸ್ನಾನವನ್ನು ಕರ್ತನ ಮರಣದೊಂದಿಗೆ ಅನುಭವಿಸದ ಯಾರೊಬ್ಬರೂ ಕ್ರಿಸ್ತನ ದೇಹವಾದ ಸಭೆಯ ಸದಸ್ಯನಾಗುವುದು ಸಾಧ್ಯವಿಲ್ಲ ಮತ್ತು ಅವರ ಹೆಸರುಗಳು ಪರಲೋಕ ರಾಜ್ಯದಲ್ಲಿ ಬರೆಯಲ್ಪಡಲಾರದು. –"ನಾನು ಈಗ ನಿಮಗೋಸ್ಕರ ಅನುಭವಿಸುತ್ತಿರುವ ಬಾಧೆಗಳಲ್ಲಿ ಸಂತೋಷಪಟ್ಟು ಕ್ರಿಸ್ತನ ಸಂಕಟದೊಳಗೆ ಇನ್ನೂ ಉಳಿದದ್ದನ್ನು ಸಭೆಯೆಂಬ ಆತನ ದೇಹಕ್ಕೋಸ್ಕರ ನನ್ನ ಶರೀರದಲ್ಲಿ ಅನುಭವಿಸಿ ತೀರಿಸುತ್ತೇನೆ" (ಕೊಲೊಸ್ಸೆ 1:24) ಹೌದು! ಅಂತಹ ವಿಶ್ವಾಸಿಗಳು, ಅಂತಹ ಪ್ರತಿಷ್ಠೆಯನ್ನು ಮಾಡುವವರು, ಕರ್ತನೊಂದಿಗೆ ಮರಣದಲ್ಲಿ ದೀಕ್ಷಾಸ್ನಾನ ಪಡೆಯುವವರೆಲ್ಲರೂ ನಿಜವಾದ "ಗೋಧಿ'ಕಾಳುಗಳಾಗಿದ್ದಾರೆಯೇ ಹೊರತು ಇವರಲ್ಲಿ ಒಬ್ಬರೂ "ಹಣಜಿ'ಗಳಲ್ಲ. ನೀರಿನ ದ್ವಾರವು ಗೋಧಿ ಮತ್ತು ಹಣಜಿ ಇವೆರಡಕ್ಕೂ ಬಾಪ್ಟಿಸ್ಟ್ ಸಭೆಯೊಳಗೆ ಪ್ರವೇಶನೀಡಬಹುದು: ಆದರೆ ಮರಣದಲ್ಲಿ ಪಡೆಯುವ ದೀಕ್ಷಾಸ್ನಾನದಲ್ಲಿ ಕೇವಲ ಗೋಧಿಗೆ ಮಾತ್ರವೇ ನಿಜವಾದ ಕ್ರೈಸ್ತ ಸಭೆಯೊಳಗೆ ಪ್ರವೇಶ ನೀಡುವುದಾಗಿದೆ. ಯಾಕೆಂದರೆ ಇತರರ್‍ಯಾರೂ ಶರತ್ತುಗಳಿಗೆ ಬದ್ಧರಾಗಲು ಲಕ್ಷಿಸುವುದಿಲ್ಲ. ಕೆಲವರು ಸ್ವಲ್ಪಮಟ್ಟಿಗೆ ಹಾಗೆ ಅನುಕರಿಸುತ್ತಾರೆ. ಹಣಜಿಯು ಸಹಾ ಗೋಧಿಯ ಅನುಕರಣೆಯಾಗಿದೆ.

ಇವುಗಳಿಂದ ಮರಣದಲ್ಲಿ ದೀಕ್ಷಾಸ್ನಾನ ಹೊಂದುವುದರ ಮೂಲಕ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದ ಕೆಲವರು ಪ್ರೆಸ್ಬಿಟೇರಿಯನ್, ಮೆಥೋಡಿಸ್ಟ್, ಲೂಥರನ್, ಎಪಿಸ್ಕೋಪಲಿಯನ್ ಕಾಂಗ್ರಿಗೇಶನಲಿಸ್ಟ್ ಮತ್ತು ಕ್ಯಾಥೋಲಿಕ್ ಮುಂತಾದ ಸಭೆಗಳಲ್ಲಿಯೂ ಹಾಗೂ ಡಿಸೈಪಲ್ಸ್ ಮತ್ತು ಬಾಪ್ಟಿಸ್ಟ್‌ಗಳಲ್ಲಿಯೂ ಇರಬಹುದೆಂದು ತೋರುತ್ತದೆ. ಮತ್ತೊಂದೆಡೆ, ಉಳಿದೆಲ್ಲಾ ಪಂಗಡಗಳಲ್ಲಿ (ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಪಡೆಯುವ ಬಾಪ್ಟಿಸ್ಟ್ ಮತ್ತು ಡಿಸೈಪಲ್ ಚರ್ಚ್ ಇವುಗಳನ್ನೊಳಗೊಂಡು) ಹೆಚ್ಚಿನ ಪ್ರಮಾಣದಲ್ಲಿರುವವರು ಕ್ರಿಸ್ತನ ದೇಹವಾದ ಪವಿತ್ರ ಸಭೆಯ ಭಾಗವೂ ಅಲ್ಲ, ಅಂಥಹ ಗುಂಪುಗಳೂ ಅಲ್ಲ. ಯಾಕೆಂದರೆ ಅವರುಗಳು ನಿಜವಾದ ಸಭೆಗೆ ನಿಜವಾದ ಬಾಗಿಲಿನಿಂದ ಮತ್ತು "ಆತನ ಮರಣದಲ್ಲಿ" ಹೊಂದಿಕೊಳ್ಳುವ ನಿಜವಾದ ದೀಕ್ಷಾಸ್ನಾನದ ಮೂಲಕ ಬಂದವರಲ್ಲ. ಈ ಪ್ರಸ್ತಾಪವು ನಿರ್ವಿವಾದವಾದುದು.

ಅಪೋಸ್ತಲನು ಮಾಡಿದಂತೆ ನಿಜವಾದ ದೀಕ್ಷಾಸ್ನಾನದ ಮೇಲೆ ಎಲ್ಲಾ ಒತ್ತಡವನ್ನೂ ಹಾಕಿದ ಮೇಲೆ ನಾವು ಅದರ ಸಂಕೇತವಾದ ನೀರಿನ ದೀಕ್ಷಾಸ್ನಾನದ ಬಗ್ಗೆ ತಿರುಗಿ ನೋಡೋಣ. ಮೊದಲಿಗೆ ಈ ಸಂಕೇತವು ಸರಿಯಾಗಿದೆಯೋ, ನಿಜವಾದ ದೀಕ್ಷಾಸ್ನಾನ ಪಡೆದವರಿಗೆ ಇದರ ಅವಶ್ಯಕತೆ ಇದೆಯೋ ಎರಡನೆಯದಾಗಿ, ಹಾಗಾದರೆ ನಿಜವಾದ ಸಂಕೇತ ಯಾವುದು ಎಂಬುದನ್ನು ವಿಚಾರಿಸೋಣವೇ?

## ಸಾಂಕೇತಿಕ ದೀಕ್ಷಾಸ್ನಾನದ ಅವಶ್ಯಕತೆ ಇದೆಯೋ?
## Is the Symbolic Baptism Necessary?

ನಮ್ಮ ಕರ್ತನೂ ಆತನ ಅಪೋಸ್ತಲರುಗಳು ನೀಡಿದ ಸಾಕ್ಷ್ಯಗಳು ಸ್ಪಷ್ಟವಾಗಿ ನೀರಿನ ದೀಕ್ಷಾಸ್ನಾನದ ಔಚಿತ್ಯವನ್ನು ತೋರಿಸುವುದು. ಅವರುಗಳು ನೀರಿನಲ್ಲಿ ದೀಕ್ಷಾಸ್ನಾನ ಪಡಕೊಂಡರು ಎಂಬ ಕಾರಣಕ್ಕಾಗಿ ಮಾತ್ರವಲ್ಲ, ಆದರೆ ಈ ನೀರಿನ ದೀಕ್ಷಾಸ್ನಾನವನ್ನು ಯೆಹೂದ್ಯರಿಗೆ ಮಾತ್ರವಲ್ಲ ಪರಿವರ್ತಿತ ಅನ್ಯಮತದವರಿಗೂ ಕೊಡಲಾಯಿತು. ನಮ್ಮಕರ್ತನ ದೀಕ್ಷಾಸ್ನಾನವು ಸ್ನಾನಿಕನಾದ ಯೋಹಾನನು ಯೆಹೂದ್ಯರಿಗೆ

ಸಾಮಾನ್ಯವಾಗಿ ನೀಡುತ್ತಿದ್ದ ದೀಕ್ಷಾಸ್ನಾನಕ್ಕಿಂತ ವಿಭಿನ್ನವಾದುದು ಎಂಬುದನ್ನು ನಾವೀಗಾಗಲೇ ತೋರಿಸಿಕೊಟ್ಟಿದ್ದೇವೆ. ಅದು ಪಾಪಗಳ ಪಶ್ಚಾತ್ತಾಪಕ್ಕಾಗಿ ಆಗಿರಲಿಲ್ಲ. ಯೋಹಾನನು ಈ ಸಂಗತಿಯನ್ನು ಅರ್ಥ ಮಾಡಿಕೊಳ್ಳಲಾಗಲಿಲ್ಲ. ಕರ್ತನು ಇದರಲ್ಲಿ ತನ್ನ ಸ್ವಂತ ಮರಣದ ಸಂಕೇತವನ್ನು ಪ್ರತಿಷ್ಠಿಸಿದನು. ಯೋಹಾನನೂ ಮತ್ತು ಆ ಕಾಲದ ಇತರರು ಅರಿಯಲಾಗದ ಸಂಗತಿಗಳನ್ನು ಆತನು ವಿವರಿಸಲಿಲ್ಲ. ಯಾಕೆಂದರೆ ಅವರಿಗೆ ಪವಿತ್ರಾತ್ಮವನ್ನು ಇನ್ನೂ ನೀಡಲಾಗಿದ್ದಿಲ್ಲ, ಕ್ರಿಸ್ತನು ನಮ್ಮ ಪಾಪಗಳಿಗಾಗಿ ತನ್ನ ಬಲಿಯನ್ನು ಇನ್ನೂ ಅರ್ಪಿಸಿರಲಿಲ್ಲ. ನಮ್ಮ ಪರವಾಗಿ ತನ್ನ ಬಲಿಯನ್ನು ಅರ್ಪಿಸಲು ಇನ್ನೂ ಮಹಿಮೆಹೊಂದಿರಲಿಲ್ಲ. ನಮ್ಮ ಕರ್ತನು ಅಪೋಸ್ತಲರಿಗೂ, ಅವರ ಮೂಲಕವಾಗಿ ನಮಗೂ ನೀಡಿದ್ದು: – "ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ (ಅಧಿಕಾರದ ಮೇರೆಗೆ) ದೀಕ್ಷಾಸ್ನಾನ ಮಾಡಿಸಿರಿ"(ಮತ್ತಾ. 28:19–20) ಎಂಬ ಆದೇಶವನ್ನು ನಾವು ಗಮನಿಸಿದ್ದೇವೆ. ಈ ನಿಯೋಗವು ಈ ಸುವಾರ್ತಾಯುಗಕ್ಕೆಲ್ಲಾ ಅನ್ವಯವಾಗಿದೆ. ಇದಕ್ಕನುಸಾರ ಇಂದು ಸತ್ಯದ ಎಲ್ಲಾ ಸೇವಕರುಗಳು ಶ್ರಮಿಸುತ್ತಿದ್ದಾರೆ. ಕರ್ತನು ಇಲ್ಲಿ ಪಂಚಾಶತ್ತಮ ದಿನದ ಪವಿತ್ರಾತ್ಮನ ಸ್ನಾನದೀಕ್ಷೆಯ ಬಗ್ಗೆ ಹೇಳಲಿಲ್ಲ. ಯಾಕೆಂದರೆ, ಈ ರೀತಿಯಲ್ಲಿ ಯಾರಿಗೂ ದೀಕ್ಷಾಸ್ನಾನ ನೀಡುವ ಅಧಿಕಾರ ಅವರಿಗೆ ಕೊಡಲ್ಪಟ್ಟಿರಲಿಲ್ಲ. ಈ ಅಧಿಕಾರವು ಕರ್ತನಿಗೆ ಮಾತ್ರವೇ ಇದ್ದು ಆತನು ಅದನ್ನು ತನ್ನ ವಶದಲ್ಲಿಟ್ಟುಕೊಂಡಿದ್ದನು. ಹೇಗೂ ಈ ಅಧಿಕಾರವು ಅಪೋಸ್ತಲರಿಗೂ ಮತ್ತು ಕರ್ತನ ವಾಕ್ಯವನ್ನು ಬೋಧಿಸುವ ಎಲ್ಲಾ ಪ್ರಮಾಣಿಕ ಬೊಧಕರುಗಳಿಗೂ ನಂತರದಲ್ಲಿ ದಯಪಾಲಿಸಲ್ಪಟ್ಟಿತು. ಅವರುಗಳು ಜನರಿಗೆ ಆತನ ನೂತನ ಸ್ವಭಾವದಲ್ಲಿ ಮತ್ತು ಬರಲಿರುವ ಮಹಿಮೆಯಲ್ಲಿ ಪಾಲುದಾರರಾದಲ್ಲಿ ಅವರು ಹೊಂದಿಕೊಳ್ಳುವ ಕರ್ತನ ಕೃಪೆಯ ಬಗ್ಗೆ, ಅವರ ನೀತಿನಿರ್ಣಯ, ಪವಿತ್ರಪಡಿಸಿಕೊಳ್ಳುವುದು ಅಥವಾ ಪ್ರತಿಷ್ಠಿಸಿಕೊಳ್ಳುವುದು ಅಥವಾ ಕ್ರಿಸ್ತನೊಂದಿಗೆ ಮರಣದಲ್ಲಿ ದೀಕ್ಷಾಸ್ನಾನ ಹೊಂದುವುದು ಇತ್ಯಾದಿಗಳ ಬಗ್ಗೆ ಬೋಧಿಸುವವರಾದರು. ದೀಕ್ಷಾಸ್ನಾನವು ಸಾಂಕೇತಿಕವಾದ ನೀರಿನ ದೀಕ್ಷಾಸ್ನಾನವನ್ನು ಒಳಗೊಂಡಿತ್ತು. ಇದು ಅಂತರಂಗದಲ್ಲಿ ನಡೆಯುವ ಅವರ ಹೃದಯಪ್ರತಿಷ್ಠೆಯನ್ನು ಬಾಹ್ಯರೂಪವಾಗಿ ಇತರರಿಗೆ ಪ್ರಕಟಿಸುವುದಾಗಿತ್ತು. ನಮ್ಮ ಕರ್ತನು ಸಹಾ ಮೊದಲಿಗೆ ಹೃದಯ ಪ್ರತಿಷ್ಠೆಯನ್ನು ಮಾಡಿಕೊಂಡವನಾಗಿ ಅದನ್ನು ನೀರಿನ ದೀಕ್ಷಾಸ್ನಾನದ ರೂಪದಲ್ಲಿ ಸಂಕೇತಗೊಳಿಸಿದನು.

ಪ್ರೇರಣೆಗೊಂಡ ಅಪೋಸ್ತಲರು ಈ ರೀತಿಯಲ್ಲಿ ತಮ್ಮ ನಿಯೋಗವನ್ನು ಅರ್ಥಮಾಡಿಕೊಂಡರು ಮತ್ತು ಅವರ ಎಲ್ಲಾ ಬೋಧನೆಗಳು ನಮಗೆ ನಿದರ್ಶನವಾಗಿದೆ. ಅವರು ಮೊದಲಿಗೆ ವಿಮೋಚನಾ ಕಾರ್ಯದಲ್ಲಿ ಕರ್ತನ ಕೃಪೆಯನ್ನು ಗೌರವಿಸುವುದನ್ನು ಕಲಿಸಿ ಜೀವಕ್ಕಾಗಿ ನೀತಿನಿರ್ಣಯದ ಬಗ್ಗೆ ನಂಬುವಂತೆ ಅವರನ್ನು ಪ್ರೋತ್ಸಾಹಿಸಿದರು. ನಂತರದಲ್ಲಿ ಅವರು ಹೃದಯದ ಸಂಪೂರ್ಣ ಪ್ರತಿಷ್ಠೆಯನ್ನು ಒತ್ತಾಯಿಸುತ್ತಾ "ಸಹೋದರರೇ. (ಇನ್ನು ಮುಂದೆ ಪಾಪಿಗಳೂ, ಅನ್ಯರೂ ಆಗಿರದೆ, ಕ್ರಿಸ್ತನಲ್ಲಿ ನಂಬಿಕೆಯಿಡುವುದರ ಮೂಲಕ ನೀತಿವಂತರೆಂದು ನಿರ್ಣಯಿಸಲ್ಪಟ್ಟವರು ಮತ್ತು ಆತನ ಮನೆವಾರ್ತೆಯವರು) ದೇವರ ಕರುಣೆಯನ್ನು (ಇದರ ಪಾಲನ್ನು ನೀವಿಗಾಗಲೇ ನಿಮ್ಮ ನೀತಿನಿರ್ಣಯದಲ್ಲಿ ಹೊಂದಿಕೊಂಡಿದ್ದೀರಿ) ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನೆಂದರೆ – ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ, ಮೆಚ್ಚಿಕೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ. ಇದೇ ನಿಮ್ಮ ವಿವೇಕಪೂರ್ವಕವಾದ ಆರಾಧನೆಯು..." (ರೋಮಾ. 12:1). ಇದು ಪ್ರತಿಷ್ಠೆ ಹೊಂದಲು ಅಥವಾ ತ್ಯಾಗಮಾಡಲು ಅಥವಾ ಮರಣದಲ್ಲಿ ದೀಕ್ಷಾಸ್ನಾನ ಪಡೆಯಲು ಒಂದು ಆಹ್ವಾನದಂತಿದೆ. ಈ ಮಾತುಗಳನ್ನು ಹೃದಯದಿಂದ ಪೂರ್ಣ ಸಂತೋಷಪಟ್ಟು ಕೇಳಿದ ಅನೇಕರು ದೀಕ್ಷಾಸ್ನಾನ ಪಡೆದರು– ಕೇವಲ ಪ್ರತಿಷ್ಠೆಯ ಪ್ರತಿಜ್ಞೆಯಲ್ಲಿ ಮಾತ್ರವಲ್ಲ, ಇದರ ಬಾಹ್ಯ ಸಾಕ್ಷಿಯಾಗಿ ಸಾಂಕೇತಿಕವಾಗಿಯೂ ಸಹಾ ನೀರಿನ ದೀಕ್ಷೆಪಡೆದರು.

ಯೆಹೂದ್ಯರೊಡನೆ ಮಾತ್ರವಲ್ಲ, ಅನ್ಯಜನರ ಸಂಗಡಲೂ ಈ ದೀಕ್ಷಾಸ್ನಾನವು ಅಪೋಸ್ತಲರ ಸಂಪ್ರದಾಯವಾಗಿತ್ತು ಎಂಬುದನ್ನು ಮುಂದಿನ ನಿದರ್ಶನಗಳ ಮೂಲಕ ಗಮನಿಸಿ. ನಾವು ಸಮಾರ್ಯರ ಬಗ್ಗೆ ಹೀಗೆ ಓದುತ್ತೇವೆ –"ಫಿಲಿಪ್ಪನು ದೇವರ ರಾಜ್ಯದ ವಿಷಯದಲ್ಲಿಯೂ, ಯೇಸುಕ್ರಿಸ್ತನ ವಿಷಯವಾದ ಶುಭವರ್ತಮಾನವನ್ನು ಸಾರಲು ಗಂಡಸರೂ ಹೆಂಗಸರೂ (ಮಕ್ಕಳಲ್ಲ) ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು" (ಅ.ಕೃ.8:12). ಐಥೋಪ್ಯನಾದ ಆ ಕಂಚುಕಿಯು ಫಿಲಿಪ್ಪನ ಬೋಧನೆಯನ್ನು ಕೇಳಿದ ಕೂಡಲೇ ನೀರಿನಲ್ಲಿ ದೀಕ್ಷಾಸ್ನಾನ ಪಡಕೊಂಡನು (38ನೇ ವಚನ). ಪೇತ್ರನು ಕೊರ್ನೇಲ್ಯನಿಗೆ ಮತ್ತು ಆತನ ಬಂಧು ಬಳಗದವರಿಗೂ, ಸ್ನೇಹಿತರಿಗೂ ಬೋಧಿಸಿದ ತರುವಾಯ, ದೇವರ ವಾಕ್ಯವನ್ನು ಕೇಳಿಸಿಕೊಂಡವರ ಮೇಲೆ (ಮಕ್ಕಳ ಮೇಲಲ್ಲ) ಪವಿತ್ರಾತ್ಮ ವರವು ಇಳಿದುಬಂತು. ಮತ್ತು ನೀವು ಯೇಸುಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳ ಬೇಕೆಂದು ಅಪ್ಪಣೆ ಕೊಟ್ಟನು. (ಅ.ಕೃ. 10:44–48) ಮತ್ತು "ಕೊರಿಂಥದವರಲ್ಲಿ ಅನೇಕರು ಕೇಳಿ ನಂಬಿ ದೀಕ್ಷಾಸ್ನಾನ ಮಾಡಿಸಿಕೊಂಡರು (ಅ.ಕೃ. 18:8) – ಲುದ್ಯಳೆಂಬ ಸ್ತ್ರೀ ಧೂಮ್ರವರ್ಣದ ವಸ್ತ್ರಗಳನ್ನು ಮಾರುವವಳು ಥುವತೈರ ಎಂಬ ಊರಿನವಳೂ ದೇವಭಕ್ತಳೂ ಆಗಿದ್ದಳು. ಪೌಲನು ಹೇಳಿದ ಮಾತುಗಳಿಗೆ ಲಕ್ಷ್ಯಕೊಡುವದಕ್ಕೆ ಕರ್ತನು ಆಕೆಯ ಹೃದಯವನ್ನು ತೆರೆದನು. ಆಕೆಯೂ ಆಕೆಯ ಮನೆಯವರೂ ದೀಕ್ಷಾಸ್ನಾನ ಮಾಡಿಸಿಕೊಂಡರು. (ಅ.ಕೃ. 16:14,15) ಫಿಲಿಪ್ಪಿ ಪಟ್ಟಣದ ಸೆರೆ ಯಜಮಾನನು ತನ್ನವರೆಲ್ಲರ ಸಹಿತವಾಗಿ ಪೌಲ ಸೀಲರಿಂದ ದೀಕ್ಷಾಸ್ನಾನ ಪಡಕೊಂಡನು. (ಅ.ಕೃ 16:33) ಕೊರಿಂಥ ಪತ್ರಿಕೆಯಲ್ಲಿ ಪೌಲನು "ಸ್ತೆಫನನ ಮನೆಯವರಿಗೆ ಸಹಾ ದೀಕ್ಷಾಸ್ನಾನ ಮಾಡಿಸಿದೆನು" (1ಕೊರಿ. 1:16) ಎಂದು ಬರೆಯುತ್ತಾನೆ.

ಪೌಲನು ಮೇಲಿನ ವಾಕ್ಯಭಾಗದ ಅಂತ್ಯದಲ್ಲಿ ತಾನು ಕೊಂಚ ಜನರಿಗೆ ಮಾತ್ರವೇ ತಾನು ದೀಕ್ಷಾಸ್ನಾನ ನೀಡಿದೆನೆಂದು ಹೇಳಿದ್ದಾನೆ.ಆತನ ಮಂದ ದೃಷ್ಟಿಯ ದೆಸೆಯಿಂದ ಇದು ನಿಸ್ಸಂಶಯವಾಗಿ ಆತನ ದೇಹದಲ್ಲಿ ಒಂದು ಶೂಲ ನಾಟಿದಂತಿದೆ. ಆತನ ಮೂಲಕವಾಗಿ ದೀಕ್ಷಾಸ್ನಾನ ಪಡೆದ ಆ ಕೆಲವೇ ಮಂದಿ, ಬಹುಶಃ ಇದನ್ನು ಸೂಕ್ತ ರೀತಿಯಲ್ಲಿ ನೆರವೇರಿಸಲು ಬೇರೆ ಯಾರೂ ಸಿಗದ ಕಾರಣ ಆತನಿಂದ ಪಡಕೊಂಡರು. ಈ ಕೆಲವೇ ಮಂದಿಗೆ ತಾನು ದೀಕ್ಷಾಸ್ನಾನ ಕೊಟ್ಟಿರುವುದಕ್ಕಾಗಿ ಆತನು ತಂದೆ ದೇವರನ್ನು ಸ್ತುತಿಸುತ್ತಾನೆ. ಆದರೆ ಇದನ್ನು ಆತನು ನಿಜವಾದ ದೀಕ್ಷಾಸ್ನಾನ ಅಥವಾ ಅದರ ಸಂಕೇತದಲ್ಲಿ ತನ್ನ ಔಚಿತ್ಯವನ್ನು ಕಳಕೊಂಡನೆಂದು ಅರ್ಥೈಸಬಾರದು. ಆದರೆ ಆ ನಗರದಲ್ಲಿ ಒಂದು ವಾಗ್ವಾದವು ಉಂಟಾದುದರಿಂದ ಪಂಗಡಗಳು ಹುಟ್ಟಿಕೊಂಡು – ನಾನು ಪೌಲನವನು, ನಾನು ಅಪೊಲ್ಲೋಸನವನು, ನಾನು ಪೇತ್ರನವನು ಮುಂತಾಗಿ ಪರಸ್ಪರ ಕಚ್ಚಾಟದಲ್ಲಿ ತೊಡಗುವಾಗ ಅಪೋಸ್ತಲನು ತಾನು ಕೆಲವೇ ಮಂದಿಗೆ ಮಾತ್ರವೇ ದೀಕ್ಷಾಸ್ನಾನ ನೀಡಿದೆನೆಂದು ಸಂತೋಷವಾಗಿ ಹೇಳಿದನು. ಇಲ್ಲವಾದಲ್ಲಿ ಯಾರಾದರೂ ಎದ್ದು ಈತನು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ನೀಡದೆ ತನ್ನ ಸ್ವಂತ ಹೆಸರಿನಲ್ಲಿ ದೀಕ್ಷಾಸ್ನಾನ ನೀಡಿ ತನ್ನ ಸ್ವಂತ ಶಿಷ್ಯರನ್ನು ಕಟ್ಟುತ್ತಿದ್ದಾನೆಂಬ ಆರೋಪವನ್ನು ಹೊರಿಸಬಹುದಿತ್ತು.

ನಮ್ಮ ಕರ್ತನ ಮತ್ತು ಆತನ ಅಪೋಸ್ತಲರುಗಳ ವಿಧಿ ಮತ್ತು ಆಚರಣೆಗಳ ಬಗ್ಗೆ ಸತ್ಯವೇದದಲ್ಲಿನ ಈ ಸರಳವಾದ ಹೇಳಿಕೆಗಳ ಬೆಳಕಿನಲ್ಲಿ ಈ ಸಂಕೇತಿಕವಾದ ನೀರಿನ ದೀಕ್ಷಾಸ್ನಾನವು ಸತ್ಯವೇದದ ಬೋಧನೆಯಲ್ಲ ಅಥವಾ ಇದು ಯೆಹೂದ್ಯರಿಗೆ ಮಾತ್ರವೇ ಅನ್ವಯವಾಗುವಂತೆ ಬೋಧಿಸಲ್ಪಟ್ಟಿದೆ ಅಥವಾ ಇದು ಒಂದು ಪ್ರಾರಂಭಿಕ ಕ್ರಿಯೆಯಾಗಿ ಬೋಧಿಸಲ್ಪಟ್ಟಿದೆ ಎಂಬುದಾಗಿ ಹೇಳುವವರು ನಿಜವಾಗಿಯೂ ಉದ್ಧಟಗಾರರೇ ಸರಿ. ಇದರ ವ್ಯತಿರಿಕ್ತವಾಗಿ ಇದು ಬೋಧಿಸಲ್ಪಟ್ಟಿದ್ದು ಯುಗದ ಪ್ರಾರಂಭದಿಂದ ಇಂದಿನವರೆಗೂ ಆಚರಣೆಯಲ್ಲಿದೆ. ಆದರೆ ಇದರಲ್ಲಿ ವಿವಿಧ ರೂಪಗಳೂ, ಆಚಾರ ವಿಧಿಗಳು ಇದ್ದು, ಇದರ ಅರ್ಥದ ಬಗ್ಗೆ ಕೆಲವೊಮ್ಮೆ ತಪ್ಪಾದ ಕಲ್ಪನೆಯನ್ನುಂಟುಮಾಡಿ ಇದರಿಂದ ಹೆಚ್ಚಿನ ಗೊಂದಲವುಂಟಾಗಿ ನಿಜವಾದ ದೀಕ್ಷಾಸ್ನಾನದ ದೃಷ್ಟಿಕೋನಕ್ಕೆ ಧಕ್ಕೆಯಾಗಬಹುದು. ನಿಜವಾಗಿಯೂ ಒಳ್ಳೆಯ ಕಾರಣಕ್ಕಾಗಿ ಎಲ್ಲಾ ಕ್ರೈಸ್ತರು ನೀರಿನ ದೀಕ್ಷಾಸ್ನಾನವು ದೇವರಿಂದ ನೇಮಕವಾದುದೆಂಬ ಗೌರವವನ್ನು ನೀಡುತ್ತಿದ್ದಾರೆ. ಈ ಚರ್ಚಾ ವಿಷಯದ ಬಗ್ಗೆ ಪ್ರತಿ ಹೇಳಲು ಇನ್ನೂ ಯಾರಾದರೂ ಒಲವು ತೋರಿಸುವುದಾದಲ್ಲಿ ನಮಗೆ ಅವನೊಡನೆ ಯಾವ ವಾಗ್ವಾದವೂ ಇಲ್ಲ. ಆದರೆ ಅಂಥವನು ಪ್ರಾಮಾಣಿಕನಾಗಿದ್ದು ತನ್ನ ಹೃದಯದಲ್ಲಿ ನಿಜವಾದ ದೀಕ್ಷಾಸ್ನಾನವನ್ನು ಅಂದರೆ ತನ್ನ ಚಿತ್ತವನ್ನು ತಂದೆಯ ಚಿತ್ತದೊಂದಿಗೆ ದೀಕ್ಷಾಸ್ನಾನ ಮಾಡಿಕೊಂಡದ್ದೇ ಆದರೆ – ಆತನು ತನ್ನ ಪಾಲಿಗೆ ಮತ್ತು ಈ ಲೋಕದ ಪಾಲಿಗೆ ಸತ್ತವನಾಗಿದ್ದು ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರಪಾಲಿಗೆ ಜೀವಿಸುವುದಾದರೆ ದೇವರು ತಾನೆ ಈ ಸಂಗತಿಗಳನ್ನು ಆತನಿಗೆ ಬಹಿರಂಗಗೊಳಿಸುತ್ತಾನೆ– "ಯಾವುದಾದರೂ ಒಂದು ವಿಷಯದಲ್ಲಿ ನೀವು ಬೇರೆ ಅಭಿಪ್ರಾಯವುಳ್ಳವರಾಗಿದ್ದರೆ ಅದನ್ನೂ ದೇವರು ನಿಮಗೆ ತೋರಿಸಿಕೊಡುವನು" (ಫಿಲಿಪ್ಪ 3: 15).

ಅದೇ ಸಮಯದಲ್ಲಿ ಅವರು ನಿಜವಾದ ದೀಕ್ಷಾಸ್ನಾನವನ್ನು ಕಂಡುಕೊಂಡು ಅದರಲ್ಲಿ ಭಾಗವಹಿಸಿರುವುದಕ್ಕಾಗಿ ನಾವು ಅವರೊಡನೆ ಸಂತೋಷಿಸಬೇಕು. ಸಂಕೇತಕ್ಕೆ ಕುರುಡಾಗಿದ್ದು ನಿಜವಾದ ದೀಕ್ಷಾಸ್ನಾನವನ್ನು ಕಂಡುಕೊಳ್ಳುವುದು ಮತ್ತು ಅದರಲ್ಲಿ ಸಂತೋಷಿಸುವುದು ಸಂಕೇತವನ್ನು ನೋಡುತ್ತಾ ನಿಜವಾದುದನ್ನು ಕಾಣದಿರುವುದಕ್ಕಿಂತ ಎಷ್ಟೋ ಭಾಗ್ಯಕರ. ಇದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ.ಹೀಗಿದ್ದಾಗ್ಯೂ, ಇದೇ ದೃಷ್ಟಿಕೋನದೊಡನೆ ನಾವು ಸಂಕೇತಿಕ ದೀಕ್ಷಾಸ್ನಾನದ ಬಗ್ಗೆ ಬಲವಾದ ಒಲವುಳ್ಳವರಾಗಿದ್ದೇವೆ. ಆದರೆ, ಕ್ರೈಸ್ತ ಸಾಂಗತ್ಯವನ್ನು ಅದರ ಮೇಲೆ ಆಧಾರಗೊಳಿಸದೆ ಕ್ರಿಸ್ತನೊಂದಿಗೆ ಮರಣಹೊಂದುವ ನಿಜವಾದ ದೀಕ್ಷಾಸ್ನಾನದ ಮೇಲೆ ಆಧಾರಪಡಿಸುತ್ತೇವೆ. ಆದುದರಿಂದ, ಯಾರು ಕರ್ತನನ್ನು ತಮ್ಮ ವಿಮೋಚಕನೆಂದು ಒಪ್ಪಿಕೊಳ್ಳುತ್ತಾರೋ ಮತ್ತು ಆತನಿಗಾಗಿ ತಮ್ಮ ಹೃದಯ ಮತ್ತು ಜೀವಿತವನ್ನು ಪೂರ್ಣವಾಗಿ ಮುಡುಪಿಡುತ್ತಾರೋ ಅವರ ಹೆಸರುಗಳು ಪರಲೋಕ ರಾಜ್ಯದಲ್ಲಿ ಬರೆಯಲ್ಪಟ್ಟಿವೆ ಮತ್ತು ಅವರು ಕ್ರಿಸ್ತನಲ್ಲಿ ನೂತನ ಸೃಷ್ಟಿಗಳಾಗಿದ್ದಾರೆ. ಅವರು ಯೆಹೂದ್ಯರಾಗಿ ಹುಟ್ಟಿರಬಹುದು, ಅನ್ಯಜನರಾಗಿದ್ದಿರಬಹುದು, ಬಂಧನ ದಲ್ಲಿರಬಹುದು ಅಥವಾ ಸ್ವತಂತ್ರರಾಗಿರಬಹುದು, ಪುರುಷರಿರಬಹುದು, ಸ್ತ್ರೀಯರಿರಬಹುದು, ನೀರಿನ ದೀಕ್ಷಾಸ್ನಾನ ಪಡೆದಿರಬಹುದು ಅಥವಾ ಅದನ್ನು ಪಡೆಯದಿದ್ದಿರಬಹುದು. ಆದರೂ ಅಂಥವರೆಲ್ಲರನ್ನೂ ನಾವು ಕರ್ತನಲ್ಲಿ ನಮ್ಮ ಸಹೋದರರನ್ನಾಗಿ ಮತ್ತು ಪವಿತ್ರ ಸಭೆಯ ಸದಸ್ಯರನ್ನಾಗಿ ಅಂಗೀಕರಿಸುತ್ತೇವೆ.

ಮತ್ತೊಂದೆಡೆ, ಜ್ಞಾನದ ಪ್ರತಿಯೊಂದು ಅಂಶವೂ ಸವಲತ್ತುಗಳ ಹೆಚ್ಚಳವನ್ನು ಮತ್ತು ಸಂತೋಷವನ್ನು ಮಾತ್ರವಲ್ಲ ಜವಾಬ್ಧಾರಿಯ ಹೆಚ್ಚಳವನ್ನೂ ತರುವುದಾಗಿದೆ ಎಂಬುದನ್ನು ಮರೆಯ ಬಾರದು. ಆದುದರಿಂದ, ನೀರಿನ ಸಂಕೇತದ ಸೌಂದರ್ಯ ಮತ್ತು ಅಧಿಕಾರವನ್ನು ನೋಡಲು ಬರುವವರು ಅದೇ ಸಮಯದಲ್ಲಿ ಕರ್ತನೊಡನೆ ನಿಜವಾದ ದೀಕ್ಷಾಸ್ನಾನದಲ್ಲಿ ತಮ್ಮ ಚಿತ್ತದ ಮರಣ ಸ್ಥಿತಿಯನ್ನೂ ಕಾಣುವವರಾಗಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಸಂಕೇತಕ್ಕೆ ವಿಧೇಯರಾಗದೇ ಇರುವುದು ತ್ಯಾಗವನ್ನು ಹಿಂದಕ್ಕೆ ಪಡಕೊಂಡಂತೆ ಎಂಬುದನ್ನು ಸುಲಭವಾಗಿ ನೋಡಬಹುದು. ಇದರಿಂದ ನಮ್ಮ ಕರೆಯನ್ನು ಮತ್ತು ಆಯ್ಕೆಯನ್ನು ವಿಫಲಗೊಳಿಸಿದಂತಾಗುತ್ತದೆ.

## ದೀಕ್ಷಾಸ್ನಾನದ ಸಮಂಜಸವಾದ ಸಂಕೇತ

## The Proper Symbol of Baptism

ನಾವು ಚಿಮಿಕಿಸುವ, ಸುರಿಯುವ ಮತ್ತು ಮುಳುಗಿಸುವ ದೀಕ್ಷಾಸ್ನಾನಗಳ ಬಗ್ಗೆ ಇವುಗಳಲ್ಲಿ ಮೂಲತಃ ಅಪೋಸ್ತಲರು

ಅನುಸರಿಸಿದ ವಿಧಾನ ಯಾವುದು ಎಂಬುದರ ಬಗ್ಗೆ ಇರುವ ಅಸಂಖ್ಯಾತ ಸಾಧಕ ಬಾಧಕಗಳನ್ನು ಚರ್ಚಿಸಲು ಪ್ರಯತ್ನಿಸುವುದಿಲ್ಲ. ಆದರೆ ಯಾವ ಶಿಶುವೂ ತನ್ನ ಚಿತ್ತವನ್ನು ಕ್ರಿಸ್ತನ ಚಿತ್ತದಲ್ಲಿ ದೀಕ್ಷೆಗೊಳಿಸುವ ಅಥವಾ ಸಮರ್ಪಿಸುವ ಮತ್ತು ಅದು ತನ್ನ ಪಾಲಿಗೆ ಮತ್ತು ಲೋಕದ ಪಾಲಿಗೆ ಸಾಯುವ ಮನಸ್ಥಿತಿ ಹೊಂದಿರುವುದಿಲ್ಲ ಎಂಬುದನ್ನು ಮಾತ್ರ ನಾವಿಲ್ಲಿ ಸಲಹೆ ಮಾಡುವವರಾಗಿದ್ದೇವೆ. ಸಾಂಕೇತಿಕ ದೀಕ್ಷಾಸ್ನಾನವನ್ನು ನಿಜವಾದ ದೀಕ್ಷಾಸ್ನಾನದ ಮೊದಲೇ ಯಾವುದೇ ರೀತಿಯ ನ್ಯಾಯಸಮ್ಮತವಾಗಿ ಕಂಡರೂ ಅದನ್ನು ಮಾಡಬಾರದೆಂದು ನಾವು ಒತ್ತಾಯಿಸುತ್ತೇವೆ. ಯಾಕೆಂದರೆ, ಸಾಂಕೇತಿಕ ದೀಕ್ಷಾಸ್ನಾನವು ನಮ್ಮ ಹೃದಯ, ನಮ್ಮ ಚಿತ್ತಗಳ ನಡುವೆ ಮತ್ತು ಕರ್ತನೊಡನೆ ಗೌಪ್ಯದಲ್ಲಿ ಈಗಾಗಲೇ ಪ್ರಕಟವಾಗಿರುವುದನ್ನು ಬಾಹ್ಯರೂಪದಲ್ಲಿ ಅರಿಕೆ ಮಾಡುವುದಾಗಿದೆ.

ಈ ಸಂಗತಿಗಳು ಸತ್ಯವಾಗಿರುವಾಗ, ಅಧಿಕ ಸಂಖ್ಯೆಯ ಕ್ರೈಸ್ತರು ಯಾವುದೇ ಸಾಂಕೇತಿಕ ಅಥವಾ ನೀರಿನ ದೀಕ್ಷಾಸ್ನಾನವನ್ನು ಎಂದಿಗೂ ಪಡೆಯದೆ ಅವರು ಅದನ್ನು ತಮ್ಮ ಸಮರ್ಪಣೆಯ ಶಪಥವನ್ನು ವಿವೇಕಪೂರ್ವಕವಾಗಿ ಮಾಡಿದ ನಂತರವೇ ತೆಗೆದುಕೊಳ್ಳುತ್ತಾರೆ. ಸಮರ್ಪಣೆಯ ಮುನ್ನವೇ ವಯಸ್ಕರನ್ನು ನೀರಿನಲ್ಲಿ ಮುಳುಗಿಸುವುದು ಸಾಮಾನ್ಯ ಸ್ನಾನಕ್ಕಿಂತ ಹೆಚ್ಚಿನ ಪರಿಣಾಮಕಾರಿ ಎನಿಸುವುದಿಲ್ಲ. ಮತ್ತು ಇದು ಸಮರ್ಪಣಗೊಳ್ಳದ ಶಿಶುವಿಗೆ ನೀಡುವ ಚಿಮಿಕಿಸುವ ದೀಕ್ಷಾಸ್ನಾನಕ್ಕಿಂತ ಹೆಚ್ಚಾಗಲಾರದು. ನಮ್ಮ ಕರ್ತನಿಂದ ನೇಮಿಸಲ್ಪಟ್ಟ ಮತ್ತು ನಾವು ತೀವ್ರವಾಗಿ ವಿಧೇಯ ರಾಗಬೇಕಾಗಿರುವ ನಿಜವಾದ ನೀರಿನ ದೀಕ್ಷಾಸ್ನಾನ, ನಿಜವಾದ ಸಂಕೇತ ಯಾವುದೆಂದು ವಿಚಾರಿಸುವುದು ಎಲ್ಲರಿಗೂ ಅವಶ್ಯವಾಗಿದೆ. ಸ್ವಚಿತ್ತಕ್ಕೆ ಮತ್ತು ಲೋಕದ ಅಭಿಪ್ರಾಯಗಳಿಗೆ ಸತ್ತಿರುವ ಪ್ರತಿಯೊಂದು ಸಮರ್ಪಣೆಗೊಂಡ ಹೃದಯವೂ ಉಳಿದ ಸಂಗತಿಗಳಂತೆ ಇದರಲ್ಲಿಯೂ ಕರ್ತನ ಚಿತ್ತವನ್ನು ತಿಳಿಯಲು ಜಾಗರೂಕರಾಗಿರತಕ್ಕದ್ದು. ಇಂಥಹ ಜಾಗರೂಕತೆಯು **"ನೀವು ಸಹಾ ನಿಮ್ಮನ್ನು ಕ್ರಿಸ್ತ ಯೇಸುವಿನ ಐಕ್ಯದಿಂದ ಪಾಪದ ಪಾಲಿಗೆ ಸತ್ತವರೂ ದೇವರಿಗಾಗಿ ಜೀವಿಸುವವರೂ ಎಂದು ಎಣಿಸಿಕೊಳ್ಳಿರಿ"** (ರೋಮಾ. 6:11).

ಬಹುಶಃ ಸ್ನಾನದೀಕ್ಷೆಯ ರೀತಿಯ ಬಗ್ಗೆ ಇರುವ ಗೊಂದಲವು ಸಾದ್ಯಂತವಾಗಿ ಆದಿ ಸಭೆಗಳಲ್ಲಿ ಈ ಪದ್ಧತಿಯ ಬಗ್ಗೆ ನಿದರ್ಶನಗಳು ಬಹಳಷ್ಟು ಗಲಿಬಿಲಿಯನ್ನು ಉಂಟುಮಾಡುವವುಗಳಾಗಿವೆ. ಅಪೊಸ್ತಲರುಗಳ ದೀಕ್ಷಾಸ್ನಾನ ವಿಧಾನವು ಚಿಮುಕಿಸುವುದಾಗಿತ್ತೋ, ಸುರಿಯುವುದಾಗಿತ್ತೋ ಅಥವಾ ಮುಳುಗಿಸುವುದಾಗಿತ್ತೋ ಎಂಬುದಕ್ಕೆ ನಮಗೆ ಯಾವ ಮಾರ್ಗದರ್ಶನವೂ ದೊರೆಯುವುದಿಲ್ಲ. ನಿಜವಾದ ದೀಕ್ಷಾಸ್ನಾನವು ಏನು ಒಳಗೊಂಡಿದೆ ಎಂಬುದನ್ನು ಸ್ಪಷ್ಟವಾಗಿ ಕಂಡುಕೊಳ್ಳುವ ಸ್ಥಿತಿಯಲ್ಲೇ ನಾವಿನ್ನೂ ಇದ್ದೇವೆ. ಇದರ ಚಿತ್ರಣ ಏನಾಗಬೇಕಿತ್ತು, ಏನಾಗಬಾರದಾಗಿತ್ತು ಎಂದು ಸ್ಪಷ್ಟವಾಗಿ ನಮ್ಮಿಂದ ಕಂಡುಕೊಳ್ಳಲು ಸಾಧ್ಯವಿದೆ. ಆಚರಣೆಯಲ್ಲಿರುವ ಎಲ್ಲಾ ಪದ್ದತಿಗಳನ್ನು ಕೂಲಂಕುಶವಾಗಿ ಪರಿಶೀಲಿಸುವುದಾದರೆ ಎಲ್ಲವೂ ಕ್ರಿಸ್ತನೊಂದಿಗೆ ಮರಣ ಮತ್ತು ಹೂಣುವಿಕೆಯನ್ನು ಚಿತ್ರಿಸುತ್ತವೆ ಎಂಬುದು ಮಾತ್ರವೇ ಕಂಡುಬರುತ್ತದೆ. ಕೆಲವು ಹನಿಗಳು ಅಥವಾ ಹೆಚ್ಚಿನ ನೀರನ್ನು ಹಣೆಯ ಮೇಲೆ ಪ್ರೋಕ್ಷಿಸುವುದರಿಂದ ಅಥವಾ ವ್ಯಕ್ತಿಯ ಮೇಲೆ ಪಾತ್ರೆಯ ತುಂಬಾ ನೀರನ್ನು ಸುರಿಯುವುದರಿಂದ ಒಬ್ಬನು ಲೋಕದ ಪಾಲಿಗೆ ಮತ್ತು ಸ್ವಂತಕ್ಕಾಗಿ ಕ್ರಿಸ್ತನೊಡನೆ ಸಾಯುವುದನ್ನು ಕಾಣಲು ನಾವು ವಿಫಲರಾಗುತ್ತೇವೆ. ಇವೆರಡರಲ್ಲಿ ಮರಣದ ಬಗ್ಗೆ ಯಾವ ಸಾಂಕೇತಿಕ ಸಾಮ್ಯವಿದೆ ಎಂಬುದನ್ನು ನಾವು ಗ್ರಹಿಸಲಾರೆವು. ಆದರೆ ನಾವು ಮುಳುಗುವಿಕೆಯನ್ನು ಪರಿಗಣಿಸುವಾಗ ನಾವು ಕ್ಷಣ ಮಾತ್ರದಲ್ಲಿ ನಿಜವಾದ ದೀಕ್ಷಾಸ್ನಾನದ ಅಭಿಪ್ರಾಯ ಮೂಡಿಸುವ ಒಂದು ಅದ್ಭುತವಾದ, ಮನದಟ್ಟಾಗುವ, ಅಸಾಮಾನ್ಯ ಮತ್ತು ಸೂಕ್ತವಾದ ನಿದರ್ಶನವನ್ನು ಕಂಡುಕೊಳ್ಳುತ್ತೇವೆ. ಗ್ರೀಕ್ ಪದವಾದ 'Baptizo' ಎಂಬುದು ಮುಳುಗುವಿಕೆಯನ್ನು, ಮುಚ್ಚುವುದನ್ನು, ಹೂಣಿಡುವುದನ್ನು ಮತ್ತು ಆವರಿಸಿಕೊಳ್ಳುವುದನ್ನು ಸೂಚಿಸುತ್ತದಲ್ಲದೆ ಇಡೀ ಪದ್ದತಿಯಲ್ಲಿ ಕ್ರಿಸ್ತನ ಹೆಸರಿನಲ್ಲಿ ಹಿಮ್ಮುಖವಾಗಿ ಮಾಡುವ ಒಂದೇ ಮುಣುಗಿಸುವಿಕೆಯು ಹೂಣಿಡುವಿಕೆಯಲ್ಲಿ ಎದ್ದುಕಾಣುವ ಒಂದು ಚಿತ್ರಣವಾಗಿದೆ ಮತ್ತು ಪ್ರತಿಯೊಂದು ವೈಶಿಷ್ಟ್ಯತೆಗೆ ಪೂರಕವಾಗಿದೆ. ಈ ಸಂಕೇತವನ್ನು ನೆರವೇರಿಸುವವನು ನಮ್ಮ ಕರ್ತನನ್ನು ಪ್ರತಿನಿಧಿಸುತ್ತಾನೆ. ಆತನ ಬಳಿಗೆ ಹೋಗುವವರು ಹೃದಯಪೂರ್ವಕವಾಗಿ ಕರ್ತನ ಬಳಿಗೆ ಹೋಗುವವರಂತೆ ಇದ್ದಾರೆ. ನಾವು ನಮ್ಮಷ್ಟಕ್ಕೇ ನಮ್ಮ ಪಾಲಿಗೆ ಮತ್ತು ಈ ಲೋಕಕ್ಕೆ ಸಾಯಲು ಸಾಧ್ಯವಿಲ್ಲವೆಂದು ಅರಿಕೆಮಾಡುತ್ತಾ ನಾವು ನಮ್ಮನ್ನು ಕರ್ತನ ಕೈಗಳಿಗೆ ಒಪ್ಪಿಸಿಕೊಡುತ್ತೇವೆ ಮತ್ತು ನಮ್ಮ ಚಿತ್ತವನ್ನು ನಾವು ಬಿಟ್ಟು ಬಿಟ್ಟವರಾಗಿ ಅದನ್ನು ಆತನೇ ಅಂಗೀಕರಿಸಿಕೊಳ್ಳುವಂತೆ ಬೇಡಿಕೊಳ್ಳುವಾಗ ಆತನು ನಮ್ಮನ್ನು ಮರಣದಲ್ಲಿ ಮುಣಿಗಿಸುತ್ತಾನೆ – ಅಂತಹ ಅನುಭವ, ಶಿಸ್ತು, ಸಹಾಯ ಮತ್ತು ದಂಡನೆಗಳನ್ನು ಉಂಟುಮಾಡುತ್ತಾನೆ. ಇವುಗಳು ನಮ್ಮ ನಮ್ಮ ಸಮರ್ಪಣೆಯ ಒಡಂಬಡಿಕೆಯನ್ನು ನೆರವೇರಿಸಲು ನಮ್ಮನ್ನು ಶಕ್ತರನ್ನಾಗಿ ಮಾಡುತ್ತವೆ. ಅಭ್ಯರ್ಥಿಯು ತನ್ನ ಚಿತ್ತವನ್ನು ಬಿಟ್ಟುಕೊಟ್ಟಾಗ ನೆರವೇರಿಸುವವನು ನಿಧಾನವಾಗಿ ಆತನನ್ನು ನೀರಿನಲ್ಲಿ ಇಳಿಸುತ್ತಾನೆ. ಆತನು ಈ ರೀತಿಯಲ್ಲಿ ನಿಸ್ಸಹಾಯಕನಾಗಿ ನೀರಿನಲ್ಲಿ ತನ್ನ ಬೆನ್ನಹಿಂದಿರುವಾಗ ಮರಣದಲ್ಲಿ ಯಾವ ರೀತಿ ನಾವು ಪೂರ್ಣ ಶಕ್ತಿಹೀನರಾಗಿದ್ದು ಸಹಾಯದ ಅವಶ್ಯಕತೆ ಉಂಟಾಗುತ್ತದೋ ಹಾಗೆಯೇ ಆಗುತ್ತದೆ. ನಂತರ ನೆರವೇರಿಸುವವನು ಪುನಃ ಆತನನ್ನು ಯಥಾಸ್ಥಿತಿಗೆ ಅಂದರೆ ತನ್ನ ಕಾಲ ಮೇಲೆ ನಿಲ್ಲುವಂತೆ ತರುವಾಗ ನಾವು ತನ್ನ ಸ್ವಂತ ಶಕ್ತಿಯ ಮೇರೆಗೆ ಸೂಕ್ತ ಸಮಯದಲ್ಲಿ ನಮ್ಮನ್ನು ಸತ್ತವರೊಳಗಿಂದ ಎಬ್ಬಿಸುತ್ತೇನೆಂದು ನಮ್ಮ ಕರ್ತನು ಮಾಡಿದ ವಾಗ್ದಾನದ ಚಿತ್ರಣವೊಂದನ್ನು ಕಾಣುತ್ತೇವೆ. ಈ ಬಗ್ಗೆ ಭಿನ್ನಾಭಿಪ್ರಾಯವುಳ್ಳವರೊಂದಿಗೆ ನಾವು ಯಾವ ಒತ್ತಾಯವನ್ನು ಮಾಡಲು ಪ್ರಯತ್ನಿಸುವುದಿಲ್ಲ. ಆದರೆ ಈ ಸಂಕೇತದ ಯುಕ್ತತೆಗೆ ಕರ್ತನೇ ಜನಕನೆಂದು ನಮಗೆ

ಸ್ಪಷ್ಟವಾಗುತ್ತದೆ. ಈ ಸಮಗ್ರ ಸಂಗತಿಯ ಪರಿಪೂರ್ಣವಾದ ಚಿತ್ರಣದ ವ್ಯವಸ್ಥೆ ಮಾಡಲು ಬೇರೆ ಯಾರಿಂದಲಾದರೂ ಸಾಧ್ಯವೇ?

ಈ ನಿಜವಾದ ದೀಕ್ಷಾಸ್ನಾನವನ್ನು ಯಾರು ನೆರವೇರಿಸಿದ್ದಾರೋ – ಯಾರು ತಮ್ಮನ್ನು ಕರ್ತನೊಡನೆ ಸಾಯಲು, ಆತನ ಮರಣದ ಪ್ರಕಾರ ಹೂಣಿಡಲು ಕರ್ತನ ಕೈಗಳಿಗೆ ಈಗಾಗಲೇ ಒಪ್ಪಿಸಿಕೊಟ್ಟು ನಂತರದಲ್ಲಿ ಈ ಸಾಂಕೇತಿಕ ಚಿತ್ರಣದ ಸೌಂದರ್ಯವನ್ನು ಕಾಣುತ್ತಾರೋ ಅವರು ತಮ್ಮ ಪಾತ್ರದಲ್ಲಿ ಇದನ್ನು ಯಶಸ್ವಿಯಾಗಿ ಪೂರೈಸುವ ತೀವ್ರವಾದ ಬಯಕೆಯನ್ನು ಹೊಂದಿದ್ದಾರೆಂದು ನಾವು ನಂಬುತ್ತೇವೆ. ಆತನು ಹೃದಯಪೂರ್ವಕವಾಗಿ– "ಕರ್ತನೇ ನಾನು ನಿನ್ನ ಚಿತ್ತವನ್ನು ನೆರವೇರಿಸಲು ಸಂತೋಷಿಸುತ್ತೇನೆ" ಎಂದು ಹೇಳುವವನಾಗಿದ್ದಾನೆ.

ಈ ಸಂಕೇತಕ್ಕೆ ವಿಧೇಯರಾಗುವುದರಿಂದ ಯಾವ ಸೌಕರ್ಯಗಳು ನಮಗೆ ಲಭಿಸುತ್ತವೆ? ಎಂಬ ಪ್ರಶ್ನೆಗೆ ನಮ್ಮ ಸಮರ್ಪಣಾ ಪ್ರತಿಜ್ಞೆಯ ಒಂದು ಭಾಗವನ್ನು ಮಾತ್ರ ನೆರವೇರಿಸುವುದರಿಂದ ಯಾವ ಪ್ರಯೋಜನಗಳೂ ಲಭಿಸವು, ಆದರೆ ಅದರ ಎಲ್ಲಾ ಅಗತ್ಯಗಳನ್ನೂ ನಾವು ಪೂರೈಸಿದಾಗಲೇ ಈ ಸೌಕರ್ಯಗಳು ನಮ್ಮದಾಗುತ್ತವೆಂದು ನಾವು ಉತ್ತರಿಸುತ್ತೇವೆ. ಮೊದಲನೆಯದು, ಮತ್ತು ಕಡೆಯದು ಎಲ್ಲವುಗಳೂ ನಮ್ಮ ಚಿತ್ತವನ್ನು ಕರ್ತನ ಚಿತ್ತದಲ್ಲಿ ಮಾಡುವ ಶರಣಾಗತಿಯಲ್ಲಿ ಮತ್ತು ಆತನ ಹೆಜ್ಜೆಜಾಡಿನಲ್ಲಿ ನಡೆಯುವ ಅವಿರತವಾದ ಶ್ರಮದಲ್ಲಿ ಅಡಕವಾಗಿವೆ. ಪೂರ್ಣವಾದ ಅನುಕೂಲತೆಗಳು ಪ್ರಯಾಣದ ಅಂತ್ಯದಲ್ಲಾಗುವ ಪ್ರಥಮ ಪುನರುತ್ಥಾನದಲ್ಲಿ ದೊರೆಯಲಿರುವಾಗ ಅದರ ಮಹಿಮೆ, ಗೌರವ ಮತ್ತು ನಿರ್ಲಯತ್ವಗಳನ್ನು ಈಗಲೂ ಕೆಲವು ಪ್ರಮಾಣದಲ್ಲಿ ಅನುಭವಿಸಬಹುದು. ನಾವು"ನೀತಿವಂತಿಕೆಯನ್ನು ಪೂರೈಸುವಲ್ಲಿ" ನಮ್ಮ ಕರ್ತನಂತೆ ಶ್ರಮಿಸಿರುವ ಕಾರಣ ಮನಃತೃಪ್ತಿ, ಮನಃಶಾಂತಿ ಇವುಗಳು ನದಿಯ ನೀರಿನಂತೆ ರಭಸದಿಂದ ನಿರಂತರವಾಗಿ ಮತ್ತು ಸ್ಥಿರವಾಗಿ ಆತನವರ ಜೀವನದಲ್ಲಿ ಹರಿದು ಬರುತ್ತವೆ. ಈ ದೈವ ಶಾಂತಿಯು ನಮ್ಮ ಮನಸ್ಸಿನ ಎಲ್ಲಾ ಆಲೋಚನೆಗಳನ್ನೂ ಕರ್ತನಲ್ಲಿ ನೆರವೇರಿಸುತ್ತದೆ.

"ನೀವೆಲ್ಲರೂ ಒಂದೇ ದೇಹಕ್ಕೆ ಸೇರಿದವರು, ಒಬ್ಬನೇ ಆತ್ಮನನ್ನು ಹೊಂದಿದವರು, ಒಂದೇ ಪದವಿಯನ್ನು ನಿರೀಕ್ಷಿಸುವುದಕ್ಕೆ ಕರೆಯಲ್ಪಟ್ಟವರು, ನಿಮ್ಮೆಲ್ಲರಿಗೂ ಕರ್ತನು ಒಬ್ಬನೇ, ಭರವಸವು ಒಂದೇ, ಸ್ನಾನ ದೀಕ್ಷೆ ಒಂದೇ, ಎಲ್ಲರಿಗೂ ತಂದೆಯಾಗಿರುವ ದೇವರು ಒಬ್ಬನೇ"(ಎಫೆಸ.4:4–6) ಇದುವೇ ಅಪೋಸ್ತಲನ ಸಾಕ್ಷಿ. ಒಂದೇ ದೀಕ್ಷಾಸ್ನಾನವಿರುವುದರಿಂದ ಅದಕ್ಕೆ ಒಂದೇ ಸೂಕ್ತವಾದ ಸಂಕೇತವಿದೆ ಎಂಬುದು ಇದನ್ನು ಅನುಸರಿಸುತ್ತದೆ. ಸಾಮಾನ್ಯವಾಗಿ ಕ್ರೈಸ್ತರೆಲ್ಲರೂ ನೀರಿನಲ್ಲಿ ಮುಣುಗುವುದು ಸತ್ಯವೇದದ ಭಾಷೆಗೆ ಸಮೀಪವಾಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಈ ಒಪ್ಪಂದಕ್ಕೆ ನಿದರ್ಶನವಾಗಿ ಬಹುಶಃ ಕ್ರಿಸ್ತನ ಮರಣದಲ್ಲಿ ನಿಜವಾಗಿಯೂ ದೀಕ್ಷಾಸ್ನಾನ ಹೊಂದಿದವರು ಅದರ ನೀರಿನ ಸಂಕೇತವನ್ನು ಹೇಗೆ ಗುರುತಿಸುವುದು ಎಂಬ ಗೊಂದಲದಲ್ಲಿ ಈ ಕೆಳಗಣ ಟೀಕೆಯನ್ನು ಮಾಡಿ ಕಡೆಗೆ ಇದು ಅಪ್ರಧಾನವಾದುದು ಎಂಬ ತೀರ್ಮಾನಕ್ಕೆ ಬಂದಿದ್ದಾರೆ.

## ಈ ಅಂಶಕ್ಕೆ ಕೆಲವೊಂದು ಸಾಕ್ಷ್ಯಾಧಾರಗಳು

**Some testimonies to the point**

ಜಾನ್ ಕಾಲ್ವಿನ್ ಎಂಬ ಪ್ರೆಸ್ಬಟೇರಿಯನ್ ಹೇಳುವುದೇನೆಂದರೆ – 'Baptizo' ಎಂಬುವ ಪದವು "ಮುಳುಗು' ಎಂಬುದನ್ನು ಸೂಚಿಸುತ್ತದೆ. ಆದುದರಿಂದ ಆದಿ ಸಭೆಯಲ್ಲಿ ಮುಳುಗಿಸಿ ದೀಕ್ಷಾಸ್ನಾನ ಮಾಡುತ್ತಿದ್ದರೆಂಬುದು ಇದರಿಂದ ಖಚಿತವಾಗುತ್ತದೆ (Institutes, Bk IV, Chap xv, 19).

ಡಾ|| ಮ್ಯಾಕ್ ನೈಟ್ ಎಂಬ ಮತ್ತೊಬ್ಬ ಪ್ರೆಸ್ಬಟೇರಿಯನ್ನನ ಪ್ರಕಾರ –"ದೀಕ್ಷಾಸ್ನಾನವನ್ನು ಹೊಂದುವ ವ್ಯಕ್ತಿಯು ನೀರೊಳಗೆ ಹೂಣಲ್ಪಡುತ್ತಾನೆ. ಕ್ರಿಸ್ತನು ತನ್ನನ್ನು ದೀಕ್ಷಾಸ್ನಾನ ಹೊಂದುವುದಕ್ಕೆ ಅಂದರೆ ನೀರಿನೊಳಗೆ ಮುಳುಗಿಸಲು ಸಮ್ಮತಿಸಿದನು."

ಡಾ|| ಫಿಲಿಪ್ ಸ್ಕಾಫ್ ಎಂಬ ಇನ್ನೊಬ್ಬ ಪ್ರೆಸ್ಬಟೇರಿಯನ್ನನು ಹೇಳುವಂತೆ ಚಿಮುಕಿಸುವುದಲ್ಲ ಮುಳುಗಿಸುವುದೇ ಪ್ರಶ್ನಾತೀತವಾಗಿ ಮೂಲವಾದ ಸಾಮಾನ್ಯ ಪದ್ಧತಿ. ಇದು ಗ್ರೀಕ್ ಪದಗಳಾದ Baptizo, Baptisma, Baptismos ಅರ್ಥಗಳಲ್ಲಿ ಇವು ಅಡಕವಾಗಿದೆ (History of the Apostolic Church p 568).

ನಂತರ 1885ರಲ್ಲಿ ಪ್ರಕಟಗೊಂಡ ಮತ್ತೊಂದು ಸಂಪುಟದಲ್ಲಿ ಆತನು ಇದರ ತುಲನೆಯ ಬಗ್ಗೆ ಬರೆಯುತ್ತಾ "ಅವುಗಳೆಲ್ಲವೂ ಚಿಮಿಕಿಸುವುದಕ್ಕಿಂತ ಮುಣುಗು ದೀಕ್ಷಾಸ್ನಾನದ ಪರವಾಗಿಯೇ ಅವೆ ಎಂಬುದನ್ನು ಎಲ್ಲಾ ವೇದಾಭ್ಯಾಸಿಗಳು, ಕೆಥೊಲಿಕರು ಮತ್ತು ಪ್ರೊಟೆಸ್ಟೆಂಟರು ಇಂಗ್ಲೀಷರು ಮತ್ತು ಜರ್ಮನೀಯರು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತಾರೆ" ಎಂದಿದ್ದಾನೆ. (Teaching of the twelve Apostles pp 55,56).

ಮಾರ್ಟಿನ್ ಲೂಥರ್ ಎಂಬುವವರು "ಬಾಪ್ಟಿಸಂ' ಎಂಬುದು ಗ್ರೀಕ್ ಪದವಾಗಿದ್ದು ಇದನ್ನು "ಮುಳುಗಿಸುವಿಕೆ' ಎಂದು ಭಾಷಾಂತರಿಸಬಹುದು. ದೀಕ್ಷಾಸ್ನಾನ ಹೊಂದುವವರನ್ನು ಒಟ್ಟಾಗಿ ನೀರಿನಲ್ಲಿ ಮುಳುಗಿಸಬೇಕೆಂದು ಹೇಳಿದ್ದಾರೆ – [Luther's works, Vol I, p 336]

ಮೆಥೋಡಿಸ್ಟರಾದ ಜಾನ್ ವೆಸ್ಲಿಯುವರು "ದೀಕ್ಷಾಸ್ನಾನದಲ್ಲಿ ಆತನೊಂದಿಗೆ ಹೂಣುವುದು ಅಪ್ರತ್ಯಕ್ಷವಾಗಿ ಪುರಾತನವಾದ ಮುಳುಗಿಸುವಿಕೆಯ ಪದ್ದತಿಯಾಗಿದೆ" ಎಂದಿದ್ದಾರೆ.

Wall ಎಂಬ ಎಪಿಸ್ಕೋಪಾಲಿಯನ್ " ಎಲ್ಲಾ ಸಾಧ್ಯತೆಗಳ ಪ್ರಕಾರ ನಮ್ಮ ರಕ್ಷಕನು ಮತ್ತು ನಿಶ್ಚಿತವಾಗಿ ಹಿಂದಿನ ಕಾಲದ ಕ್ರೈಸ್ತರು ಪಡಕೊಂಡ ದೀಕ್ಷಾಸ್ನಾನವು ಮುಳುಗಿಸುವಿಕೆಯಾಗಿತ್ತು" ಎಂದಿದ್ದಾರೆ [History of Infant Baptism, vol 1 p 571, Oxford, 1862].

Dean Stanley ಎಂಬ ಮತ್ತೊಬ್ಬ ಎಪಿಸ್ಕೋಪಾಲಿಯನ್ "ಮೊದಲ 13ನೇ ಶತಮಾನಗಳಲ್ಲಿ, ನಾವು ಹೊಸ ಒಡಂಬಡಿಕೆಯಲ್ಲಿ ಓದುವ ದೀಕ್ಷಾಸ್ನಾನ ಪದ್ಧತಿಯೇ ವಿಶ್ವವ್ಯಾಪಿಯಾಗಿತ್ತು. ಇದುವೇ ಬಾಪ್ಟೈಸ್ ಪದದ ನಿಜವಾದ ಅರ್ಥ. ಇದರಂತೆ ದೀಕ್ಷಾಸ್ನಾನ ಹೊಂದುವವರನ್ನು ನೀರಿನಲ್ಲಿ ಮುಳುಗಿಸುತ್ತಿದ್ದರು. ಎಂದಿದ್ದಾರೆ. [Christian Institutions p 17] Brenner ಎಂಬ ರೋಮನ್ ಕ್ಯಾಥೋಲಿಕ್ – ಹದಿಮೂರು ಶತಮಾನಗಳಲ್ಲಿ ದೀಕ್ಷಾ ಸ್ನಾನವು ಸಾಮಾನ್ಯವಾಗಿ ಮತ್ತು ನಿರಂತರವಾಗಿ ಒಬ್ಬ ವ್ಯಕ್ತಿಯನ್ನು ನೀರಿನಲ್ಲಿ ಮುಳುಗಿಸುವುದಾಗಿತ್ತು ಎಂದಿದ್ದಾರೆ Exhibition of the Administration of Baptism p 306]

"ಇಡೀ ವ್ಯಕ್ತಿಯನ್ನು ನೀರಿನಲ್ಲಿ ಮುಳುಗಿಸಲಾಗುತ್ತದೆ" – Kitto's Encyclopedia

"ಬಾಪ್ಟಿಸಂ" ಎಂದರೆ ಅದ್ದುವುದು ಅಥವಾ ಮುಳುಗಿಸುವುದಾಗಿದೆ - Encyclopedia Americana

"ಮೂಲದಲ್ಲಿ ಮುಳುಗಿಸುವುದರ ಮೂಲಕ ದೀಕ್ಷಾಸ್ನಾನ ನೀಡಲಾಗುತ್ತಿತ್ತು" – Brande's Encylopedia

"Baptism means Immersion" ಮುಳುಗಿಸು ಎಂಬುದಾಗಿ Smith's Bible Dictionary ಅರ್ಥೈಸುತ್ತದೆ.

"Baptizo, to dip in or under water" ನೀರಿನಲ್ಲಿ ಅಥವಾ ಒಳಗೆ ಅದ್ದು ಎಂಬುದಾಗಿ Liddel and Scott's Greek Lexicon ತಿಳಿಸುತ್ತದೆ.

"To immerse ; to sink" – ಮುಳುಗಿಸು - Robinson's Greek Lexicon.

To immerse, submerge, sink" ಒಳಗೆ ಮುಳುಗಿಸು – Greenfield's Lexicon

## ನೀರಿನ ದೀಕ್ಷಾಸ್ನಾನವನ್ನು ಯಾರು ನೆರವೇರಿಸಬಹುದು?

### Who May Administer Water Baptism

ಪ್ರತಿಷ್ಠಿಸಿಕೊಂಡವರೆಲ್ಲರೂ, ದೀಕ್ಷಾಸ್ನಾನ ಪಡಕೊಂಡವರೆಲ್ಲರೂ ಕ್ರಿಸ್ತನ ಮರಣದಲ್ಲಿ ದೀಕ್ಷಾಸ್ನಾನ ಹೊಂದಿಕೊಂಡಿದ್ದು ಅವರೆಲ್ಲರೂ "ರಾಜವಂಶಯಾಜಕತ್ವ"ಕ್ಕೆ ಸೇರಿದವರಾದುದರಿಂದ ಮತ್ತು ಕರ್ತನ ಅಭಿಷೇಕಿಸಲ್ಪಟ್ಟ ಪವಿತ್ರ ದೇಹದ ಅಂಗಗಳಾಗಿರುವುದರಿದ, ಮತ್ತಾಯ 28:19ರ ಪ್ರಕಾರ ಇವರೆಲ್ಲರೂ ಜನರಿಗೆ ಸುವಾರ್ತೆಯನ್ನು ಸಾರುವುದಕ್ಕೆ ಮಾತ್ರವಲ್ಲ, ಅಷ್ಟೇ ಸಮವಾಗಿ ಪ್ರತಿಷ್ಠೆಯ ಸಂಕೇತವಾದ ನೀರಿನ ದೀಕ್ಷಾಸ್ನಾನವನ್ನು ನೆರವೇರಿಸಲು ಅಧಿಕಾರ ಪಡೆದವರಾಗಿರುತ್ತಾರೆ. ಮತ್ತು ಅಂಥಹ ಪ್ರತಿಷ್ಠೆ ಹೊಂದಿದ ವ್ಯಕ್ತಿ ಈ ಸಂಕೇತವನ್ನು ನೆರವೇರಿಸಲು ಅನಾನುಕೂಲತೆಯಿಂದ ಅಲಭ್ಯವಾಗಿರುವಲ್ಲಿ ಪ್ರತಿಷ್ಠೆ ಹೊಂದದೇ ಇರುವ ವಿಶ್ವಾಸಿಗಳು ಅಥವಾ ಅವಿಶ್ವಾಸಿಯಾದ ಲೌಕಿಕ ವ್ಯಕ್ತಿಯಿಂದಲೂ ಇದನ್ನು ನೆರವೇರಿಸಲು ಯಾವುದೇ ವಿರೋಧದ ಧ್ವನಿ ಏಳಬಾರದು. ಯಾಕೆಂದರೆ, ಇದರ ನಿಜವಾದ ಒಪ್ಪಂದವು ದೇವರು ಮತ್ತು ತನ್ನನ್ನು ಪ್ರತಿಷ್ಠೆಗೊಳಪಡಿಸುವ ವ್ಯಕ್ತಿ ಇವರುಗಳ ನಡುವೆ ಮಾತ್ರವೇ ಇರುತ್ತದೆ; ಮತ್ತು ಈ ನೀರಿನ ದೀಕ್ಷಾಸ್ನಾನವು ನಿಜವಾದುದಲ್ಲವಾದ ಕಾರಣ, ಇದು ಕೇವಲ ಒಂದು ಚಿತ್ರಣ ಮಾತ್ರವೇ ಆಗಿರುವುದರಿಂದ ಇದನ್ನು ನೆರವೇರಿಸುವವನು ಕರ್ತನಲ್ಲ, ಕೇವಲ ಒಬ್ಬ ಮನುಷ್ಯ ಮಾತ್ರ. ಈತನು ಒಳ್ಳೆಯವನೇ ಇರಲಿ, ಕೆಟ್ಟವನೇ ಇರಲಿ ದೀಕ್ಷಾಸ್ನಾನ ಪಡಕೊಳ್ಳುವವನ ಅನುಕೂಲಕ್ಕೆ ಮತ್ತು ಸೇವೆಗೆ ತಕ್ಕ ಪ್ರತಿನಿಧಿಯಂತಿರುತ್ತಾನೆ. ಆದಾಗ್ಯೂ ಕೆಲವೊಂದು ಸಾಮಾನ್ಯ ಯೋಗ್ಯತೆ ಮತ್ತು ಕ್ರಮಗಳನ್ನು ಕ್ರೈಸ್ತ ಸಭೆಗೆ ಸಂಬಂಧಿಸಿದ ಇತರ ವಿಚಾರಗಳಲ್ಲಿದ್ದಂತೆ ಇದರಲ್ಲೂ ಅನುಸರಿಸಬೇಕಾಗುತ್ತದೆ. ಇಂತಹ ಆರಾಧನೆಗಳನ್ನು ನೆರವೇರಿಸಲು ತಕ್ಕಂತಹ ವ್ಯಕ್ತಿಗಳು ಆಯ್ಕೆಗೊಂಡ ಸಭಾ ಹಿರಿಯರು ಮಾತ್ರವೇ ಎಂದು ಇದು ಸೂಚಿಸುತ್ತದೆ.

## ಮಾತುಗಳ ಸ್ವರೂಪ

### The Form of Words

ಸತ್ಯವೇದವು ಈ ಸೇವೆಯ ವಿಷಯದಲ್ಲಿ ಉಪಯೋಗಿಸಬಹುದಾದ ಯಾವುದೇ ನಿರ್ದಿಷ್ಟ ಮಾತುಗಳನ್ನು ಸೂಚಿಸಿರುವುದಿಲ್ಲ. ಮಾತುಗಳ ಪ್ರಾಮುಖ್ಯತೆ ಪ್ರಾಥಮಿಕವಲ್ಲವೆಂದು, ಯಾವುದೇ ಮಾತುಗಳಿಲ್ಲದಿದ್ದರೂ ಈ ದೀಕ್ಷಾಸ್ನಾನ ಅಷ್ಟೇ ನ್ಯಾಯಸಮ್ಮತವಾಗಿದೆ ಎಂದು ಎಲ್ಲರೂ ಕೂಡಲೇ ತಿಳಿಯಬಹುದು. ಯಾಕೆಂದರೆ, ಈ ಹಿಂದೆಯೇ ಹೇಳಿರುವಂತೆ ನಿಜವಾದ ಒಪ್ಪಂದವು ದೇವರು ಮತ್ತು ತನ್ನನ್ನು ಪ್ರತಿಷ್ಠಿಸಿಕೊಳ್ಳುತ್ತಿರುವ ವ್ಯಕ್ತಿಯ ನಡುವೆ ಇರುವಂಥಾದ್ದು. ನೀರಿನ ದೀಕ್ಷಾಸ್ನಾನವು ಇದರ ಬಾಹ್ಯರೂಪದ ಅರಿಕೆಯಾಗಿದೆ. ಆದುದರಿಂದ ನೆರವೇರಿಸುವವನು ಏನನ್ನು ನಂಬುತ್ತಾನೋ ಅಥವಾ ಆತನು ಏನನ್ನು ನಂಬುವುದಿಲ್ಲವೋ, ಏನನ್ನು ಹೇಳುತ್ತಾನೋ, ಏನನ್ನು ಬಿಡುತ್ತಾನೋ ಎಂಬ ಪ್ರಶ್ನೆಯೇ ಇಲ್ಲಿ ಉದ್ಭವಿಸುವುದಿಲ್ಲ. ಬದಲಾಗಿ ದೀಕ್ಷಾಸ್ನಾನ ಪಡಕೊಳ್ಳುವವನ ಆಲೋಚನೆ ಮತ್ತು ಉದ್ದೇಶವು ಮಾತ್ರವೇ ಇಲ್ಲಿ ಮುಖ್ಯವಾಗಿದೆ. ಆದಾಗ್ಯೂ ನಮ್ಮ ತೀರ್ಮಾನವನ್ನು ಮತ್ತಾಯ 28:19ರ ಮತ್ತು ರೋಮಾ.6:3ರಲ್ಲಿರುವ ಅಪೋಸ್ತಲನ ಮಾತುಗಳ ಆಧಾರದ

ಮೇಲೆ ನಿರ್ಧರಿಸುವುದಾದಲ್ಲಿ ನಾವು ಈ ಕೆಳಕಂಡ ಸರಳವಾದ ಮಾತುಗಳನ್ನು ಶಿಫಾರಸು ಮಾಡುತ್ತೇವೆ: "----- (ಯಾವುದಾದರೂ ಕ್ರೈಸ್ತಹೆಸರು) ಎಂಬುವನಿಗೆ/ಎಂಬವಳಿಗೆ ತಂದೆಯ, ಮಗನ ಪವಿತ್ರಾತ್ಮನ ನಾಮದಲ್ಲಿ, ಅಧಿಕಾರಯುಕ್ತವಾಗಿ ನಾನು ಕ್ರಿಸ್ತನಲ್ಲಿ ದೀಕ್ಷಾಸ್ನಾನ ನೀಡುತ್ತೇನೆ "

## ಈ ಸಂಕೇತದ ಪುನರಾವರ್ತನೆ
## Repetition of the Symbol

ದೀಕ್ಷಾಸ್ನಾನದ ನಿಜವಾದ ಅರ್ಥವು ಬಹುಕಾಲದಿಂದ ನಮ್ಮ ದೃಷ್ಟಿಗೆ ತಪ್ಪಿಹೋಗಿರುವುದರಿಂದ, ಈಗಾಗಲೇ ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಪಡಕೊಂಡವರಿಂದ ಅವರ ದೀಕ್ಷಾಸ್ನಾನದ ನ್ಯಾಯಸಮ್ಮತಿಯ ಬಗ್ಗೆ ಮತ್ತು ಇದರ ಪುನರಾವರ್ತನೆಯು ಬೇಕೋ ಬೇಡವೋ ಎಂಬುದರ ಬಗ್ಗೆ ಅನೇಕ ರೀತಿಯ ವಿಚಾರಣೆಗಳು ಕೇಳಿಬರುತ್ತವೆ. ನಮ್ಮ ಉತ್ತರವೇನೆಂದರೆ, ಈ ಸಂಕೇತದ ಪುನರಾವರ್ತನೆಯ ಅಗತ್ಯವಿಲ್ಲ. ಮರಣ ಪರ್ಯಂತವಾದ ಸಂಪೂರ್ಣ ಸಮರ್ಪಣೆಯನ್ನು ಅನುಸರಿಸದ ಹೊರತು ಇದಕ್ಕೆ ನಾವು ನೀರಿನಲ್ಲಿ ಮಾಡುವ ಸ್ನಾನಕ್ಕಿಂತ ಅಥವಾ ಮುಳುಗುಹಾಕುವಿಕೆಗಿಂತ ಹೆಚ್ಚಾದ ಯಾವುದೇ ರೀತಿಯ ಅರ್ಥವಾಗಲೀ, ಪಾವಿತ್ರತೆಯಾಗಲೀ ಇಲ್ಲದೇ ಇರುವುದರಿಂದ ಪ್ರತಿಯೊಬ್ಬನೂ ಈ ಸಾಕ್ಷಿಗೆ ತಾನು ವಿಧೇಯನಾಗಿದ್ದೇನೋ ಎಂಬುದನ್ನು ತಾನಾಗಿಯೇ ನಿರ್ಣಯಿಸತಕ್ಕದ್ದು. ಆದರೆ ಈ ನೀರಿನ ದೀಕ್ಷಾಸ್ನಾನವು ಸಮರ್ಪಣೆ ಅಥವಾ ಮರಣದಲ್ಲಿ ದೀಕ್ಷಾಸ್ನಾನವನ್ನು ಅನುಸರಿಸುವುದಾದಲ್ಲಿ ಈ ಸಂಗತಿಯ ಬಗ್ಗೆ ಇರುವ ಜ್ಞಾನದ ಕೊರತೆ ಇರುವುದಾದರೂ ಇದರ ಪುನರಾವರ್ತನೆಯ ಅವಶ್ಯಕತೆ ಇರುವುದಿಲ್ಲ.

## ಸತ್ತವರ ದೀಕ್ಷಾಸ್ನಾನ
## Baptism for the Dead

**"ಸತ್ತವರು ಎದ್ದುಬರುವುದೇ ಇಲ್ಲವೆಂಬುದು ನಿಜವಾಗಿದ್ದರೆ ಯಾಕೆ ಅವರಿಗೋಸ್ಕರ ದೀಕ್ಷಾಸ್ನಾನ ಮಾಡಿಸಿಕೊಳ್ಳುತ್ತಾರೆ" (1 ಕೊರಿ. 15:29)**

ಅಪೋಸ್ತಲನ ಮೇಲಿನ ಮಾತುಗಳ ಅರ್ಥವನ್ನು ತಪ್ಪಾಗಿ ತಿಳುಕೊಳ್ಳುವುದು "ಕತ್ತಲ ಯುಗದಲ್ಲಿ" ಅನುಕೂಲಕರವಾದ ದೀಕ್ಷಾಸ್ನಾನಕ್ಕೆ ಎಡೆಮಾಡಿಕೊಟ್ಟಿತು: ದೀಕ್ಷಾಸ್ನಾನವಿಲ್ಲದೆ ಸತ್ತ ಕ್ರೈಸ್ತರ ಸ್ನೇಹಿತರುಗಳಿಗೆ ಪ್ರತಿನಿಧಿಯಾಗಿ ದೀಕ್ಷಾಸ್ನಾನ ನೀಡಲಾಯಿತು. ನಿಜವಾದ ದೀಕ್ಷಾಸ್ನಾನದಲ್ಲಿ ಒಳಗೊಂಡ ನಿಜವಾದ ದೃಷ್ಟಿಕೋನವು ನಮಗೆ ಇಂತಹ ಪದ್ಧತಿಯಲ್ಲಿ ಸಾಮರಸ್ಯವಿಲ್ಲದ್ದನ್ನು ತ್ವರಿತವಾಗಿ ತೋರಿಸಿಕೊಡುತ್ತದೆ. ಒಬ್ಬ ವ್ಯಕ್ತಿಯು ತನ್ನ ಸ್ವಾಭಾವಿಕ ಮತ್ತು ಆತ್ಮೀಕ ಜೀವಿತವನ್ನು ಮತ್ತೊಬ್ಬನಿಗೆ ವರ್ಗಾಯಿಸಲು ಸಾಧ್ಯವಿಲ್ಲದ ಕಾರಣ ಆತನು ಮತ್ತೊಬ್ಬನಿಗಾಗಿ ತನ್ನನ್ನು ಸಮರ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅಪೋಸ್ತಲನ ಈ ಮಾತುಗಳ ತಪ್ಪು ತಿಳುವಳಿಕೆಯು ಅನೇಕರಲ್ಲಿ ಗೊಂದಲವನ್ನು ಉಂಟುಮಾಡಿತು. ಅವರು ಅಪೋಸ್ತಲನ ಮರಣಾನಂತರ ಸ್ವಲ್ಪ ಸಮಯದಲ್ಲಿಯೇ ಯಾವರೀತಿಯಲ್ಲಿ ಈ ಕುಸಿತ ಉಂಟಾಯಿತು, ಮತ್ತು ಬಹಳಷ್ಟು ಲಂಪಟವಾದ, ವಿಚಾರಹೀನ ಸಿದ್ಧಾಂತಗಳು ಮತ್ತು ಸಂಪ್ರದಾಯಗಳು ಸೇರಿಕೊಂಡವು ಎಂಬುದನ್ನು ಗ್ರಹಿಸದಾದರು.

ಅಪೋಸ್ತಲನ ಪ್ರಸ್ತಾಪವು ಸತ್ತವರ ಪುನರುತ್ಥಾನದ ಬಗ್ಗೆಯಾಗಿದ್ದು ಆತನು ಇಲ್ಲಿ ಆ ಸಿದ್ಧಾಂತವನ್ನು ಸಂರಕ್ಷಿಸಿ ವಿವರಗೊಳಿಸುವವನಾಗಿದ್ದಾನೆ. ಸತ್ತವರ ಪುನರುತ್ಥಾನದ ಬಗ್ಗೆ ಸ್ಪಷ್ಟವಾಗಿ ಕೊರಿಂಥ ಸಭೆಯ ವಿಶ್ವಾಸದ ಮೇಲೆ ದಾಳಿ ಮಾಡಲಾಗಿತ್ತು. ನಾವೀಗ ಪರಿಗಣಿಸುತ್ತಿರುವ ಮೇಲಿನ ವಚನದಲ್ಲಿ ತನ್ನ ವಾದದ ಭಾಗವಾಗಿ ಆತನು ಅವರೆಲ್ಲರೂ ದೀಕ್ಷಾಸ್ನಾನ ಹೊಂದಿಕೊಂಡಿದ್ದಾರೆ ಮತ್ತು ಈ ದೀಕ್ಷಾಸ್ನಾನವು ಮರಣವನ್ನು ಸೂಚಿಸುತ್ತದೆ ಅಥವಾ ಸಂಕೇತಿಸುತ್ತದೆ ಎಂಬ ಸತ್ಯವನ್ನು ಅವರ ಗಮನಕ್ಕೆ ತರುವವನಾಗಿದ್ದಾನೆ ಎಂಬುದನ್ನು ಈ ಮುಂಚೆಯೇ ನೋಡಿದ್ದೇವೆ. ನಂತರದಲ್ಲಿ ಆತನು ನೂತನ ಸ್ಥಿತಿಯಿಂದಾಗಿ ಅದರ ಅಸಂಬದ್ಧತೆಯನ್ನು ತೋರಿಸುತ್ತಾ ಈ ಹೊಸ ಸಿದ್ಧಾಂತದ ಪ್ರಕಾರ ಸತ್ತವರು ಎದ್ದು ಬರುವುದಿಲ್ಲವಾದರೆ ಮರಣದ ಸಾಂಕೇತಿಕ ಪ್ರತಿಷ್ಠೆ ಮಾಡುವುದರಲ್ಲಿ ಅದಕ್ಕೆ ಯಾವ ಬೆಲೆಯಿದೆ ಅಥವ ವಿವೇಕವಿದೆ ಎಂದು ಪ್ರಶ್ನಿಸುತ್ತಾನೆ. ಅವರು ಒಬ್ಬರು ಮತ್ತೊಬ್ಬರೊಡನೆ, ಒಬ್ಬರು ಮತ್ತೊಬ್ಬರಿಗಾಗಿ ಕ್ರಿಸ್ತನ ಸಾಂಗತ್ಯದಲ್ಲಿ ಸಾಯುವಂತೆ ತಮ್ಮನ್ನು ಪ್ರತಿಷ್ಠಿಸಿಕೊಂಡಿದ್ದಾರೆ. ಈ ರೀತಿಯಲ್ಲಿ ಆತನ ದೇಹದ ಅಂಗಗಳಾಗಿ, ಮಹಾ ಪ್ರಾಯಶ್ಚಿತ್ತ ಯಜ್ಞದ ಸದಸ್ಯರಾಗಿ ಸತ್ತ ಈ ಲೋಕದ ಪರವಾಗಿ ಅತನೊಡನೆ ಸಾಯುವವರಾಗಿದ್ದಾರೆ. ಯಾಕೆಂದರೆ, ಅವರು ವಾಗ್ದಾನವಾಡಲ್ಪಟ್ಟ ಪುನರುತ್ಥಾನವನ್ನು ನಿರೀಕ್ಷಿಸುವವರಾಗಿದ್ದಾರೆ.

ಇಡೀ ಕ್ರೈಸ್ತ ಪರಿಸ್ಥಿತಿಯು ಒಟ್ಟಾಗಿ ನಿಲ್ಲುತ್ತದೆ ಅಥವಾ ಬೀಳುತ್ತದೆ ಎಂಬುದು ಅಪೋಸ್ತಲನ ವಾದವಾಗಿದೆ. ಸತ್ತವರು ಪುನರುತ್ಥಾನಗೊಳ್ಳದೇ ಹೋದಲ್ಲಿ ಕ್ರಿಸ್ತನಲ್ಲಿ ನಿದ್ರೆ ಹೋಗಿರುವವರು ಲೋಕದ ಇತರರಂತೆ ನಾಶವಾಗುತ್ತಾರೆ; ಹೀಗಾದಲ್ಲಿ, ಸಭೆಗಾಗಲೀ ಸಭೆಯ ಮೂಲಕ ಈ ಲೋಕಕ್ಕೆ ಭವಿಷ್ಯದಲ್ಲಿ ಯಾವುದೇ ನಿರೀಕ್ಷೆ ಇರುವುದಿಲ್ಲವಾದರೆ ನಾವು ನಮ್ಮ ಜೀವಿತವನ್ನು ಮರಣಪರ್ಯಂತ ಯಾಕೆ ಸಮರ್ಪಿಸಿಕೊಳ್ಳಬೇಕು? ನಾವು ಮರಣದಲ್ಲಿ ಕ್ರಿಸ್ತನೊಂದಿಗೆ ದೀಕ್ಷಾಸ್ನಾನ ಹೊಂದಿರುವ ಉದ್ದೇಶ ನಾವು ಲೋಕಕ್ಕೆ ಜೀವದಾಯಕನೂ ಅಬ್ರಹಾಮನ ಸಂತಾನದವನೂ ಆದ ಆತನೊಂದಿಗೆ ನಂತರ ಭಾಗಿಯಾಗಬಹುದು. ■

*****